# ವಿಪ್ರನುಡಿ

ಸ್ವಾವಲಂಬನೆ–ಸಂಘಟನೆ–ಸಂಸ್ಕಾರ

ಸಂಪುಟ–39 ಶೋಭಕೃತ್ ನಾಮ ಸಂವತ್ಸರ, ಆಷಾಢ–ಅಧಿಕ ಶ್ರಾವಣ ಮಾಸ, ಜುಲೈ–2023, ಸಂಚಿಕೆ–4, ಪುಟಗಳು–40 ಬೆಲೆ ರೂ.15/–

## ನೂತನ ವಿಪ್ರ ಸಚಿವರು ಹಾಗೂ ಶಾಸಕರಿಗೆ ಅಭಿನಂದನಾ ಸಮಾರಂಭ





**ಶ್ರೀ ದಿನೇಶ್ ಗುಂಡೂರಾವ್**
ಮಾನ್ಯ ಉನ್ನತ ಶಿಕ್ಷಣ ಸಚಿವರು



**ಆರ್.ವಿ. ದೇಶಪಾಂಡೆ**
ಮಾನ್ಯ ಶಾಸಕರು, ಹಳಿಯಾಳ ಕ್ಷೇತ್ರ



**ಶ್ರೀ ಎಲ್.ಎ. ರವಿ ಸುಬ್ರಮಣ್ಯ**
ಮಾನ್ಯ ಶಾಸಕರು, ಬಸವನಗುಡಿ ಕ್ಷೇತ್ರ



**ಶ್ರೀ ಉದಯ್ ಬಿ. ಗರುಡಾಚಾರ್**
ಮಾನ್ಯ ಶಾಸಕರು, ಚಿಕ್ಕಪೇಟೆ ಕ್ಷೇತ್ರ



**ಶ್ರೀ ಟಿ.ಎಸ್. ವತ್ಸ**
ಮಾನ್ಯ ಶಾಸಕರು, ಕೃಷ್ಣರಾಜ ಕ್ಷೇತ್ರ



**ವಿಶ್ವಾಸ್ ವೈದ್ಯ**
ಮಾನ್ಯ ಶಾಸಕರು, ಸವದತ್ತಿ ಕ್ಷೇತ್ರ



**ಶ್ರೀ ಸಿ.ಕೆ. ರಾಮಮೂರ್ತಿ**
ಮಾನ್ಯ ಶಾಸಕರು, ಜಯನಗರ ಕ್ಷೇತ್ರ

## ಬೆಂಗಳೂರಿನಲ್ಲಿ ಹರಿಹರಪುರ ಶ್ರೀಗಳ ಚಾತುರ್ಮಾಸ್ಯ
## ಚಿತ್ತ ಶುದ್ಧಿಗೆ ಪ್ರೇರಣೆ ನೀಡುವ ಕಾಲ ಚಾತುರ್ಮಾಸ್ಯ





## ಸ್ವರ್ಣವಲ್ಲಿ ಶ್ರೀಗಳ 33ನೇ ಚಾತುರ್ಮಾಸ್ಯ ವ್ರತ ಸಂಕಲ್ಪ



## ಮೈಸೂರಿನಲ್ಲಿ ಶ್ರೀ ಪೇಜಾವರ ಮಠದ ಶ್ರೀಗಳ 36ನೇ ಚಾತುರ್ಮಾಸ್ಯ



## ಮಂಡ್ಯ ಜಿಲ್ಲಾ ವಿಪ್ರ ಬಳಗ ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಸಮಾರಂಭ





## ಅಪೂರ್ವ ಸಾಧನೆ



**ಎಸ್. ಮುರಳಿ**
ಬಿ.ಇ. (ಸಿವಿಲ್) ಪದವಿಯಲ್ಲಿ 1ನೇ ರ್‍ಯಾಂಕ್



**ಅನಘ**
ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 3ನೇ ರ್‍ಯಾಂಕ್



**ಅದ್ವಿತಾ ಎಂ.**
ಪ.ಪೂ. ಪರೀಕ್ಷೆಯಲ್ಲಿ 6ನೇ ರ್‍ಯಾಂಕ್

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
ಜ್ಯೋತಿಷಿ ಬ॥ ಡಾ। ಮುದ್ರಾಡಿ ವಾಸುದೇವ ಭಟ್
ನಾರಾಯಣ ಭಟ್ ಹುಳೇಗಾರು
ಪ್ರಭಾಕರ ಕೆ.ಸಿ
ಕಾರ್ತಿಕ್ ಬಾಪಟ್
ಹೆಚ್.ವಿ. ಸುಬ್ಬರಾವ್

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 05. ದೂ : 26606061.

# ನಲ್ನುಡಿ

**ಪಾಪೋ ಧರ್ಮಸ್ಯ ಕರ್ತಾರಃ ಪಾದಃ ಸಾಕ್ಷಿಣಮೃಚ್ಛತಿ ।**
**ಪಾದಃ ಸಭಾಸದಃ ಸರ್ವಾನ್ ಪಾದೋ ರಾಜಾನಮೃಚ್ಛತಿ ॥**

"ಅಧರ್ಮ ಕೃತ್ಯವು ನಡೆದಾಗ, ಆ ಪಾಪದ ಕಾಲುಭಾಗ ಅದನ್ನು ಮಾಡಿದವನಿಗೂ, ಇನ್ನೊಂದು ಕಾಲುಭಾಗ ನೋಡಿದವನಿಗೂ, ಮತ್ತೆ ಕಾಲುಭಾಗ ಸಭೆಯಲ್ಲಿರುವವರಿಗೂ, ಉಳಿದ ಕಾಲುಭಾಗ ರಾಜನಿಗೂ ಸೇರುತ್ತದೆ."

ಪಾಪಿಗಳ ದುಷ್ಕೃತ್ಯವು ಸಮಾಜಕ್ಕೆ ಹೇಗೆ ತೊಂದರೆ ಉಂಟುಮಾಡುತ್ತದೆ ಎಂದು ವಿವರಿಸುವ ಮನುಸ್ಮೃತಿಯ ಶ್ಲೋಕವಿದು. ನಮ್ಮ ಪ್ರಾಚೀನರು, ನಾಗರಿಕರು, ಹಳ್ಳಿಗಾಡಿನ ಅನಕ್ಷರಸ್ಥ ಜನರು ಹಿಂದೆ ನಂಬಿದ್ದೇನೆಂದರೆ, ಯಾರಾದರೂ, ಪಾಪದ ಕೆಲಸಗಳನ್ನು ತಿಳಿದೋ, ತಿಳಿದೆಯೋ ಮಾಡಿದರೆ, ಅದರ ಫಲವನ್ನು ಅನುಭವಿಸುವವರು ಎಂಬ ನಂಬಿಕೆಯಿತ್ತು. ಈ ನಂಬಿಕೆಯ ಮೂಲಕ ದುಷ್ಟ ಆಲೋಚನೆ, ದುರ್ಬುದ್ಧಿ, ಅದರಿಂದ ಉಂಟಾಗುವ ಪಾಪಕಾರ್ಯಗಳಿಗೆ ಕಡಿವಾಣ ಹಾಕುವುದೇ ಆಗಿತ್ತು. ಹೀಗಾಗಿ ಸಮಾಜದಲ್ಲಿ ಪಾಪ ಕಾರ್ಯ ಮಾಡುವವರು ಅಲ್ಪಸಂಖ್ಯಾಕರಾಗಿದ್ದರು. ದೇಶದಲ್ಲಿ, ನ್ಯಾಯ, ನೀತಿ, ಧರ್ಮಗಳ ಪಾಲನೆ ಇತ್ತು. ಈಗಿನ ಪರಿಸ್ಥಿತಿ ಹಾಗಿಲ್ಲವೆಂದು ನಮ್ಮ ಹಿರಿಯರ ಅಭಿಪ್ರಾಯ. ಇಂದು ಅನ್ಯಾಯ, ಮೋಸ, ಲೋಭದಿಂದ ಕೂಡಿದ ಜನರು ಅಕ್ರಮವಾಗಿ ಹಣ, ಆಸ್ತಿ, ಅಧಿಕಾರಗಳನ್ನು ಪಡೆದು ವಿಜೃಂಭಿಸುತ್ತಿದ್ದಾರೆ. ಅವರ ಕೈ ಮೇಲಾಗಿ ಧರ್ಮವಂತರ, ನೀತಿವಂತರ ಮಾತಿಗೆ ಬೆಲೆ ಇಲ್ಲದಂತಾಗಿದೆ. ವೇದವ್ಯಾಸರು ತಮ್ಮ ಉದ್ಗ್ರಂಥ ಮಹಾಭಾರತದಲ್ಲಿ, ತಿಳಿಸಿದಂತೆ ಕೃತ ಅಥವಾ ಸತ್ಯಯುಗದಲ್ಲಿ ಧರ್ಮವು ಮೂರು ಕಾಲಿನಲ್ಲಿ, ತ್ರೇತಾಯುಗದಲ್ಲಿ ನಾಲ್ಕು ಕಾಲಿನಲ್ಲಿ, ದ್ವಾಪರ ಯುಗದಲ್ಲಿ, ಎರಡು ಕಾಲಿನಲ್ಲಿ ಹಾಗೂ ಕಲಿಯುಗದಲ್ಲಿ ಒಂದೇ ಕಾಲಿನಲ್ಲಿ ನಿಂತಿದೆಯಂತೆ, ಧರ್ಮದ ಪಾಡೇ ಹೀಗಾದ ಮೇಲೆ ಹುಲು ಮಾನವರ ಗತಿ ಇನ್ನೇನು? ಇಂದಿನ ಸಂದರ್ಭದಲ್ಲಿ, ಆ ಕಾಲದ ರಾಜನೆಂದರೆ ಈಗಿನ ಮಂತ್ರಿಗಳು, ಸಭಾಸದರೇ ಇಂದಿನ ಶಾಸಕರು, ಸಾಕ್ಷಿಗಳೆಂದರೆ ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವುದಲ್ಲ. ಪಾಪಕೃತ್ಯವನ್ನು ನೋಡಿದವನು, ನೋಡಿ ಏನೂ ಹೇಳದೇ ಸುಮ್ಮನಿರುವವನು, ತಡೆಯದವನು ಎಲ್ಲರೂ ಪಾಪಕೃತ್ಯದಲ್ಲಿ ಭಾಗಿಗಳು ಎಂದು ಅಶ್ವತ್ಥಾಮನು ತನ್ನ ತಂದೆ ದ್ರೋಣರ ಹತ್ಯೆಯಾದ ಸಂದರ್ಭದಲ್ಲಿ ತಿಳಿಸುತ್ತಾನೆ. (ವೇಣೀ ಸಂಹಾರ ನಾಟಕ, ಮೂರನೇ ಅಂಕ) ಮನುವಿನ ಪ್ರಕಾರ ದೇಶದಲ್ಲಿ ಏನಾದರೂ ಪಾಪಕಾರ್ಯ ಜರುಗಿದರೆ ಪ್ರತಿಯೊಬ್ಬ ಶಾಸಕನೂ, ಮಂತ್ರಿಯೂ ಹೊಣೆ. ಹೀಗೆ ಪಾಪಕಾರ್ಯವನ್ನು ಶಾಸನದ ಚೌಕಟ್ಟಿನಿಂದಾಗಲೀ, ನ್ಯಾಯಾಲಯದ ಬಲದಿಂದಾಗಿ ತಪ್ಪಿಸಿಕೊಳ್ಳಲಾಗುವುದಿಲ್ಲ.

**– ಪ್ರೊ. ಎಂ.ಕೆ. ಶ್ರೀಧರ್**

**ಸೂಚನೆ :** ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.

–ಸಂಪಾದಕ ಮಂಡಳಿ

ಹಿಂದಿನ ಸಂಚಿಕೆಯಿಂದ

# ತತ್ವ ಬೋಧ

– ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

**ಪ್ರಾರಬ್ಧಂ ಕರ್ಮ ಕಿಮ್? ಇದಂ ಶರೀರಮ್ ಉತ್ಪಾದ್ಯ ಇಹಲೋಕೇ ಏವ ಸುಖದುಃಖಾದಿಪ್ರದಂ ಯತ್ ಕರ್ಮ ತತ್ ಪ್ರಾರಬ್ಧಮ್, ಭೋಗೇನ ನಷ್ಟಂ ಭವತಿ। ಪ್ರಾರಬ್ಧಕರ್ಮಣಾಂ ಭೋಗಾದೇವ ಕ್ಷಯಃ ಇತಿ ನ್ಯಾಯಾತ್।**

**ಅನುವಾದ :** ಪ್ರಾರಬ್ಧ ಕರ್ಮ ಏನು? ಈ ಶರೀರವನ್ನು ಸೃಷ್ಟಿಸಿ. ಈ ಲೋಕದಲ್ಲೇ ಸುಖದುಃಖಾದಿಗಳನ್ನು ಕೊಡುವಂತಹ ಕರ್ಮವೇ ಪ್ರಾರಬ್ಧ. ಇದು ಭೋಗದಿಂದ ನಷ್ಟವಾಗುತ್ತದೆ. ಪ್ರಾರಬ್ಧಕರ್ಮಗಳ ಕ್ಷಯ ಭೋಗದಿಂದಲೇ ಎನ್ನುವ ನ್ಯಾಯವಿರುವುದರಿಂದ (ಹೀಗೆ ತಿಳಿಯಬೇಕು).

**ವಿವರಣೆ :** ಈ ಜನ್ಮಕ್ಕೇ ಕಾರಣವಾಗದ್ದು ಈ ಜನ್ಮದುದ್ದಕ್ಕೂ ನಮಗೆ ಸುಖದುಃಖಗಳನ್ನು ಬಂದೊದಗಿಸುವ ಕರ್ಮವು ಪ್ರಾರಬ್ಧ ಎನ್ನಲ್ಪಡುವುದು. ಸಂಚಿತದಂತೆ ಈ ಕರ್ಮವು ಜ್ಞಾನವಾದ ಕ್ಷಣದಲ್ಲಿ ನಾಶವಾಗುವುದಿಲ್ಲ. ಪ್ರಾರಬ್ಧವು ಇರುವವರೆಗೆ ಈ ಶರೀರ ಜೀವಂತವಾಗಿ ಇರುತ್ತದೆ. ಪ್ರಾರಬ್ಧವು ಮುಗಿದ ಕೂಡಲೇ ಈ ಶರೀರ ಬಿದ್ದು ಹೋಗುತ್ತದೆ.

**ಸಂಚಿತಂ ಕರ್ಮ ಬ್ರಹ್ಮೈವಾಹಮಿತಿ ನಿಶ್ಚಯಾತ್ಮಕಜ್ಞಾನೇನ ನಶ್ಯತಿ । "ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇಽರ್ಜುನ" ಇತಿ ಭಗವದ್ವಚನಾತ್ । ಕಿಂಚ ಆಗಾಮಿಕರ್ಮಣಃ ನಲಿನೀದಲಗತಜಲವತ್ ಜ್ಞಾನಿನಾಂ ಸಂಬಂಧೋ ನಾಸ್ತಿ ।**

**ಅನುವಾದ :** ಸಂಚಿತ ಕರ್ಮವು ನಾನು ಬ್ರಹ್ಮವೇ ಎನ್ನುವ ನಿಶ್ಚಯರೂಪವಾದ ಜ್ಞಾನದಿಂದ ನಾಶವಾಗುವುದು. "ಅರ್ಜುನನೇ, ಜ್ಞಾನವೆಂಬ ಅಗ್ನಿಯು ಎಲ್ಲಾ ಕರ್ಮಗಳನ್ನೂ ಭಸ್ಮಗೊಳಿಸುತ್ತದೆ." ಎನ್ನುವ ಭಗವಂತನ ವಚನವಿರುವುದರಿಂದ (ಹೀಗೆ ತಿಳಿದುಕೊಳ್ಳಬೇಕು). ಅದಲ್ಲದೆ ಕಮಲದ ಎಲೆಯಲ್ಲಿ ಬಿದ್ದ ನೀರಿನಂತೆ ಆಗಾಮಿ ಕರ್ಮದೊಂದಿಗೆ ಜ್ಞಾನಿಗಳಿಗೆ ಸಂಬಂಧವಿಲ್ಲ.

**ವಿವರಣೆ :** ಜ್ಞಾನಿಯ ಸಂಚಿತ ಕರ್ಮವು ಜ್ಞಾನವುಂಟಾದ ಕೂಡಲೇ ನಾಶವಾಗುವುದು ಎನ್ನುವುದಕ್ಕೆ "ಕ್ಷೀಯಂತೇ ಚಾಸ್ಯ ಕರ್ಮಾಣಿ" ಎನ್ನುವ ಶ್ರುತಿವಾಕ್ಯವೂ, "ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ" ಎನ್ನುವ ಭಗವದ್ಗೀತೆಯ ವಾಕ್ಯವೂ ಪ್ರಮಾಣವಾಗಿದೆ. ಸಂಚಿತ ಕರ್ಮಗಳನ್ನು ಕಳೆದುಕೊಂಡ ಜ್ಞಾನಿಗೆ ಪುನರ್ಜನ್ಮವಾಗಲಾರದು. ಜ್ಞಾನಿಯು ಕರ್ತೃತ್ವಾದಿ ಅಭಿಮಾನವನ್ನು ಕಳೆದುಕೊಂಡಿರುವುದರಿಂದ ಜ್ಞಾನವಾದ ಬಳಿಕ ಮಾಡಿದ ಕರ್ಮವು ಜ್ಞಾನಿಯನ್ನು ಸ್ಪರ್ಶಿಸಲಾರವು.

**ಕಿಂಚ ಯೇ ಜ್ಞಾನಿನಂ ಸ್ತುವಂತಿ, ಭಜಂತಿ ಅರ್ಚಯಂತಿ ಚ, ತಾನ್ ಪ್ರತಿ ಜ್ಞಾನಿಕೃತಾಗಾಮಿಪುಣ್ಯಂ ಗಚ್ಛತಿ । ಯೇ ಚ ಜ್ಞಾನಿನಂ ನಿನ್ದಂತಿ ದ್ವಿಷಂತಿ ದುಃಖಪ್ರದಾನಂ ಕುರ್ವಂತಿ, ತಾನ್ ಪ್ರತಿ ಜ್ಞಾನಿಕೃತಂ ಸರ್ವಮ್ ಆಗಾಮಿ ಕ್ರಿಯಮಾಣಪದವಾಚ್ಯಂ ಕರ್ಮ ಪಾಪಾತ್ಮಕಂ ಕರ್ಮ ಗಚ್ಛತಿ । ತಥಾ ಚ ಶ್ರುತಿಃ "ಸುಹೃದಃ ಪುಣ್ಯಕೃತ್ಯಾಂ ದ್ವಿಷಂತಃ ಪಾಪಕೃತ್ಯಾಂ ಗೃಹ್ಣಂತಿ" ಇತಿ ।**

**ಅನುವಾದ :** ಅದಲ್ಲದೆ ಜ್ಞಾನಿಯ ಸ್ತುತಿ, ಸೇವೆ ಹಾಗೂ ಪೂಜೆಯನ್ನು ಮಾಡುವವರಿಗೆ ಜ್ಞಾನಿಯಿಂದ ಮಾಡಲ್ಪಟ್ಟ ಆಗಾಮಿ ಪುಣ್ಯಕರ್ಮವು ಸೇರುವುದು. ಅಲ್ಲದೆ ಯಾರು ಜ್ಞಾನಿಯನ್ನು ನಿಂದಿಸುವರೋ, ದ್ವೇಷಿಸುವರೋ, ದುಃಖವನ್ನು ಕೊಡುವರೋ, ಅವರ ಬಳಿ ಜ್ಞಾನಿಯು ಮಾಡಿದ ಎಲ್ಲ ಪಾಪರೂಪವಾದ ಕ್ರಿಯಮಾಣವೆಂಬ ಪದದಿಂದ ಹೇಳಲ್ಪಡುವ ಆಗಾಮಿ ಕರ್ಮವು ಹೋಗುವುದು. ಇದನ್ನು "ಸುಹೃದರು ಪುಣ್ಯಕೃತ್ಯವನ್ನೂ ದ್ವೇಷಿಸುವವರು ಪಾಪಕೃತ್ಯಗಳನ್ನೂ ಪಡೆಯುವರು" ಎನ್ನುವ ಶ್ರುತಿಯು ತಿಳಿಸುತ್ತದೆ.

**ವಿವರಣೆ :** ಜ್ಞಾನಿಯು ಮಾಡಿದ ಪುಣ್ಯ ಹಾಗೂ ಪಾಪಗಳು ಜ್ಞಾನಿಗೆ ಅಂಟಿಕೊಳ್ಳಲಾರವು ಎಂದು ಹಿಂದೆ ಹೇಳಲಾಗಿತ್ತು. ಹಾಗಾದರೆ ಆ ಪುಣ್ಯಪಾಪಗಳು ಎಲ್ಲಿ ಹೋಗುತ್ತವೆ ಎನ್ನುವುದಕ್ಕೆ ಇದು ಉತ್ತರ. ಜ್ಞಾನಿಯನ್ನು ನಿಂದಿಸುವುದು, ದ್ವೇಷಿಸುವುದು ಹಾಗೂ ಜ್ಞಾನಿಗೆ ದುಃಖವನ್ನು ಕೊಡುವುದು ಅತ್ಯಧಿಕ ಪಾಪವನ್ನು ಕೊಡುವುದಾಗಿದ್ದರಿಂದ ಅಂತಹ ಕರ್ಮಗಳನ್ನು ಮಾಡಬಾರದು. ಜ್ಞಾನಿಯ ಸ್ತುತಿ, ಸೇವೆ ಹಾಗೂ ಪೂಜೆ ಪುಣ್ಯಪ್ರದವಾದ್ದರಿಂದ ಅವುಗಳನ್ನು ಶ್ರದ್ಧೆಯಿಂದ ಮಾಡಬೇಕು ಎನ್ನುವುದು ಇದರ ಆಶಯ. "ತಸ್ಮಾದಾತ್ಮಜ್ಞಂ ಹ್ಯರ್ಚಯೇದ್ ಭೂತಿಕಾಮಃ ।" ಎನ್ನುವ ಶ್ರುತಿವಾಕ್ಯವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

**ತಥಾ ಚ ಆತ್ಮವಿತ್ ಸಂಸಾರಂ ತೀರ್ತ್ವಾ ಬ್ರಹ್ಮಾನಂದಮ್ ಇಹೈವ ಪ್ರಾಪ್ನೋತಿ। ತರತಿ ಶೋಕಮ್ ಆತ್ಮವಿತ್" ಇತ್ಯಾದಿ ಶ್ರುತೇಃ।**

**ತನುಂ ತ್ಯಜತು ವಾ ಕಾಶ್ಯಾಂ ಶ್ವಪಚಸ್ಯ ಗೃಹೇಽಥವಾ। ಜ್ಞಾನಸಂಪ್ರಾಪ್ತಿಸಮಯೇ ಮುಕ್ತೋಽಸೌ ವಿಗತಾಶಯಃ॥ ಇತಿ ಸ್ಮೃತೇಃ ಚ।**

**ಅನುವಾದ :** ಈ ರೀತಿ ಆತ್ಮಜ್ಞಾನಿಯು ಸಂಸಾರವನ್ನು ದಾಟಿ ಇಲ್ಲೇ ಬ್ರಹ್ಮಾನಂದವನ್ನು ಪಡೆಯುತ್ತಾನೆ. "ಆತ್ಮಜ್ಞಾನಿಯು ಶೋಕವನ್ನು ದಾಟುವವನು" ಇತ್ಯಾದಿ ಶ್ರುತಿಗಳಿಂದ ಹಾಗೂ "(ಜ್ಞಾನಿಯು) ತನ್ನ ಶರೀರವನ್ನು ಕಾಶಿಯಲ್ಲಿ ತ್ಯಜಿಸಲಿ ಅಥವಾ ಚಾಂಡಾಲನ ಮನೆಯಲ್ಲಿ ತ್ಯಜಿಸಲಿ, ಕರ್ಮಗಳಿಂದ ಮುಕ್ತನಾದ ಅವನು ಜ್ಞಾನವುಂಟಾದ ಸಮಯದಲ್ಲೇ ಮುಕ್ತನಾಗಿರುವನು." ಇತ್ಯಾದಿ ಸ್ಮೃತಿಗಳಿಂದಲೂ (ಹೀಗೆ ತಿಳಿಯಬೇಕು).

**ವಿವರಣೆ :** ಜ್ಞಾನಿಯು ಜ್ಞಾನಪ್ರಾಪ್ತಿಯ ಸಮಯದಲ್ಲೇ ಮುಕ್ತನಾಗುವನು. ಜ್ಞಾನವಾದ ಬಳಿಕ ಮುಕ್ತಿಯನ್ನು ಪಡೆಯಲು ಕಾಲದ ಅಪೇಕ್ಷೆ ಇರುವುದಿಲ್ಲ. ಅದಲ್ಲದೆ ಮೋಕ್ಷವನ್ನು ಪಡೆಯಲು ಜ್ಞಾನವೇ ಸಾಧನವಾಗಿರುವುದರಿಂದ ಮುಮುಕ್ಷುಗಳು ಆತ್ಮಜ್ಞಾನಕ್ಕಾಗಿ ಪ್ರಯತ್ನಿಸಬೇಕು. ಹಾಗಾಗಿ ಆತ್ಮತತ್ವವನ್ನು ಪ್ರತಿಪಾದಿಸುವ ಈ ಗ್ರಂಥದ ರಚನೆಯು ಸಾರ್ಥಕವಾಗಿದೆ.

**॥ ಇತಿ ತತ್ತ್ವಬೋಧಃ ಸಮಾಪ್ತಃ ॥**

ಇಲ್ಲಿಗೆ ತತ್ತ್ವಬೋಧ ಎನ್ನುವ ಗ್ರಂಥವು ಪೂರ್ಣವಾಯಿತು.

# ಅಧ್ಯಕ್ಷರ ನುಡಿ



**ವಿಪ್ರ ಬಾಂಧವರಿಗೆ ನನ್ನ ನಮಸ್ಕಾರಗಳು,**

ಇತ್ತೀಚಿಗೆ ನೂತನವಾಗಿ ನಾಮಕಿಂತರಾದ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳಿಗೆ ಕೆಲವೊಂದು ಜವಾಬ್ದಾರಿಯನ್ನು ವಹಿಸಿ ಆಯಾ ಕ್ಷೇತ್ರದಲ್ಲಿ ತಮ್ಮ ಕೆಲಸವನ್ನು ನಿರ್ವಹಿಸಲು ಸಹಕಾರಿಯಾಗುವಂತೆ ತಮ್ಮದೇ ಆದ ಉಪ ಸಮಿತಿಗಳನ್ನು ರಚಿಸಿ ಕಾರ್ಯ ಪ್ರವೃತ್ತರಾಗುವಂತೆ ತಿಳಿಸಿರುವ ವಿಷಯ ತಮ್ಮಲ್ಲಿ ಅನೇಕರ ಗಮನಕ್ಕೆ ಬಂದಿರಬೇಕು. ಅದರಂತೆ ಕೆಲವರು ಈಗಾಗಲೇ ತಮಗೆ ವಹಿಸಿದ ಕೆಲಸದಲ್ಲಿ ಕಾರ್ಯ ಪ್ರವೃತ್ತರಾಗಿರುವುದು ಸಂತಸದ ವಿಷಯ ಹಾಗು ಹೀಗೆ ರಚಿಸಲ್ಪಟ್ಟ ತಂಡಕ್ಕೆ ತಮ್ಮ ಕಾರ್ಯವ್ಯಾಪ್ತಿಯಲ್ಲಿನ ಕಾರ್ಯಕ್ರಮಗಳ ಆಯೋಜನೆಗಳಿಗೆ ಹಾಗು ಸಂಘಟನೆಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದ್ದು ಅವರು ಕಾಲ ಕಾಲಕ್ಕೆ ಸಮಾಲೋಚನಾ ಸಭೆಗಳನ್ನು ಕರೆದು ಸಮಾಜ ಬಾಂಧವರೊಡನೆ ನಿರಂತರ ಸಂಪರ್ಕದಲ್ಲಿದ್ದು ಅವರ ಕುಂದು ಕೊರತೆಗಳಿಗೆ ಮಹಾಸಭೆಯ ಚಟುಟವಟಿಕೆಗಳ ಇತಿಮಿತಿಯೊಳಗೆ ಸೂಕ್ತವಾಗಿ ಸ್ಪಂದಿಸಬೇಕೆಂದು ನಿರ್ದೇಶಿಸಲಾಗಿದೆ. ಆದ್ದರಿಂದ ಈ ಸಮಿತಿಗಳು ಮಹಾಸಭೆಯ ಹಿತದೃಷ್ಟಿಯಿಂದ ಯಾವುದೇ ರೀತಿಯ ಸಮಾಲೋಚನಾ ಹಾಗು ಸಂಘಟನಾ ಸಭೆಗಳನ್ನು ನಡೆಸಲು ಸಂಪೂರ್ಣವಾಗಿ ಸ್ವತಂತ್ರರಾಗಿರುತ್ತಾರೆ ಎಂದು ಈ ಮೂಲಕ ತಿಳಿಯ ಬಯಸುತ್ತೇನೆ ಹಾಗು ತಾವು ಕೂಡ ಇವರೊಡನೆ ಕೈಜೋಡಿಸಿ ಮಹಾಸಭೆಯ ಹಾಗು ವಿಪ್ರರ ಏಳಿಗೆಗೆ ಶ್ರಮಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಮುಖ್ಯವಾಗಿ ಬೆಂಗಳೂರು ಮಹಾನಗರದ ಸಂಘಟನೆಯ ಉಸ್ತುವಾರಿ ವಹಿಸಿಕೊಂಡಿರುವ ಉಸ್ತುವಾರಿ ತಂಡ ಹಾಗು ಗುಲ್ಬರ್ಗದ ಜಿಲ್ಲಾ ಸಂಘಟನೆಯ ಉಸ್ತುವಾರಿ ವಹಿಸಿಕೊಂಡಿರುವ ಉಸ್ತುವಾರಿ ತಂಡವು ಈ ನಿಟ್ಟನಲ್ಲಿ ಒಂದೇ ವಾರದಲ್ಲಿ ಕಾರ್ಯ ಪ್ರವೃತ್ತರಾಗಿರುವುದು ಅತ್ಯಂತ ಸಂತೋಷದ ವಿಷಯ. ಈ ಎರಡು ಉಸ್ತುವಾರಿ ತಂಡದಂತೆ ಉಳಿದೆಲ್ಲ ತಂಡವು ಶೀಘ್ರವಾಗಿ ಕಾರ್ಯಪ್ರವೃತ್ತರಾಗುತ್ತೀರೆಂದು ಭಾವಿಸುತ್ತೇನೆ.

ಅದಲ್ಲದೆ ಇತ್ತೀಚಿನ ದಿನಗಳಲ್ಲಿ ನಾವುಗಳು ಕಂಡು ಕೊಂಡಂತೆ ಮಹಾಸಭೆ ವ್ಯಾಪ್ತಿ ಬೆಂಗಳೂರು ನಗರದಿಂದಾಚೆಗೂ ವಿಸ್ತಾರವಾಗುತ್ತಿರುವುದು ಸಂತಸದ ವಿಷಯ. ಆದರೆ ಬೆಂಗಳೂರು ಮಹಾನಗರದ ಅಘಾದತೆ ವ್ಯಾಪ್ತಿ ವಿಸ್ತಾರ ಹೋಲಿಸಿದರೆ ಮಹಾಸಭೆಯ ಕಾರ್ಯಕ್ರಮಗಳು ಬೆಂಗಳೂರಿನ ದಕ್ಷಿಣದ ಹೊರತು ಪಡಿಸಿ ಉಳಿದ ಕ್ಷೇತ್ರಗಳಿಗೆ ಅಷ್ಟಾಗಿ ವಿಸ್ತಾರವಾಗದೆ ಇರುವುದು ನಮಗೆಲ್ಲರಿಗೂ ತಿಳಿದ ವಿಷಯವೇ ಸರಿ. ಈ ನಿಟ್ಟನಲ್ಲಿ ಪ್ರಾಯೋಗಿಕವಾಗಿ ಬೆಂಗಳೂರು ಉತ್ತರ ವಲಯಕ್ಕೆ ಸಂಚಾಲಕರನ್ನು ನೇಮಿಸಲಾಗಿತ್ತು ಹಾಗು ಕಳೆದ ಒಂದು ಒಂದೂವರೆ ವರ್ಷದ ಅವಧಿಯಲ್ಲಿ ಉತ್ತರ ವಲಯದ ಸಂಚಾಲಕರು ಉತ್ತಮವಾದ ಕೆಲಸವನ್ನು ನಿರ್ವಹಿಸಿ ಬೆಂಗಳೂರು ಉತ್ತರ ವಲಯದ ವಿಪ್ರರಿಗೂ ಮಹಾಸಭೆಯ ಕಾರ್ಯಕ್ರಮ ತಲುಪುವಂತೆ ಮಾಡಿದ್ದಾರೆ, ಈ ಎಲ್ಲ ಅಂಶವನ್ನು ಗಮನಿಸಿ ಬೆಂಗಳೂರು ಮಹಾನಗರ ಉಸ್ತುವಾರಿ ಹಾಗು ಉತ್ತರ ವಲಯ ಸಂಚಾಲಕರಿಗೆ ಬೆಂಗಳೂರಿನ 28 ವಿಧಾನ ಸಭಾ ಕ್ಷೇತ್ರಗಳಲ್ಲೂ ಮಹಾಸಭೆಯ ಕಾರ್ಯಕ್ರಮ ತಲುಪುವಂತೆ ಮಾಡಬೇಕೆಂದು ಆದೇಶಿಸಲಾಗಿದೆ. ಈ ನಿಟ್ಟಿನಲ್ಲಿ ತಂಡವು ಸಂಪೂರ್ಣವಾಗಿ ಕಾರ್ಯಪ್ರವೃತ್ತರಾಗಿದ್ದು ಮುಂದಿನ ದಿನಗಳಲ್ಲಿ ಬೆಂಗಳೂರು ಮಹಾನಗರದಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳಲು ರೂಪು ರೇಷೆಗಳನ್ನು ಸಿದ್ಧಗೊಳಿಸುತ್ತಿದೆ, ಈ ನಿಟ್ಟಿನಲ್ಲಿ ತಾವೆಲ್ಲರೂ ಮಹಾನಗರದ ಉಸ್ತುವಾರಿ ತಂಡದೊಂದಿಗೆ ಸಂಪೂರ್ಣವಾಗಿ ಕೈ ಜೋಡಿಸಿ ಬೆಂಗಳೂರು ನಗರದಾದ್ಯಂತ ಮಹಾಸಭೆ ಹಾಗು ಮಹಾಸಭೆಯ ಕಾರ್ಯಕ್ರಮಗಳು ಎಲ್ಲ ವಿಪ್ರರ ಮನೆಮಾತಾಗುವಂತೆ ಮಾಡಬೇಕೆಂದು ನಿಮ್ಮಲ್ಲಿ ಕೇಳಿ ಕೊಳ್ಳುತ್ತಿದ್ದೇನೆ.

ವಿಶೇಷವಾಗಿ ವಿವಿಧ ಬಡಾವಣೆಗಳಲ್ಲಿ ವಾಸವಾಗಿರುವ ಬೆಂಗಳೂರಿನ ಕಾರ್ಯಕಾರಿ ಸಮಿತಿ ಸದಸ್ಯರು ಹಾಗು ಪದಾಧಿಕಾರಿಗಳು ಸ್ವಯಂ ಪ್ರೇರಣೆಯಿಂದ ಮಹಾನಗರದ ಉಸ್ತುವಾರಿ ಪದಾಧಿಕಾರಿಗಳೊಂದಿಗೆ ಸಂಪರ್ಕ ಬೆಳಸಿ ಅಲ್ಲಲ್ಲಿ ಮಹಾಸಭೆಯ ಯೋಜನೆಗಳು ತಲಪುವಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಿಮ್ಮಲ್ಲಿ ಕೇಳಿ ಕೊಳ್ಳುತೇನೆ. ಆ ಮೂಲಕ ವಿಪ್ರ ಸಂಘಟನೆಯಲ್ಲಿ ಹೊಸದೊಂದು ಮನ್ವಂತರಕ್ಕೆ ನಾಂದಿ ಹಾಡಬೇಕು ಆ ಬದಲಾವಣೆಯ ಹರಿಕಾರರು ನೀವುಗಳಾಗಬೇಕೆಂಬುದು ಮಹಾಸಭೆಯ ಹೆಬ್ಬಯಕೆ.

ಮತ್ತಷ್ಟು ಸಂಘಟನೆಯ ಹಾಗು ಹಲವಾರು ಕಾರ್ಯಕ್ರಮಗಳ ವಿಷಯದೊಂದಿಗೆ ಮುಂದಿನ ಸಂಚಿಕೆಯಲ್ಲಿ ಮತ್ತೆ ಭೇಟಿಯಾಗೋಣ.

**ಅಶೋಕ ಹಾರನಹಳ್ಳಿ**
ಅಧ್ಯಕ್ಷರು,

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ. ಬಿಸಿಲಿನ ಬೇಗೆ ಕಳೆದು ಆಷಾಢ ಮಾಸ ಬಂದಿದೆ. ಈ ಮಾಸದ ಶುಕ್ಲಪಕ್ಷದ ಏಕಾದಶಿಯಿಂದ ಪ್ರಾರಂಭಿಸಿ ಕಾರ್ತಿಕ ಶುದ್ಧ ಉತ್ಥಾನ ದ್ವಾದಶಿವರೆಗೆ 'ಚಾತುರ್ಮಾಸ್ಯ' ಎಂದು ಭಾರತೀಯ ಸಂಪ್ರದಾಯದಲ್ಲಿ ಕರೆಯಲಾಗಿದೆ. ಈ ನಾಲ್ಕು ತಿಂಗಳು ಸ್ವಾಮಿಗಳು, ಯತಿಗಳು ಚಾತುರ್ಮಾಸ್ಯ ವ್ರತವನ್ನು ಕೈಗೊಂಡು ಜಪ-ತಪ, ಪೂಜೆ-ಹೋಮ, ಪುನಸ್ಕಾರಗಳಲ್ಲಿ ತೊಡಗಿ ಜನಕಲ್ಯಾಣ, ಲೋಕಕಲ್ಯಾಣ ಧಾರ್ಮಿಕ ವಿಧಿಗಳಲ್ಲಿ ತೊಡಗುತ್ತಾರೆ. ಶಿಷ್ಯವೃಂದವು ಅವರ ಆಶೀರ್ವಾದ ಅನುಗ್ರಹಕ್ಕೆ ಪಾತ್ರರಾಗುತ್ತಾರೆ. ಸಂಪ್ರದಾಯಸ್ಥ ವನಿತೆಯರು ಹಲವಾರು ರೀತಿಯ ವ್ರತಾಚರಣೆಯಲ್ಲಿ ತೊಡಗುತ್ತಾರೆ. ಮನೆಗಳಲ್ಲಿ ಸದಾ ಹಬ್ಬದ ವಾತಾವರಣವೇ ! ಈ ಪವಿತ್ರ ಕಾಲದಲ್ಲಿ, ಗುರುಪೂರ್ಣಿಮೆ, ನಾಗರ ಚತುರ್ಥಿ, ನಾಗಪಂಚಮಿ, ಕೃಷ್ಣ ಜನ್ಮಾಷ್ಟಮಿ, ಉಪಾಕರ್ಮ, ರಕ್ಷಾಬಂಧನ್, ಗೌರಿ-ಗಣೇಶ ವ್ರತಗಳು, ನವರಾತ್ರಿ, ದೀಪಾವಳೀ ಉತ್ಸವಗಳ ಸಡಗರ. ಮಹಾರಾಷ್ಟ್ರದಲ್ಲಿ ಮಾರ್ಗಶಿರ ಮಾಸದ ಶುಕ್ಲ ಪಕ್ಷದ ಷಷ್ಠಿಯಂದು ಚಂಪಾಷಷ್ಠೀ ಆಚರಿಸಲಾಗುತ್ತದೆ. ಪುರಾಣಗಳ ಒಕ್ಕಣೆಯ ಪ್ರಕಾರ ಮಹಾವಿಷ್ಣುವು ತನ್ನ ವಾಹನ ಆದಿಶೇಷನ ಮೇಲೆ ಮಲಗಿ ಯೋಗನಿದ್ರೆಯಲ್ಲಿ ತೊಡಗುತ್ತಾನೆ. ಅಸುರ ಚಕ್ರವರ್ತಿ ಬಲಿಯು ನಾಲ್ಕು ತಿಂಗಳು ರಾಜನಾದ ಇಂದ್ರನಿಂದ ಅಧಿಕಾರವನ್ನು ಸೆಳೆದಮೇಲೆ ಎಲ್ಲಾ ದೇವತೆಗಳು ಮಹಾವಿಷ್ಣುವಿನ ಮೊರೆ ಹೊಗುತ್ತಾರೆ. ಆಗ ಮಹಾವಿಷ್ಣುವು ವಾಮನನಾಗಿ ಅವತಾರ ತಾಳಿ, ಭೂಲೋಕಕ್ಕೆ ಬಂದು ಬಲಿಯಲ್ಲಿ ಮೂರು ಪಾದ ನೆಲವನ್ನು ಬೇಡಿ, ಒಂದು ಹೆಜ್ಜೆಯಿಂದ ಭೂಲೋಕವನ್ನೆಲ್ಲಾ ವ್ಯಾಪಿಸಿ, ಎತ್ತರವಾಗಿ ಬೆಳೆದು, ಆಕಾಶವನ್ನು ವ್ಯಾಪಿಸಿ, ಮೂರನೇ ಹೆಜ್ಜೆಯನ್ನು ಬಲಿಯ ತಲೆಯ ಮೇಲಿಟ್ಟು ಪಾತಾಳಕ್ಕೆ ತಳ್ಳುತ್ತಾನೆ ಹಾಗೂ ಭಕ್ತನಾದ ಬಲಿಗೆ ವರ ಕೇಳಿಕೊಳ್ಳಲು ಸೂಚಿಸುತ್ತಾನೆ.

ಪಾತಾಳದಲ್ಲಿ ತನ್ನೊಂದಿಗೆ ವಿಷ್ಣುವು ಇರಲೆಂದು ಬಲಿಯು ಕೇಳಿಕೊಳ್ಳಲು ವಿಷ್ಣುವು ಸಮ್ಮತಿಸುತ್ತಾನೆ. ಈ ನಿಲುವಿನಿಂದಾಗಿ ದೇವತೆಗಳಿಗೆ, ಲಕ್ಷ್ಮಿಗೆ ರಕ್ಷಣೆ ಕಷ್ಟವಾಗಿ ಅವಳು ಒಂದು ಉಪಾಯ ಹೂಡಿ ಕೇವಲ ನಾಲ್ಕು ತಿಂಗಳು ಮಾತ್ರ ವಿಷ್ಣುವು ಪಾತಾಳದಲ್ಲಿದ್ದು ಯೋಗನಿದ್ರೆಯಲ್ಲಿ ತೊಡಗುವಂತೆ ಮಾಡುವುದರಲ್ಲಿ ಯಶಸ್ವಿಯಾಗುತ್ತಾಳೆ. ಶೈವ ಸಂಪ್ರದಾಯದಲ್ಲಿ ಕ್ಷೀರ ಸಮುದ್ರ ಮಥನ ಸಂದರ್ಭದಲ್ಲಿ ಹಾಲಾಹಲವೆಂಬ ವಿಷ ಉತ್ಪತ್ತಿಯಾಯಿತು. ಈಶ್ವರನು ಚಾತುರ್ಮಾಸ್ಯ ಸಮಯದಲ್ಲಿ ಈ ವಿಷವನ್ನು ಕುಡಿದು ಜಗತ್ತನ್ನು ಕಾಪಾಡಿದನೆಂಬ ಕಥೆಯಿದೆ. ಜೈನಮತ ಧರ್ಮದಲ್ಲೂ ಚಾತುರ್ಮಾಸ್ಯ ವ್ರತವಿದೆ. ಈ ತಿಂಗಳುಗಳಲ್ಲಿ ಮಳೆಗಾಲವಾಗಿ ಹಲವು ರೀತಿಯ ಕ್ರಿಮಿ-ಕೀಟಗಳು ಉತ್ಪತ್ತಿಯಾಗುತ್ತವೆ. ಅವು ಕಣ್ಣಿಗೆ ಕಾಣುವುದಿಲ್ಲ. ಅವುಗಳನ್ನು ವಿನಾಕಾರಣ ಹಿಂಸಿಸಬೇಕಾಗುತ್ತದೆ ಎಂದು ಜೈನಮುನಿಗಳು ಒಂದು ಸ್ಥಳದಲ್ಲಿ ಕುಳಿತು ವ್ರತಗಳಲ್ಲಿ ತೊಡಗುತ್ತಾರೆ. ಗೌತಮ ಬುದ್ಧನು ಈ ಸಮಯದಲ್ಲಿ ಬಿಂಬಸಾರ ರಾಜನ ರಾಜಧಾನಿ ರಾಜಗೃಹದಲ್ಲಿದ್ದು, ಧರ್ಮೋಪದೇಶ ಮಾಡಿದನು. ವೇದವ್ಯಾಸರು ಈ ಸಮಯದಲ್ಲೇ ಗಹನವಾದ ಬ್ರಹ್ಮಸೂತ್ರಗಳನ್ನು ರಚಿಸಿದ್ದು, ಈ ಚಾತುರ್ಮಾಸ್ಯದಲ್ಲಿ ಕೆಲವು ತರಕಾರಿಗಳು, ಮೊಸರು, ಹಾಲು, ದ್ವಿದಳ ಧಾನ್ಯಗಳ ಆಹಾರ ಸೇವನೆ ನಿಷಿದ್ಧ. ಒಟ್ಟಿನಲ್ಲಿ ಆಸ್ತಿಕ ಭಾರತೀಯರ, ವಿಪ್ರರ ಜೀವನದಲ್ಲಿ ಬರುವ ಚಾತುರ್ಮಾಸ್ಯದ ಹಬ್ಬ ವ್ರತಗಳು, ಪೂಜೆಗಳು ಧಾಮಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ ಬೆಳಗಿವೆ, ವ್ಯಕ್ತಿ-ಸಮಾಜ-ದೇಶದ ಶ್ರೇಯೋಭಿವೃದ್ಧಿಗೆ ಸಹಕರಿಯಾಗಿವೆ.

ವಂದನೆಗಳೊಂದಿಗೆ,

**ಪ್ರೊ. ಎಂ.ಕೆ. ಶ್ರೀಧರ್**
– ಪ್ರಧಾನ ಸಂಪಾದಕರು


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

# ಬೆಂಗಳೂರಿನಲ್ಲಿ ನಡೆದ ಕಾರ್ಯಕಾರಿಣಿಯ ಈ ಸಾಲಿನ ಪ್ರಥಮ ಸಭೆ




ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ 2023–24ನೇ ಸಾಲಿನ ಕಾರ್ಯನಿರ್ವಾಹಕ ಸಮಿತಿಯ ಪ್ರಥಮ ಸಭೆಯು ದಿನಾಂಕ 24.06.2023ನೇ ಶನಿವಾರ ಬೆಳಿಗ್ಗೆ 11.00 ಘಂಟೆಗೆ ಬೆಂಗಳೂರಿನ ಬನಶಂಕರಿ 2ನೇ ಹಂತದಲ್ಲಿರುವ **ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಕೇಂದ್ರ ಕಛೇರಿ ಗಾಯತ್ರಿ ಭವನದಲ್ಲಿ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಘನ ಅಧ್ಯಕ್ಷತೆಯಲ್ಲಿ** ಜರುಗಿತು. ಈ ಸಭೆಗೆ ರಾಜ್ಯಾಧ್ಯಕ್ಷರಿಂದ ನೇಮಿಸಲ್ಪಟ್ಟ ಪದಾಧಿಕಾರಿಗಳು, ಸದಸ್ಯರು ಆಗಮಿಸಿದ್ದರು. ಸೂಚನಾ ಪತ್ರದಲ್ಲಿ ನಮೂದಿಸಿದ ವಿಷಯ ಸೂಚಿಯನುಸಾರ ಸಭೆಯು ನಡೆಯಿತು.

**ಕಾರ್ಯಕಾರಿ ಸಮಿತಿ ಪ್ರಥಮ ಸಭೆಯ ನಡಾವಳಿಗಳು :**

1. **ವೇದಘೋಷ :** ಶ್ರೀ ಸುರೇಶ್ ಶಾಸ್ತ್ರಿ ತಂಡದವರಿಂದ ವೇದಘೋಷ ನಡೆಯಿತು.
2. **ಪ್ರಾರ್ಥನೆ :** ಶ್ರೀಮತಿ ಶ್ವೇತ ಎಸ್. ರಾವ್ ಪ್ರಾರ್ಥನೆ ನಡೆಸಿಕೊಟ್ಟರು.
3. ಮಹಾಸಭಾಧ್ಯಕ್ಷರಿಗೆ ಖಜಾಂಚಿ ಶ್ರೀ ವೆಂಕಟೇಶ್ ಎಸ್. ನಾಯಕ್ ಗಾಯತ್ರಿ ಮಾಲೆಯನ್ನು ತೊಡಿಸಿ, ಸಭೆಯ ಅಧ್ಯಕ್ಷತೆ ವಹಿಸಲು ಕೋರಿದರು.
4. **ಸ್ವಾಗತ :** ನೂತವಾಗಿ ಉಪಾಧ್ಯಕ್ಷರಾಗಿ ನೇಮಕಗೊಂಡಿರುವ ಶ್ರೀ ಕೆ.ಎನ್. ಛಾಯಾಪತಿ ಸ್ವಾಗತ ಭಾಷಣ ಮಾಡಿದರು. ಸುಮಾರು 1 1/2 ವರ್ಷದಿಂದ ಕಾಲಿಗೆ ಚಕ್ರ ಕಟ್ಟಿಕೊಂಡು ವಿಪ್ರ ಸಂಘಟನೆಯೊಂದಿಗೆ ಮಹಾಸಭೆಯನ್ನು ಸರಿಯಾದ ಪಥದಲ್ಲಿ ಕೊಂಡೊಯ್ಯುತ್ತಿರುವ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿರವರಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಪ್ರಧಾನ ಕಾರ್ಯದರ್ಶಿ, ಖಜಾಂಚಿ, ಉಪಾಧ್ಯಕ್ಷರೆಲ್ಲರನ್ನೂ ಹಾಗೂ ವಲಯ ಉಪಾಧ್ಯಕ್ಷರು, ಸಂಚಾಲಕರು, ಪದಾಧಿಕಾರಿಗಳನ್ನು, ರಾಜ್ಯಾದಾದ್ಯಂತದಿಂದ ಆಗಮಿಸಿರುವ ಎಲ್ಲ ಕಾರ್ಯಕಾರಿಣಿ ಸದಸ್ಯರಿಗೂ ಹೃತ್ಪೂರ್ವಕವಾಗಿ ಸ್ವಾಗತಿಸಿ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂತೆ ಕೋರಿದರು.
5. **ಶ್ರದ್ಧಾಂಜಲಿ :** ಖಜಾಂಚಿಗಳಾದ ಶ್ರೀ ವೆಂಕಟೇಶ್ ಎಸ್. ನಾಯಕ್‌ರವರು ಇತ್ತೀಚೆಗೆ ನಮ್ಮನ್ನಗಲಿದ ವಿಪ್ರಬಾಂಧವರ ಗುಣಗಾನ ಮಾಡಿ ಶ್ರದ್ಧಾಂಜಲಿಯನ್ನು ಅರ್ಪಿಸಲು ಸಭೆಯನ್ನು ಕೋರಿದರು.

1. ಶ್ರೀ ಡಿ.ಆರ್. ಶ್ರೀಕಂಠಯ್ಯ, ಬೆಂಗಳೂರು : ಮಹಾಸಭೆಯ ಮಾಜಿ ಉಪಾಧ್ಯಕ್ಷರು, ಖ್ಯಾತ ಕೈಗಾರಿಕೋದ್ಯಮಿಗಳು
2. ಶ್ರೀ ರಾಮಭಟ್ಟರು, ಶಿವಮೊಗ್ಗ : ವೈದಿಕ ವಿದ್ವಾಂಸರು, ಸಾವಿರಾರು ಗಣಹೋಮಗಳ ಪ್ರಧಾನ ಋತ್ವಿಜರು.
3. ಶ್ರೀಮತಿ ಶಾರದಾ ಶಾಮಣ್ಣ, ಬೆಂಗಳೂರು: ಖ್ಯಾತ ಲೇಖಕರು, ವಿಪ್ರನುಡಿಯಲ್ಲಿ ಮೂರು ದಶಕಗಳಿಂದಲೂ ಇವರ ಲೇಖನಗಳು ಪ್ರಕಟಗೊಂಡಿವೆ. ಹಿಂದೂ ಸಮಾಜ, ಶಿಕ್ಷಣ ಕ್ಷೇತ್ರದಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ತೇಜಸ್ವಿನಿ ಮಹಿಳಾ ಮಂಡಲಿಯ ಪದಾಧಿಕಾರಿಗಳೊಬ್ಬರು.
4. ಶ್ರೀಮತಿ ಶಶಿಪ್ರಸಾದ್, ಬೆಂಗಳೂರು: ಮಹಾಸಭಾದ ಮಾಜಿ ಅಧ್ಯಕ್ಷರಾದ ಡಾ॥ ಎಂ.ಆರ್.ವಿ. ಪ್ರಸಾದ್‌ರವರ ಧರ್ಮಪತ್ನಿ. ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿ ಸೇವಾ ನಿರತರು. ಮಹಾಸಭೆಯ ಮಹಿಳಾ ವಿಭಾಗದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.
5. ಸದಸ್ಯರ ನಿಧನದ ವಾರ್ತೆಯು ಮಹಾಸಭೆಗೆ ತಿಳಿದು ಬರುವುದಿಲ್ಲ. ದಯಮಾಡಿ ನಿಧನರಾದ ವಿಪ್ರಬಾಂಧವರ ವಿಷಯವನ್ನು ಮಹಾಸಬೆಗೆ ಪತ್ರಮುಖೇನ ತಿಳಿಸಲು ಮನವಿ ಮಾಡಿದರು. ಮೃತರ ಕುಟುಂಬದವರಿಗೆ ಸಾಂತ್ವನ ತಿಳಿಸಿ, ಗಣ್ಯರ ಆತ್ಮಕ್ಕೆ ಶಾಂತಿಯನ್ನು–ಸದ್ಗತಿಯನ್ನು ಕೋರಿ 2 ನಿಮಿಷ ಮೌನ ಆಚರಿಸಿ ಶಾಂತಿಮಂತ್ರದೊಂದಿಗೆ ಶ್ರದ್ಧಾಂಜಲಿಯನ್ನು ಸಭೆಯಲ್ಲಿ ಅರ್ಪಿಸಲಾಯಿತು.
6. ಮಹಾಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್.ಶ್ರೀಧರಮೂರ್ತಿಯವರು ಕಾರ್ಯನಿವಾಹಕ ಸಮಿತಿಯ ಪ್ರಥಮ ಸಭೆಯ ಸೂಚನಾ ಪತ್ರವನ್ನು ಓದಿ ಮಂಡಿಸಿದರು. ಅದನ್ನು ಸಭೆಯು ಸರ್ವಾನುಮತದಿಂದ ದಾಖಲಿಸಿ, ಅಂಗೀಕರಿಸಿತು.
7. ಕೇಂದ್ರ ಕಾರ್ಯಕಾರಿ ಸಮಿತಿಯ ಪಟ್ಟಿ ಪ್ರಕಟಣೆ : ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ನೂತನ ಕೇಂದ್ರ ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸಿ, ನೂತನ

ಪದಾಧಿಕಾರಿಗಳು–ಸದಸ್ಯರ ಹೆಸರನ್ನು ಓದಿ ಸಭೆಗೆ ಪರಿಚಯಿಸಿದರು. ಇದನ್ನು ದಾಖಲಿಸಿ ಅನುಮೋದಿಸಲಾಯಿತು. ಅಧ್ಯಕ್ಷರು ಮಾತನಾಡುತ್ತಾ, ಕಾರ್ಯನಿರ್ವಾಹಕ ಸಮಿತಿ ಸದಸ್ಯರ ಕಾರ್ಯಾವಧಿ ಒಂದು ವರ್ಷವಾಗಿದ್ದು, ಸಭೆಯಲ್ಲಿ ಕೆಲವರನ್ನು ಕೈಬಿಟ್ಟು, ಹೊಸಬರಿಗೆ ಅವಕಾಶ ಕಲ್ಪಿಸಲಾಗಿದೆಯೆಂದು, ಪದಾಧಿಕಾರಿಗಳು ಸದಸ್ಯರು ಆಯಾ ಜಿಲ್ಲೆ–ಪ್ರಾಂತಗಳಲ್ಲಿ ನಿಯೋಜಿಸಲಾಗುವ ಕಾರ್ಯವನ್ನು ನಿರ್ವಹಿಸಬೇಕೆಂದು ತಿಳಿಸಿದರು.

8. **ಹಿಂದಿನ ಸಭೆಯ ನಡಾವಳಿಗಳ ಮಂಡನೆ :** ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಶ್ರೀಧರಮೂರ್ತಿಯವರು ಹಿಂದಿನ ಸಭೆಯ ನಡಾವಳಿಗಳನ್ನು ಮಂಡಿಸಿದರು. ಮಾನ್ಯ ಸದಸ್ಯರು ಕೈ ಎತ್ತುವ ಮೂಲಕ ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿದರು.

9. **ಲೆಕ್ಕಪತ್ರಗಳ ಮಂಡನೆ :** ಮಹಾಸಭಾ ಖಜಾಂಚಿಗಳು (2022–2023) 31.03.023ರ ವರೆಗಿನ ಲೆಕ್ಕಪತ್ರ, ಆಯವ್ಯಯ ಮಂಡಿಸಿದರು. ಸಭೆಯು ಸರ್ವಾನುಮತದಿಂದ ಒಪ್ಪಿ ಅನುಮೋದಿಸಿತು. ಖಜಾಂಚಿಗಳು ಮಹಾಸಬೆಯ ಆರ್ಥಿಕ ಪರಿಸ್ಥಿತಿಯ ಪಕ್ಷಿನೋಟವನ್ನು ಎಳೆಎಳೆಯಾಗಿ ಸಭೆಗೆ ತಿಳಿಸಿದರು. 175 ವಿದ್ಯಾರ್ಥಿನಿಯರಿಗೆ ವಿದ್ಯಾವಾಸಿನಿ ವಿಪ್ರ ಮಹಿಳಾ ವಸತಿ ನಿಲಯದಲ್ಲಿ ಸೌಲಭ್ಯ ಕಲ್ಪಿಸಲಾಗಿದೆಯೆಂದು, ಸುಮಾರು 15–39 ವಿದ್ಯಾರ್ಥಿನಿಯರು ಸ್ಥಳಾವಕಾಶಕ್ಕಾಗಿ ಸೀಟನ್ನು ಕಾಯ್ದಿರಿಸಿದ್ದಾರೆಂದು ತಿಳಿಸಿದರು. ಈ ವರ್ಷ ವಿದ್ಯಾರ್ಥಿ ನಿಲಯಕ್ಕೆ ಯಾವುದೇ ದೊಡ್ಡತರನಾದ ಖರ್ಚು ಆಗಿಲ್ಲ. ಕೆಲವೊಂದು ಸಲಕರಣೆ ಇತ್ಯಾದಿಗಳಿಗೆ ಪ್ರಾಯೋಜಕತ್ವ ರೂಪದಲ್ಲಿ ದೇಣಿಗೆ ಬಂದು ವ್ಯಯಿಸಲಾಗಿದೆ ಎಂದು ತಿಳಿಸಿದರು. ನವೀಕರಣಗೊಂಡ ನಂತರ ಮಹಾಸಭೆಯ ಗಾಯತ್ರಿ ಭವನದಲ್ಲಿ ವಾರದಲ್ಲಿ 1–2 ಉಪನಯನ, ಇನ್ನಿತರ ಶುಭ–ಕಲ್ಯಾಣ ಕಾರ್ಯಕ್ರಮಗಳು ನಡೆದು ಹೆಚ್ಚಿನ ರೂಪದಲ್ಲಿ ಮಹಾಸಭೆಗೆ ಆದಾಯ ಬರುತ್ತಿದೆಯೆಂದು ತಿಳಿಸಿದರು. ಕೈಗಾರಿಕೋದ್ಯಮಿಗಳಿಂದ ಸಿಎಸ್ಆರ್ ಫಂಡ್ ಪಡೆಯಲು ಪ್ರಯತ್ನಿಸಲಾಗುತ್ತಿದ್ದು, 31ನೇ ಮಾರ್ಚ್ 2024ರೊಳಗೆ ಈ ಸಿ.ಎಸ್ಆರ್ ಫಂಡ್ ಪಡೆಯಲು ಕಾರ್ಯೋನ್ಮುಖರಾಗಿದ್ದೇವೆ. ಕಟ್ಟಡ ನಿರ್ಮಾಣ, ಸಮುದಾಯ ಭವನ ನಿರ್ಮಿಸಲು ಹಣದ ಅವಶ್ಯಕತೆ ಇದ್ದು, ಹೆಚ್ಚಿನ ರೀತಿಯಲ್ಲಿ ದೇಣಿಗೆ ಬೇಕಾಗಿದೆ. ಕಟ್ಟಡ ನಿದಿ ಖಾತೆಯು (ಎಸ್.ಬಿ.ಐ. ಅಕೌಂಟ್) ಸಕ್ರಿಯವಾಗಿದೆ. ಕರ್ನಾಟಕ ಬ್ಯಾಂಕ್‌ನಲ್ಲಿ ಮಹಾಸಬೆಯ ಮತ್ತು ಸಪ್ತರ್ಷಿ ಫೌಂಡೇಷನ್‌ನ ಖಾತೆಗತಳು ಚಾಲ್ತಿಯಲ್ಲಿವೆ.

10. 31.03.2023ರಲ್ಲಿ ಮಹಾಸಭೆ ಮತ್ತು ಸಪ್ತರ್ಷಿ ಫೌಂಡೇಷನ್ ಖಾತೆಗಳಲ್ಲಿ ಕೆಳಕಂಡಂತೆ ಠೇವಣಿ ಇಡಲಾಗಿದೆ (ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್‌ನಲ್ಲಿನ ಠೇವಣಿ ಹೊರತುಪಡಿಸಿ)

ಅ) ಸಪ್ತರ್ಷಿ ಫೌಂಡೇಷನ್ – ರೂ.1,59,18,611/–

ಕಳೆದ ವರ್ಷಕ್ಕೆ ತುಲನೆ ಮಾಡಿದಾಗ ಹೆಚ್ಚಳ ರೂ.37,82,326/–

ಆ) ಮಹಾಸಭಾದ ಠೇವಣಿ ರೂ.3,33,52,591/=

ಕಳೆದ ವರ್ಷಕ್ಕೆ ತುಲನೆ ಮಾಡಿದಾಗ ಹೆಚ್ಚಳ ರೂ. 86,40,119/=

ಒಟ್ಟು ಠೇವಣಿಗೆಳು 31.03.2023 ರೂ. 4,92,70,902/=

ಇ) ಮಹಾಸಭಾ ಸದಸ್ಯತ್ವ ನೋಂದಣಿ ಇಲ್ಲಿಯವರೆಗೆ ರೂ. 57,299/=

ಹೊಸದಾಗಿ ಸದಸ್ಯತ್ವ ಹೊಂದಿದವರು ರೂ. 15,874

ನೂತನ ಸದಸ್ಯರ ಸದಸ್ಯತ್ವ ಹಣ ರೂ. 79,37,004/=

ಜಮಾಗೊಂಡಿದ್ದು, ಠೇವಣಿ ಮಾಡಲಾಗಿದೆ ಎಂದು ತಿಳಿಸಿದರು.

- ಸಿ.ಎಸ್.ಆರ್. ಫಂಡ್ ಅಡಿಯಲ್ಲಿ ರೂ.24.00 ಲಕ್ಷ ಬಂದಿರುತ್ತದೆ.
- ಮಹಾಸಭಾ–ವಸತಿ ನಿಲಯದಲ್ಲಿ ಸಿಬ್ಬಂದಿಗೆ ವೇತನ, ಇತರೇ ಬಾಬ್ತುಗಳ ನಿರ್ವಹಣೆ, ದೈನಂದಿನ ಖರ್ಚುಗಳಿಗೆ ಮಾತ್ರ ವೆಚ್ಚ ಭರಿಸಲಾಗಿದ್ದು, ಬೇರೆ ಯಾವುದೇ ವೆಚ್ಚಗಳಿರುವುದಿಲ್ಲ. ಮುಂದಿನ ಸರ್ವಸದಸ್ಯರ ಸಭೆಯಲ್ಲಿ ಲೆಕ್ಕಪರಿಶೋಧಕರಿಂದ ದೃಢೀಕರಿಸಲ್ಪಟ್ಟ ಲೆಕ್ಕಪತ್ರಗಳನ್ನು ನೀಡಲಾಗುವುದೆಂದು ತಿಳಿಸಿದರು.

## ವಿವಿಧ ಸಮಿತಿಯ ಸಂಚಾಲಕರು, ಸಸದಸ್ಯರು ತಮ್ಮ ಅನಿಸಿಕೆಗಳನ್ನು – ಪ್ರಗತಿಗಳನ್ನು ತಿಳಿಸಿದರು.

1. **ಡಾ॥ ಮುರಳೀಧರ್ :** ವೈದ್ಯರು. ವೈದ್ಯಕೀಯ ಸಮಿತಿಯ ಸಂಚಾಲಕರಾದ ಶ್ರೀಯುತರು ಮಹಾಸಬೆಯ ಸದಸ್ಯರಾಗಿ ಹಮ್ಮಿಕೊಂಡಿರುವ ಸೌಲಭ್ಯ–ಸವಲತ್ತುಗಳನ್ನು ವಿವರವಾಗಿ ತಿಳಿಸಿದರು. ಸದಸ್ಯರು ರಾಜ್ಯದಾದ್ಯಂತ, ಜಿಲ್ಲಾವಾರು ವೈದ್ಯರ ನೆಟ್‌ವರ್ಕ್ ಮುಖೇನ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಸಲಹೆ–ಮಾರ್ಗದರ್ಶನ ಪಡೆಯಬಹುದಾಗಿದೆ. ಮೆಡಿಕಲ್ ಹೆಲ್ಪ್ ಲೈನ್‌ನಲ್ಲಿ 500 ಜನರಿಗೂ ಹೆಚ್ಚಾಗಿ ಸಹಾಯವಾಗಿದೆ. ಆಸ್ಪತ್ರೆ–ನರ್ಸಿಂಗ್ ಹೋಂಗಳಲ್ಲಿ ವಿಶೇಷ ರಿಯಾಯತಿಗಳೊಂದಿಗೆ ಶಸ್ತ್ರ ಚಿಕಿತ್ಸೆಗಳ ಲಭ್ಯವಿದೆ. ಇನ್ನಿತರ ಯಾವುದೇ ವೈದ್ಯಕೀಯ ಸಲಹೆ, ನೆರವು, ಸಮಾಲೋಚನೆಗಾಗಿ ಸಂಪರ್ಕಿಸಲು ಕೋರಿದರು. ಡಾ॥ ಮುರಳೀಧರ್ – 9341220446, ಶ್ರೀ ವೆಂಕಟೇಶ್ ದ್ವಾರಕನಾಥ್ – 9845038669

2. **ಮಹಾಸಭಾ ಬೈಲಾ ಹಾಗೂ ಸಪ್ತರ್ಷಿ ಫೌಂಡೇಷನ್ ಬಗ್ಗೆ :** ಶ್ರೀ ಹೆಚ್. ಎನ್. ಹಿರಿಯಣ್ಣಸ್ವಾಮಿಯವರು ಮಹಾಸಭೆ ಆಡಳಿತ ನಡೆಸಲು ಕಾನೂನಾತ್ಮಕವಾದ–ಸರಿಯಾದ ಬೈಲಾ ಬೇಕಿತ್ತು. ಸರ್ವಸದಸ್ಯರ ಅಭಿಲಾಷೆಯಂತೆ ಅಧ್ಯಕ್ಷರು ಅಧಿಕಾರ ಪದಗ್ರಹಣದ ನಂತರದ ಪ್ರಥಮ ಕಾರ್ಯನಿರ್ವಾಹಕ ಸಭೆಯಲ್ಲಿ ಬೈಲಾ ತಿದ್ದುಪಡಿ ಮಾಡಲು ಅನುಮೋದನೆ ಪಡೆಯಲಾಯಿತು. ಇದಕ್ಕಾಗಿ ಉಪಸಮಿತಿಯನ್ನು ರಚಿಸಲಾಯಿತು. ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಮಂಡಿಸಿ, ಒಪ್ಪಿಗೆ ಪಡೆದು, ಸರ್ಕಾರದ ಸಹಕಾರಿ ಇಲಾಖಾ ನೊಂದಣಾಧಿಕಾರಿ ಅನುಮೋದನೆಗೊಂಡಿರುತ್ತದೆ. ನೂತನ ಬೈಲಾದಲ್ಲಿರುವಂತೆ ಆಡಳಿತಾತ್ಮಕ ತಿದ್ದುಪಡಿಗಳಿಗೆ ತತ್‌ಕ್ಷಣಕ್ಕೆ ಜಾರಿ ಬರುವಂತೆ ಕ್ರಮಕೈಗೊಳ್ಳಲಾಗಿದೆ. ಸಪ್ತರ್ಷಿ ಫೌಂಡೇಷನ್ ಟ್ರಸ್ಟ್ ಡೀಡ್ ತಿದ್ದುಪಡಿ ತರಲು ಸಭೆಯು ಒಪ್ಪಿಗೆ ನೀಡಿ ಅಧ್ಯಕ್ಷರಿಗೆ ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಲು ಅನುಮತಿ–ಅಧಿಕಾರ ನೀಡಬೇಕೆಂದು ಸಭೆಯನ್ನು ಕೋರಿದರು. ಟ್ರಸ್ಟ್ ಡೀಡ್‌ನಲ್ಲಿ ನ್ಯೂನತೆಗಳನ್ನು ಸರಿಪಡಿಸಿ, ಆಸ್ತಿ–ಪಾಸ್ತಿಗಳ ಸಂರಕ್ಷಣೆಗಾಗಿ, ರೂಪರೇಷೆಗಳ ಬದಲಾವಣೆಗಾಗಿ ಟ್ರಸ್ಟ್‌ನಲ್ಲಿ ಹೆಚ್ಚು ಆಜೀವ ಸದಸ್ಯರಿರುವಂತೆ, ಆರ್ಥಿಕವಾಗಿ ಸದೃಢರಾದ ವಿಪ್ರರಿಂದ ಆರ್ಥಿಕ ಸಹಾಯ ಇತ್ಯಾದಿಗಳನ್ನು ಪಡೆಯಲು ಪೂರ್ಣ ಅಧಿಕಾರವನ್ನು ಸಭೆಯು ಸರ್ವಾನುಮತದಿಂದ

ಅಧ್ಯಕ್ಷರಿಗೆ ಅಧಿಕಾರ ನೀಡಲಾಯಿತು. .

3. **ರಾಜ್ಯ ಮಹಿಳಾ ವಿಭಾಗದ ವರದಿ :** ಸಂಚಾಲಕರು ಶ್ರೀಮತಿ ಶುಭಮಂಗಳ ಸುನೀಲ್ – ಮಹಾಸಭೆಯ ನೂತನ ಕಾರ್ಯನಿವಾಹಕ ಮಂಡಳಿಗೆ ಅಭಿನಂದನೆಗಳನ್ನು ತಿಳಿಸುತ್ತಾ, ಹಮ್ಮಿಕೊಂಡಿದ್ದ ಕಾರ್ಯಚಟುವಟಿಕೆಗಳ ಬಗ್ಗೆ ಸ್ಥೂಲವಾಗಿ ತಿಳಿಸಿದರು. ದೇವಸ್ಥಾನಗಳಲ್ಲಿ ಸ್ವಚ್ಛತೆ, ತರಬೇತಿ ಕಾರ್ಯಕ್ರಮ, ಆನ್‌ಲೈನ್ ತರಬೇತಿ, ಇಂಗ್ಲೀಷ್ ಸ್ಪೀಕಿಂಗ್ ಕ್ಲಾಸ್‌ಗಳು, ಜಿಲ್ಲಾ/ತಾಲ್ಲೂಕು ಘಟಕಗಳ ಆನ್‌ಲೈನ್ ಸಭೆ–ಚರ್ಚೆ, ಸಣ್ಣ–ಸಣ್ಣ ಹಬ್–ಮಹಿಳಾ ಮಾರ್ಕೆಟ್, ಮಹಿಳೆಯರು ತಯಾರಿಸಿದ ತಿಂಡಿ–ತಿನಿಸು, ಜ್ಯೂವೆಲರಿ ಇತ್ಯಾದಿಗಳ ಮಾರಾಟ, ಮಹಿಳಾ ದಿನಾಚರಣೆ ಆಚರಣೆ, ವೈದ್ಯಕೀಯ ತಪಾಸಣಾ ಶಿಬಿರ, ತಾಲ್ಲೂಕು/ಜಿಲ್ಲೆಗಳಲ್ಲಿ ಹೊಸ ಹೊಸ ಮಹಿಳಾ ಘಟಕಗಳ ಸ್ಥಾಪನೆ–ಉದ್ಘಾಟನೆ, ಮಹಾಸಭೆಯಲ್ಲಿ ಹಬ್ಬ–ಹರಿದಿನಗಳ ಆಚರಣೆ, ಸಾಂಸ್ಕೃತಿಕ ಕಾರ್ಯಕ್ರಮ, ಇತ್ಯಾದಿ ಕಾರ್ಯಕ್ರಮಗಳ ಬಗ್ಗೆ ಸಭೆಗೆ ತಿಳಿಸಿದರು. "ಮಹಿಳೆಯರಿಗೆ ದುಡ್ಡು ಕೊಡುವುದು ಬೇಡ–ದುಡ್ಡು ದುಡಿಯುವುದನ್ನು ಅವರಿಗೆ ಕಲಿಸೋಣ.ಎಂದು ತಿಳಿಸಿದರು. ಮಹಿಳೆಯರಿಗೆ ಹೊಲಿಗೆ ಯಂತ್ರ, ಅಡುಗೆ ಪಾತ್ರೆ, ಸಾಮಾನುಗಳನ್ನು ಪ್ರಯೋಜಕರ ಸಹಕಾರ ಪಡೆದು ವಿತರಿಸಲು ಎಲ್ಲರ ಸಹಾಯ ಕೋರಿದರು.

4. **ಸಂಘಟನೆ–ಧಾರ್ಮಿಕ ಸಭೆ :** ಡಾ|| ಬಿ.ಎಸ್. ರಾಘವೇಂದ್ರ ಭಟ್ ಉಪಾಧ್ಯಕ್ಷರು: ಮಹಾಸಭೆಯ ಸಂಘಟನೆ–ಪ್ರಗತಿಯ ಬಗ್ಗೆ ವರದಿ ನೀಡಿದರು. ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಅಧಿಕಾರದ ಚುಕ್ಕಾಣಿ ಹಿಡಿದ ನಂತರ ಸುಮಾರು 165 ಸಭೆ–ಸಮಾರಂಭಗಳಲ್ಲಿ ಪಾಲ್ಗೊಂಡಿದ್ದಾರೆ. ಯಾದಗಿರಿಯಲ್ಲಿ 2000 ಜನರ ಸಮಾವೇಶ, ಸಿರಿಗುಪ್ಪದಲ್ಲಿ 1500 ಜನರ ಸಮಾವೇಸ ನಡೆಯಿತು. ಗಾಯತ್ರಿ ಭವನದಲ್ಲಿ ನವೀಕರಣ, ವಸತಿ ನಿಲಯದ ನವೀಕರಣ, ವಸತಿ ನಿಲಯದಲ್ಲಿ 175 ವಿದ್ಯಾರ್ಥಿನಿಯರು ಸೌಲಭ್ಯ ಪಡೆಯುತ್ತಿದ್ದಾರೆಂದು, ಸುರಕ್ಷತೆಯೊಂದಿಗೆ ಅವರೆಲ್ಲರಿಗೂ ರುಚಿ–ರುಚಿಯಾದ ಊಟೋಪಚಾರದ ವ್ಯವಸ್ಥೆ ಬಗ್ಗೆ ತಿಳಿಸಿದರು. ಮಹಾಸಭೆಯ ಪದಾಧಿಕಾರಿಗಳೊಂದಿಗೆ ರಾಜ್ಯಾದ್ಯಂತ ಪ್ರವಾಸ–ಸಂಘಟನೆ ಬಗ್ಗೆ ಸಭೆ–ಸಂಘಟನೆ–ಸಂಸ್ಕಾರ–ಸ್ವಾವಲಂಬನೆಗೆ ಒತ್ತು. ಸಂಧ್ಯಾವಂದನೆ, ವೇದ ಶಿಬಿರಗಳು, ವಕೀಲರ ಘಟಕ–ನ್ಯಾಯಾಂಗ ವ್ಯವಸ್ಥೆಯಲ್ಲಿ ಸದಸ್ಯರಿಗೆ ಕಲೆ–ನೆರವು, ಮಹಾಸಭೆಯ ಆಜೀವ ಸದಸ್ಯತ್ವದಲ್ಲಿ 16,500 ಹೆಚ್ಚಳದ ಬಗ್ಗೆ ತಿಳಿಸಿದರು. ಆಂಗ್ಲ–ಕನ್ನಡ ವಿಪ್ರನುಡಿ ಮಾಸಪತ್ರಿಕೆಗೆ ಚಂದಾದಾರರಾಗಲು ಮನವಿ. ತಾಲ್ಲೂಕು/ಜಿಲ್ಲಾ ಮಟ್ಟದಲ್ಲಿ ಸದಸ್ಯತ್ವ ಅಭಿಯಾನ, ಪ್ರತಿ ಜಿಲ್ಲೆಯಲ್ಲೂ ಕನಿಷ್ಠ 1000 ಜನರ ಸದಸ್ಯತ್ವ ನೋಂದಣಿಗೆ ಶ್ರಮವಹಿಸಲು ಸದಸ್ಯರಿಗೆ ತಿಳಿಸಿದರು. ಹರಿಹರಪುರ ಶ್ರೀಮಠದ ಶ್ರೀ ಶ್ರೀಗಳ ಚಾತುರ್ಮಾಸವು ಬೆಂಗಳೂರಿನಲ್ಲಿ ನಡೆಯಲಿದ್ದು, ಶ್ರೀ ಲಕ್ಷ್ಮೀನರಸಿಂಹ ಹಾಗೂ ಶ್ರೀ ಶ್ರೀಗಳ ದರ್ಶನ ಪಡೆದು ಕೃತಾರ್ಥರಾಗಲು ತಿಳಿಸಿದರು.

5. **ಉದ್ಯೋಗ ಕ್ಷೇತ್ರ :** ಶ್ರೀ ಬಿ.ಎಲ್. ಹರೀಶ್ : ಉದ್ಯೋಗಾಕಾಂಕ್ಷಿಗಳು ನೋಂದಣಿ ಮಾಡಲು ಸೂಚನೆ, ಒಂದು ವಾರದಲ್ಲಿ 176 ಸದಸ್ಯರ ನೋಂದಣಿ ಮಾಡಿದ್ದು, 220 ಉದ್ಯೋಗಾವಕಾಶಗಳು ಇವೆ ಎಂದು ತಿಳಿಸಿದರು. ಉದ್ಯೋಗಾಕಾಂಕ್ಷಿಗಳಿಗೆ ತರಬೇತಿ, ಆನ್‌ಲೈನ್‌ನಲ್ಲೂ ತರಬೇತಿ ನೀಡಿದ್ದೇವೆಂದು ತಿಳಿಸಿದರು. ವಿಪ್ರರಿಂದ, ವಿಪ್ರರಿಗಾಗಿ, ವಿಪ್ರರಿಗೋಸ್ಕರ ಎಂಬ ವೇದಿಕೆಯಡಿಯಲ್ಲಿ ಸಂಘಟಿತರಾಗಿ ವಿಪ್ರರೆಲ್ಲರನ್ನು ಜೊತೆಗೂಡಿಸೋಣವೆಂದು ತಿಳಿಸಿ, ಹೆಚ್ಚಿನ ಮಾಹಿತಿಗಾಗಿ 9844493115 ಸಂಪರ್ಕಿಸಲು ಕೋರಿದರು.

6. **ಆರೋಗ್ಯ ಮತ್ತು ವಿಮೆಯ ಬಗ್ಗೆ :** ಮದನ್ ಐಯ್ಯಂಗಾರ್. ಸರ್ವಸದಸ್ಯರಿಗೂ ಅನುಕೂಲ–ಉಪಕಾರವಾಗುವಂತಹ ಆರೋಗ್ಯ ಮತ್ತು ವಿಮೆಯ ಬಗ್ಗೆ ಸಭೆಗೆ ತಿಳಿಸಿದರು. ಪ್ರತಿ ವರ್ಷಕ್ಕೆ ಕೇವಲ ರೂ.500 ಗಳನ್ನು ಪ್ರೀಮಿಯಂ ಕಟ್ಟಿ, ವೈಯಕ್ತಿಕ ಅಪಘಾತ ವಿಮೆ ಪಾಲಿಸಿ ಪಡೆಯುವಂತೆ ಸೂಚಿಸಿದರು. ಯಾವುದೇ ರೀತಿಯ ಅಪಘಾತದಲ್ಲಿ ಮರಣ ಹೊಂದಿದರೆ ಪಾಲಿಸಿದಾರನ ನಾಮಿನಿಗೆ ರೂ.1.00 ಲಕ್ಷ ಪಾವತಿ, ಇತ್ಯಾದಿ ವಿಮೆ ಪಾಲಿಸಿ, ಆರೋಗ್ಯ ಪಾಲಿಸಿಯ ಬಗಹ್ಗೆ ಸದಸ್ಯರಿಗೆ ತಿಳಿಸಿ, ಇದರ ಉಪಯೋಗ, ಪ್ರಯೋಜನವನ್ನು ಪಡೆಯುವಂತೆ ತಿಳಿಸಿದರು.

7. **ವಿಪ್ರನುಡಿಯ ಬಗ್ಗೆ :** ಶ್ರೀ ಹೆಚ್.ವಿ. ಸುಬ್ಬರಾವ್ (ಸುಬ್ಬಣ್ಣ), ಸಂಚಾಲಕರು. ಮಹಾಸಭೆಯ ಸಮಾಜಮುಖಿ ಕಾರ್ಯಗಳನ್ನು ಸದಸ್ಯರಿಗೆ ತಿಳಿಸಲು "ವಿಪ್ರನುಡಿ" ಪತ್ರಿಕೆಯು ಮಹಾಸಭೆಯ ಮುಖವಾಣಿಯಾಗಿದೆ. ಚಂದಾದಾರರಿಗೆ ಮಾತ್ರ ವಿಪ್ರನುಡಿ ತಲುಪಿಸಲಾಗುತ್ತಿದೆ. ಕನಿಷ್ಠ 10 ಸಾವಿರ ಸದಸ್ಯರು ಚಂದಾದಾರರಾಗಬೇಕೆಂದು, ವಿಪ್ರನುಡಿಗೆ ಜಾಹಿರಾತು ನೀಡಬೇಕೆಂದು ಮನವಿ ಮಾಡಿದರು. ವಿಪ್ರ ಸಂಘ–ಸಂಸ್ಥೆಗಳ, ಮಹಾಸಬೆಯ ಕಾರ್ಯಚಟುವಟಿಕೆ, ಸದಸ್ಯರ ಸಾಧನೆ ಇನ್ನಿತರ ಅವಶ್ಯಕ ಮಾಹಿತಿಗಳನ್ನು ಪ್ರಕಟಿಸಿ ಮಾನ್ಯ ಸದಸ್ಯರಿಗೆ ತಲುಪಿಸಲು ಎಲ್ಲರ ಸಹಾಯ–ಸಹಕಾರ ಕೋರಿದರು.

8. **ಯಾಜ್ಞವಲ್ಕ್ಯ ಸಮ್ಮೇಳನ :** ಶ್ರೀ ವೈ.ಎ. ಸುಧಾಕರಬಾಬು, ಸಂಚಾಲಕರು: ಶೃಂಗೇರಿ ಉಭಯ ಜಗದ್ಗುರುಗಳ ಕೃಪಾಶೀರ್ವಾದದಿಂದ ಅಸಂಘಟಿತರಾಗಿದ್ದ ಯಾಜ್ಞವಲ್ಕ್ಯರನ್ನು ಸಂಘಟಿಸಿ ಶೃಂಗೇರಿ ಶಾರದಾಪೀಠದಲ್ಲಿ ಯಾಜ್ಞವಲ್ಕ್ಯ ಸಮಾವೇಶವು ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಜಗದ್ಗುರುಗಳು ಅನುಗ್ರಹ ಆಶೀರ್ವಚನದಲ್ಲಿ ವಿಪ್ರರೆಲ್ಲರೂ ಸಂಘಟಿತರಾಗಿ ಒಂದುಗೂಡುವಂತೆ ಕರೆ ನೀಡಿದರು. ಈ ಸಮಾವೇಶವು ಅತ್ಯಂತ ಯಶಸ್ವಿಯಾಗಲು ಉಭಯ ಶ್ರೀ ಶ್ರೀಗಳ ಕೃಪಾಶೀರ್ವಾದವೇ ಕಾರಣವೆಂದು ತಿಳಿಸಿ, ಶಿರಸಾಷ್ಟಾಂಗಪೂರ್ವಕ ನಮನಗಳನ್ನು ಸಭೆಯಲ್ಲಿ ತಿಳಿಸಿದರು. ಈ ಅವಕಾಶವನ್ನು ಎರ್ಪಡಿಸಿಕೊಟ್ಟ ಮಹಾಸಭಾಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರಿಗೆ ವಿಶೇಷ ಧನ್ಯವಾದಗಳನ್ನು ತಿಳಿಸಿದರು.

9. **ಕಾಶೀಯಾತ್ರೆ ಪ್ರವಾಸ :** ಶ್ರೀ ಡಿ.ವಿ. ರಾಜೇಂದ್ರ ಪ್ರಸಾದ್, ಉಪಾಧ್ಯಕ್ಷರು: ಮಹಾಸಭೆಯ ಸದಸ್ಯರು ಮತ್ತು ಅವರ ಅವಲಂಬಿತರಿಗಾಗಿ 4 ರಾತ್ರಿ 5 ದಿನಗಳ ವಾರಣಾಸಿ–ಗಯಾ–ಪ್ರಯಾಗ್‌ರಾಜ್ ವಿಶೇಷ ಪ್ರವಾಸವನ್ನು ಏರ್ಪಡಿಸಿದ್ದು, ವಿಮಾನಯಾನ, ಊಟ, 3 ಸ್ಟಾರ್ ಹೋಟೇಲ್ ವಸತಿ, ವಿಶೇಷ ತಾಣಗಳ ವೀಕ್ಷಣೆ, ಎ.ಸಿ. ಬಸ್‌ನಲ್ಲಿ ಊರುಗಳಲ್ಲಿ ಪ್ರಯಾಣದ ಸೌಲಭ್ಯವನ್ನು ಹೊಂದಿರುತ್ತದೆ. ಆಗಸ್ಟ್ 11 ರಂದು ಬೆಂಗಳೂರಿನಿಂದ ಹೊರಡಲಿರುವ ಈ ಪ್ರವಾಸಕ್ಕೆ ಕೇವಲ 34,000/= ರೂ.ಗಳನ್ನು ನಿಗದಿಪಡಿಸಿದ್ದು (ಪ್ರತಿಯೊಬ್ಬರಿಗೆ) ಸೀಟುಗಳನ್ನು ಕಾಯ್ದಿರಿಸುವಂತೆ ಕೋರಿದರು. ಕೇವಲ 100 ಜನರಿಗೆ ಮಾತ್ರ ಈ ಅವಕಾಶವಿದ್ದು, ಮೊದಲು ಬಂದು ಸ್ಥಳ ಕಾದಿರಿಸುವವರಿಗೆ ಆದ್ಯತೆ ನೀಡಲಾಗುವುದೆಂದು ತಿಳಿಸಿದರು.

10. **ಮಾಸಾಶನ ವಿತರಣೆ :** ಶ್ರೀ ಎಂ.ಆರ್.. ಶಿವಶಂಕರ್, ಉಪಾಧ್ಯಕ್ಷರು:

ಪ್ರತಿ ತಿಂಗಳು 500=00 ರೂ.ಗಳ ಮಾಸಾಶನವನ್ನು ಆರ್ಥಿಕವಾಗಿ ನಿರ್ಗತಿಕರಾಗಿರುವ ಹಾಗೂ ಅಂಗವಿಕಲ ವಿಪ್ರಬಾಂಧವರಿಗೆ ನೀಡುತ್ತಿದ್ದು, ಮಾನ್ಯ ಸದಸ್ಯರು ಒಬ್ಬರಿಗೆ ಒಂದು ವರ್ಷಕ್ಕೆ ಬೇಕಾಗುವ ರೂ.6,000/= ಗಳನ್ನು ಮಹಾಸಭೆಗೆ ನೀಡಿ, ಫಲಾನುಭವಿಗಳಿಗೆ ನೀಡಲು ಅನುವಾಗುವಂತೆ ದೇಣಿಗೆ ನೀಡಲು ಕೋರಿದರು. ಶ್ರೀಯುತ ಎಂ.ವಿ. ಸತ್ಯನಾರಾಯಣ್‌ರವರು ತಿಂಗಳಿಗೆ ರೂ.50,000/= ದಂತೆ ಮೂರು ತಿಂಗಳ ಮಾಸಾಶನಕ್ಕಾಗಿ ರೂ.1,50,000/= ಗಳನ್ನು, ಮೆ॥ ಶರ್ಮಾ ಟ್ರಾವೆಲ್ಸ್‌ನವರು ರೂ.2.00 ಲಕ್ಷವನ್ನು, ಶ್ರೀ ಪಿ.ಸಿ.ರಾವ್ ರೂ.6,000/= ಗಳನ್ನು, ಶ್ರೀ ಎನ್.ಎಸ್. ನರಸಿಂಹಮೂರ್ತಿ (ವಿಧಾನಸೌಧ) ರೂ.6,000/= ಗಳನ್ನು ನೀಡಿದ್ದಾರೆಂದು ಹಾಗೂ ಜೋಷಿ ಬ್ರದರ್ಸ್ ರೂ.12,000/= ಗಳನ್ನು, ವಕೀಲರ ಘಟಕದಿಂದ ರೂ.6,000/= ಘೋಷಿಸಿದ್ದಾರೆಂದು ತಿಳಿಸಿ ಅವರೆಲ್ಲರಿಗೂ ಧನ್ಯವಾದ ತಿಳಿಸಿದರು.

11. **ವಸತಿ ನಿಲಯದಲ್ಲಿ ಸೋಲಾರ ಅಳವಡಿಕೆ :** ಸಿಸಿಟಿವಿ ರವಿಯವರು ಮಹಿಳಾ ವಸತಿ ನಿಲಯದಲ್ಲಿ ಸೋಲಾರ್ ಅಳವಡಿಕೆ ಬಗ್ಗೆ ತಿಳಿಸಿದರು. ಮಹಾಸಭಾ ಪ್ರತಿನಿಧಿಯಾಗಿ ಎ.ಐ.ಬಿ.ಎಫ್.ನ ಒರಿಸ್ಸಾ, ತೆಲಂಗಾಣ, ತಮಿಳುನಾಡು ರಾಜ್ಯಗಳಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ್ದಾಗಿ ತಿಳಿಸಿದರು. ಸದಸ್ಯರ ಅನುಕೂಲಕ್ಕಾಗಿ ವಿವಿಧ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ಒಡಂಬಡಿಕೆ ಮಾಡಿಕೊಂಡು, ವಿಶೇಷ ರಿಯಾಯತಿಯು ಮಾನ್ಯ ಮಹಾಸಭಾ ಸದಸ್ಯರಿಗೆ ಸಿಗುವಂತಾಗಲು ಕಾರ್ಯೋನ್ಮುಖರಾಗಿದ್ದೇವೆಂದು ತಿಳಿಸಿದರು.

12. **ಶ್ರೀ ರಾಘವೇಂದ್ರರಾವ್, ಯಲಹಂಕ :** ಮಾತನಾಡುತ್ತಾ ತನು-ಮನದೊಂದಿಗೆ ಧನದ ಅವಶ್ಯಕತೆಯೂ ಇದ್ದು, ಕಾರ್ಯನಿರ್ವಾಹಕ ಸಮಿತಿಯ ಎಲ್ಲ ಸದಸ್ಯರು ರು.10,000/=ಗಳನ್ನು ಕಡ್ಡಾಯವಾಗಿ ಕಟ್ಟಡ ನಿಧಿಗೆ ನೀಡಬೇಕೆಂದು ಕರೆಯಿತ್ತರು.

13. **ಶ್ರೀ ಹೆಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಮಾಜಿ ಕಾರ್ಯದರ್ಶಿ:** ವಿಪ್ರನುಡಿ ಮಾಸಪತ್ರಿಕೆಯು ಮಹಾಸಭೆಯ ಮುಖವಾಣಿಯಾಗಿದ್ದು, ಸರಳವಾಗಿ ವರ್ಣರಂಜಿತವಿಲ್ಲದೇ ಕಡಿಮೆ ದರದಲ್ಲಿ ಪ್ರಕಟಿಸಿ, ಮುದ್ರಿಸಿ ಎಲ್ಲಾ ಸದಸ್ಯರಿಗೂ ವಿತರಿಸಬೇಕೆಂದು ಅಧ್ಯಕ್ಷರಲ್ಲಿ ಮನವಿ ಮಾಡಿದರು. ಕಾರ್ಯನಿರ್ವಾಹಕ ಮಂಡಳಿಯಲ್ಲಿ ಯುವಕರಿಗೆ ಹೆಚ್ಚು ಆದ್ಯತೆ ನೀಡಬೇಕೆಂದು ಕೋರಿದರು.

14. **ಶ್ರೀ ಸುಬ್ಬರಾವ್ ಕೃಷ್ಣಮೂರ್ತಿ, ಇನ್ಫೋಸಿಸ್ :** ಈಗಿನ ಮಾಹಿತಿ ತಂತ್ರಜ್ಞಾನಕ್ಕೆ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು, ಮಹಾಸಭೆಯ ಸದಸ್ಯತ್ವ ಆನ್‌ಲೈನ್ ಮೆಂಬರ್‌ಷಿಪ್ ಇರಬೇಕೆಂದು, ನಿಲ್ಲಿಸುವುದು ಬೇಡವೆಂದು ತಿಳಿಸಿದರು. ಹಾಸ್ಟೆಲ್‌ನಲ್ಲಿ ಬಯೋ-ಮೆಟ್ರಿಕ್ ಎಂಟ್ರಿ ಅಳವಡಿಸಲಾಗಿದೆಯೆಂದು ತಿಳಿಸಿದರು.

15. **ಶ್ರೀ ಟಿ.ಎನ್. ರಮೇಶ್, ವಕೀಲರು:** ಮಹಾಸಭೆಯಲ್ಲಿ ವಕೀಲರ ಸಭೆ ನಡೆದು, ಮಠ-ಮಂದಿರಗಳ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿರುವವರ ಬಗ್ಗೆ ಖಂಡಿಸಿ, ಕಾನೂನಾತ್ಮಕ ಕ್ರಮ ತೆಗೆದುಕೊಳ್ಳಲು ತಂಡವನ್ನು ರಚಿಸಲಾಗುವುದೆಂದು ತಿಳಿಸಿದರು. ಸಿವಿಲ್-ಕ್ರಿಮಿನಲ್ ವಾಣಿಜ್ಯಗಳಿಗೆ, ವಕೀಲರ ಸಹಾಯಕ್ಕಾಗಿ ಮೂರು ತಂಡಗಳ ರಚನೆಯಾಗಿದ್ದು, ಆರ್ಥಿಕವಾಗಿ ಹಿಂದುಳಿದವರಿಗೆ ಉಚಿತವಾದ ಕಾನೂನು ಸಲಹೆ ನೀಡುವುದಾಗಿ ತಿಳಿಸಿದರು. ಆರ್ಥಿಕವಾಗಿ ಹಿಂದುಳಿದ ಸದಸ್ಯರು ಕಾನೂನು ವಿಚಾರಗಳಿಗೆ ಉಚಿತ ಸಲಹೆಗಳನ್ನು ಪಡೆಯಲು 9945519208 ಶ್ರೀ ಟಿ.ಎನ್. ರಮೇಶ್ ಮತ್ತು ಶ್ರೀಓ ಬಿ.ಆರ್. ವಿಶ್ವನಾಥ್ 9845034560 ಸಂಪರ್ಕಿಸಲು ಕೋರಿದರು.



16. **ಶ್ರೀ ಬಿಂಧುಮಾಧವಾಚಾರ್ :** ಯ.ಕ್ಷ. ಪ್ಲಾಟ್‌ಫಾರ್ಮ್ ಬೇಕು. ಯೋಜನೆಯು ಕೊನೆಯ ಹಂತದಲ್ಲಿನ ಎಲ್ಲರಿಗೂ ತಲುಪುವಂತಾಗಬೇಕು ಎಂದು ತಿಳಿಸಿದರು. 9845947220.

17. **ಶ್ರೀ ಶ್ರೀಧರ್ ಎನ್. ರಾವ್ :** ಸಹಕಾರಿ ಒಕ್ಕೂಟಗಳ ಅಧ್ಯಕ್ಷರು, 150 ಕೋಟಿ ರೂ.ಗಳ ಬ್ಯಾಂಕ್ ಆಗಿದೆ ಎಂದು ತಿಳಿಸಿ, ಸಹಕಾರಿ ಬ್ಯಾಂಕ್‌ಗಳ ಸಮಸ್ಯೆಗಳಿಗೆ ಸಂಪರ್ಕಿಸಿ : 9900585656.

18. **ಶ್ರೀ ಎನ್.ಎಸ್. ನರಸಿಂಹಮೂರ್ತಿ, (ವಿಧಾನಸೌಧ) :** ಮಹಾಸಭೆಯಲ್ಲಿ ನವಬ್ರಾಹ್ಮಣ ಪಡೆಯು ಶ್ರೀ ಅಶೋಕ ಹಾರನಹಳ್ಳಿಯವರಿಂದ ಮುಂದುವರೆಯಬೇಕೆಂದು ತಿಳಿಸಿ, ಮಹಾಸಭೆಯಲ್ಲಿ ಸ್ವಯಂಶಿಸ್ತು ಪಾಲಿಸಬೇಕೆಂದು ಸಭೆಯಲ್ಲಿ ಮರ್ಯಾದೆ-ಘನತೆಯಿಂದ ನಡೆದುಕೊಳ್ಳಲು ಒತ್ತುಕೊಡಬೇಕೆಂದು ತಿಳಿಸಿದರು. ಮಹಾಸಭೆಯು ನನಗೇನು ಮಾಡಿದೆ-ಕೊಟ್ಟಿದೆ ಎಂದು ಕೇಳುವ ಮೊದಲು ನನ್ನಿಂದ ಮಹಾಸಭೆಗೆ ಏನು ಆಗಿದೆ ಎಂದು ಎಲ್ಲ ಸದಸ್ಯರು ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ತಿಳಿಸಿದರು.

2023-24ನೇ ಸಾಲಿನ ಕಾರ್ಯನಿರ್ವಾಹಕ ಸಮಿತಿಯ ಪ್ರಥಮ ಸಭೆಯಲ್ಲಿ ರಾಜ್ಯಾದ್ಯಂತದಿಂದ ಆಗಮಿಸಿದ್ದ ಮಾನ್ಯ ಸದಸ್ಯರು ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರು. ಶ್ರೀಯುತ ಮಂಜುನಾಥ ಶಾಸ್ತ್ರಿ, ಶ್ರೀ ಎನ್.ಜಿ.ನಾಗರಾಜ, ಶ್ರೀ ಬಾಲಸುಬ್ರಹ್ಮಣ್ಯಂ ಹಾಗೂ ಇನ್ನಿತರರು ತಮ್ಮ ಅನಿಸಿಕೆಗಳನ್ನು ಸಭೆಯ ಮುಂದಿಟ್ಟರು.

ಮಾನ್ಯ ಅಧ್ಯಕ್ಷರಾದ ಶ್ರೀಯುತ ಅಶೋಕ ಹಾರನಹಳ್ಳಿಯವರು ಸದಸ್ಯರ ಎಲ್ಲಾ ಅಹವಾಲುಗಳಿಗೆ ಅಲ್ಲಲ್ಲಿಯೇ ಶಾಂತಿಯಿಂದ ಸಮಂಜಸವಾಗಿ ಸಮಜಾಯಿಷಿ ನೀಡಿ ಸದಸ್ಯರ ಮೆಚ್ಚುಗೆಗೆ ಪಾತ್ರರಾದರು..

ಕೊನೆಯಲ್ಲಿ ವಂದನಾರ್ಪಣೆಯೊಂದಿಗೆ ಹಾಗೂ ಶಾಂತಿಸೂಕ್ತದೊಂದಿಗೆ ಸಭೆಯು ಸಂಪನ್ನಗೊಂಡಿತು.

ಮಾನ್ಯ ಸದಸ್ಯರಿಗೆ ಬೆಳಿಗ್ಗೆ ಶುಚಿ-ರುಚಿಯಾದ ಉಪಹಾರನ್ನು ಮಧ್ಯಾಹ್ನ ಸುಗ್ರಾಸ ಭೋಜನದ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು.

**ಎಸ್. ಶ್ರೀಧರ ಮೂರ್ತಿ**
ಪ್ರಧಾನಕಾರ್ಯದರ್ಶಿ

# ನೂತನ ವಿಪ್ರ ಮಂತ್ರಿಗಳು ಹಾಗೂ ಶಾಸಕರಿಗೆ ಅಭಿನಂದನಾ ಸಮಾರಂಭ
# "ಧರ್ಮಕ್ಕೆ ಪೆಟ್ಟು ಬಿದ್ದಾಗ ಧ್ವನಿಯೆತ್ತಿ"

**– ಶ್ರೀ ನಾರಾಯಣ ರಾಮಾನುಜಜೀಯರ್ ಸ್ವಾಮಿಗಳು**




ನಮ್ಮ ಧರ್ಮ ಹಾಗೂ ಸಂಸ್ಕೃತಿಗೆ ಪೆಟ್ಟು ಬಿದ್ದಾಗ ಪಕ್ಷ ಭೇದವಿಲ್ಲದೆ ಧ್ವನಿಯೆತ್ತಬೇಕು ಎಂದು ಮೇಲುಕೋಟೆ ಯತಿರಾಜ ಮಠದ ಯದುಗಿರಿ ಯತಿಗಳಾದ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿಯವರು ಹೇಳಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನಗರದಲ್ಲಿ ಶನಿವಾರ ಹಮ್ಮಿಕೊಂಡ ನೂತನ ವಿಪ್ರ ಶಾಸಕರಿಗೆ ಅಭಿನಂದನಾ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

'ನಮ್ಮ ಧರ್ಮ, ಸಮಾಜ, ಮಂದಿರ ಹಾಗೂ ಮಠಕ್ಕೆ ಆಪತ್ತು ಬಂದಾಗ ಜನಪ್ರತಿನಿಧಿಗಳು ಹೋರಾಡಬೇಕು. ಎಲ್ಲಾ ಜಾತಿಗಳು ಸೌಹಾರ್ದತೆಯಿಂದ ಇದ್ದಾಗ ಮಾತ್ರ ರಾಷ್ಟ್ರ ನಿರ್ಮಾಣಕ್ಕೆ ಅರ್ಥ ಬರುತ್ತದೆ. ಬ್ರಾಹ್ಮಣರು ಪರರ ಹಿತ ಬಯಸುವವರು. ಬ್ರಾಹ್ಮಣ, ಬ್ರಾಹ್ಮಣ್ಯ ಎನ್ನುವುದು ಜಾತಿ, ಧರ್ಮಕ್ಕೆ ಸೀಮಿತವಾಗಿಲ್ಲ. ಇದು ಜೀವನ ಕ್ರಮವಾಗಿದೆ. ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅನೇಕರು ಬ್ರಾಹ್ಮಣ ಸಮಾಜಕ್ಕೆ ಸೇರಿದವರು ಎಂದು ಹೇಳಿದರು.

ರಚನಾತ್ಮಕ ಯೋಜನೆಗಳ ಮೂಲಕ ಮುನ್ನಡೆಯುತ್ತಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಚಟುವಟಿಕೆಗಳಿಗೆ ಸರ್ಕಾರದಿಂದ ಎಲ್ಲ ರೀತಿಯ ನೆರವು ಒದಗಿಸಲು ಶ್ರಮಿಸುವುದಾಗಿ ವಿಪ್ರ ಶಾಸಕರು ಭರವಸೆ ನೀಡಿದರು.

ಶಾಸಕ ಶ್ರೀ ಆರ್.ವಿ. ದೇಶಪಾಂಡೆ, ಬ್ರಾಹ್ಮಣ ಸಮಾಜದ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕು. ಸಮುದಾಯದ ದೊಡ್ಡ ಆಸ್ತಿ ಬುದ್ಧಿವಂತಿಕೆ. ಇದರಿಂದಲೇ ಸಮಾಜದವರು ಇನ್ನೂ ಉಳಿದುಕೊಂಡಿದ್ದಾರೆ. ಹಿಂದೆ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದ್ದಾಗ ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿ ಅವರಿಗೆ ಆಗ್ರಹಿಸಿ, ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಸ್ಥಾಪನೆಗೆ ಶ್ರಮಿಸಿದೆ ಎಂದು ತಿಳಿಸಿದರು.

ಆರೋಗ್ಯ ಸಚಿವ ಶ್ರೀ ದಿನೇಶ್ ಗುಂಡೂರಾವ್ ಮಾತನಾಡಿ, ಸಂಘಟನೆ ವಿಚಾರದಲ್ಲಿ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಅವರು ಅತ್ಯುತ್ತಮ ಕೆಲಸ ಮಾಡುತ್ತಿದ್ದಾರೆ ಎಂದು ಅಭಿನಂದಿಸಿದರು. ನಮ್ಮ ಸರ್ಕಾರ ಬ್ರಾಹ್ಮಣ ಸಮಾಜದ ಪರವಾಗಿದೆ. ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದ ವೇಳೆ ಆಶ್ವಾಸನೆ ನೀಡಿದ್ದ ಅನುದಾನವನ್ನು ಬಿಡುಗಡೆ ಮಾಡಲು ಪ್ರಯತ್ನ ಮಾಡುವುದಾಗಿ ತಿಳಿಸಿದರು. ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ಅನುದಾನ ಸಿಗುವಂತಾಗಬೇಕು. ಅದೇ ರೀತಿ ಬ್ರಾಹ್ಮಣ ಮಹಾಸಭಾದವರು ಕಟ್ಟಡ ನಿರ್ಮಾಣ ಅಗತ್ಯವಿರುವುದರಿಂದ ಅನುದಾನಕ್ಕೆ ಸಂಬಂಧಿಸಿದಂತೆಯೂ ಸರ್ಕಾರದ ಮಟ್ಟದಲ್ಲಿ ಪ್ರಯತ್ನ ಮಾಡಲಾಗುವುದು. ರಾಜಕೀಯದಲ್ಲಿ ಸಮಾಜದ ಪ್ರತಿನಿಧಿಗಳು ಒಗ್ಗಟ್ಟಾಗಿ ಕೆಲಸ ಮಾಡಬೇಕು ಎಂದರು.



ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ ಮಾತನಾಡಿ, ಅರ್ಹತೆ ಆಧಾರದ ಮೇಲೆ ಆರ್.ವಿ. ದೇಶಪಾಂಡೆ ಅವರು ಮುಖ್ಯಮಂತ್ರಿ ಆಗಬೇಕಿತ್ತು. ಮುಂದಿನ ದಿನಗಳಲ್ಲಿ ಅವರಿಗೇ ಒಳ್ಳೆಯ ಅವಕಾಶಗಳು ಒದಗಿ ಬರಲಿ ಎಂದು ಹಾರೈಸಿದರು.

ಕರ್ನಾಟಕ ವಿಧಾನಸಭೆಗೆ ನೂತನವಾಗಿ ಆಯ್ಕೆಯಾದ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್, ಮಾಜಿ ಸಚಿವ ಶ್ರೀ ಆರ್.ವಿ. ದೇಶಪಾಂಡೆ, ಶಾಸಕರಾದ ಶ್ರೀ ಎಲ್.ಎ. ರವಿಸುಬ್ರಹ್ಮಣ್ಯ, ಶ್ರೀ ಉದಯ್ ಬಿ. ಗರುಡಾಚಾರ್, ಶ್ರೀ ಸಿ.ಕೆ. ರಾಮಮೂರ್ತಿ, ಶ್ರೀ ಟಿ.ಎಲ್. ಶ್ರೀವತ್ಸ ಮತ್ತು ಶ್ರೀ ವಿಕಾಸ್ ವೈದ್ಯರು ಉಪಸ್ಥಿತರಿದ್ದು ಮಹಾಸಭೆ ನೀಡಿದ ಗೌರವವನ್ನು ಅತ್ಯಂತ ಸಂತೋಷದಿಂದ ಸ್ವೀಕರಿಸಿದರು. ಸಮಾರಂಭದ ನಿರೂಪಣೆಯನ್ನು ಮಹಾಸಭಾ ಸಂಘಟನಾ ಕಾರ್ಯದರ್ಶಿ ಶ್ರೀ ಕಾರ್ತೀಕ್ ಎಸ್. ಬಾಪಟ್‌ರವರು ನೆರವೇರಿಸಿದರೆ ಪ್ರಾರ್ಥನೆಯನ್ನು ಶ್ರೀಮತಿ ಸೌಜನ್ಯ ಆಚಾರ್ ನೆರವೇರಿಸಿದರು.

# ಸ್ವರ್ಣವಲ್ಲಿ ಶ್ರೀಗಳ 33ನೇ ಚಾತುರ್ಮಾಸ್ಯ ವ್ರತ ಸಂಕಲ್ಪ
## ಮೂರ್ತಿ ಪೂಜೆಯಿಂದ ಭಕ್ತಿ ಮಾರ್ಗ



**– ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿಗಳು**

ಸ್ವರ್ಣವಲ್ಲೀ ಮಠದಲ್ಲಿ ನಡೆದ 33ನೇ ಚಾತುರ್ಮಾಸ್ಯ ವ್ರತ ಸಂಕಲ್ಪದಲ್ಲಿ ಪರಮ ಗುರಿಯೆಂದು ಸಾರಿ ಅದರ ಸಾಧನೆಯ ಮಾರ್ಗವನ್ನು ದಿನನಿತ್ಯದ ಧರ್ಮಾಚರಣೆಯ ಮೂಲಕ ಕರ್ತವ್ಯವನ್ನು ಹೊಂದುವ ಬಗೆಯನ್ನು ನೂತನ ಧರ್ಮ. ಎಲ್ಲಾ ಧರ್ಮಗಳಿಗಿಂತ ಶ್ರೇಷ್ಠವು ವೈಶಿಷ್ಟ ಪೂರ್ಣವು ಆಗಲು ಕಾರಣವೆಂದು ತಿಳಿಸಿದರು.

ಭಕ್ತಿ ಇಲ್ಲದಿದ್ದರೆ ಪರಿಪೂರ್ಣ ಏಕಾಗ್ರತೆ ಬರುವುದಿಲ್ಲ. ಮೂರ್ತಿ ಪೂಜೆ ಮಾಡುವ ಮೂಲಕ ಭಕ್ತಿ ಮಾರ್ಗದಲ್ಲಿ ನಾವು ಮುನ್ನಡೆಯಬೇಕು ಎಂದು ಸೋಂದಾ ಸ್ವರ್ಣವಲ್ಲಿ ಮಠದ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿಗಳು ನುಡಿದರು.


ಸೋಂದಾ ಸ್ವರ್ಣವಲ್ಲೀ ಮಠದಲ್ಲಿ 33ನೇ ಚಾತುರ್ಮಾಸ್ಯ ವ್ರತ ಸಂಕಲ್ಪದ ಸಭಾ ಕಾರ್ಯಕ್ರಮ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಹಿಂದೂ ಧರ್ಮದಲ್ಲಿ ಗುರುವಿಗೆ ಇರುವ ಮಹತ್ವ ಬೇರೆ ಯಾವ ಧರ್ಮದಲ್ಲೂ ಇಲ್ಲ. ಈ ದಿನ ಹಿಂದೂಗಳಿಗೆ ಪವಿತ್ರವಾದ ದಿನವಾಗಿದೆ ಎಂದರು.

ತಪಸ್ಸಿನಿಂದ ಮನಸ್ಸು ವಿಶಾಲಗೊಳ್ಳುತ್ತದೆ. ಪ್ರತಿಯೊಬ್ಬರೂ ತಪಸ್ಸನ್ನು ಮಾಡುವ ಮೂಲಕ ಯಶಸ್ಸನ್ನು ಕಂಡುಕೊಳ್ಳಬಹುದು. ವ್ಯಾಸ ಎಂದರೆ ವಿಸ್ತಾರ ಎಂದರ್ಥ. ವ್ಯಾಸ ಮಹರ್ಷಿಗಳು ವಿಸ್ತಾರವಾದ ವ್ಯಕ್ತಿತ್ವವುಳ್ಳವರು. ಗುರುವಾದವರು ತಪಸ್ಸು ಮಾಡಬೇಕು. ಪ್ರತಿಯೊಬ್ಬ ಶಿಕ್ಷಕನು ತನ್ನ ವಿದ್ಯಾರ್ಥಿಗಳ ಬಗ್ಗೆ ತಪಸ್ಸು ಮಾಡಿದರೆ ವಿದ್ಯಾರ್ಥಿಗಳ ಜೀವನ ಉಜ್ವಲವಾಗುತ್ತದೆ. ವ್ಯಾಸರು ಬರೆದ ಕಾವ್ಯಗಳು ಬಹಳ ಪ್ರಸಿದ್ಧವಾಗಿದೆ. ಇದು ಪ್ರಪಂಚದ ಸಾಹಿತ್ಯ ಕ್ಷೇತ್ರಕ್ಕೆ ಅದ್ಭುತವಾದ ಕೊಡುಗೆಯಾಗಿದೆ. ಶಂಕರಾಚಾರ್ಯರು ಹಾಗೂ ವ್ಯಾಸರು ಬರೆದ ಗ್ರಂಥಗಳೇ ನಮ್ಮ ಧಾರ್ಮಿಕ ಪರಂಪರೆಗೆ ಮೂಲಾಧಾರವಾಗಿದೆ. ಹಿಂದೂ ಧರ್ಮಕ್ಕೆ ಇವರುಗಳ ಕೊಡುಗೆ ಅಪಾರವಾಗಿದೆ ಎಂದರು.


ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಧ್ಯಕ್ಷ ಅಶೋಕ ಹಾರನಹಳ್ಳಿಯವರು ಮಾತನಾಡಿ, ಆದರ್ಶವಾದ ಜೀವನಕ್ಕೆ ಮಠಗಳು ಗುರುಗಳ ಅವಶ್ಯಕತೆ ಇದೆ. ಸಮಾಜಕ್ಕೆ ದೊಡ್ಡ ಶಕ್ತಿಯನ್ನು ನೀಡಿದ ಪೀಠ ಸ್ವರ್ಣವಲ್ಲಿ ಪೀಠವಾಗಿದೆ. ಸಮಾಜದ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು. ಶ್ರೇಷ್ಠವಾದ ಹಿಂದೂಧರ್ಮವನ್ನು ಉಳಿಸಿ ಎಂದು ಹೇಳುವ ಸಮಯ ಬಂದಿರುವುದು ದುರದೃಷ್ಟಕರವೆಂದರು. ಎಲ್ಲರೂ ಸೇರಿ ಸತ್ವ ಪೂರ್ಣವಾದ ಹಿಂದೂ ಸನಾತನ ಧರ್ಮವನ್ನು ರಕ್ಷಿಸೋಣ ಎಂದರು.



**ಶಿರಳಗಿ ಚೈತನ್ಯ ರಾಜರಾಮ ಕ್ಷೇತ್ರದ**
**ಶ್ರೀ ಶ್ರೀ ಬ್ರಹ್ಮಾನಂದ ಭಾರತೀ ಸ್ವಾಮಿಗಳು**



**ಶ್ರೀ ನಲೆಮಾವು ಮಠದ**
**ಶ್ರೀ ಮಾಧವಾನಂದ ಭಾರತೀ ಸ್ವಾಮಿಗಳು**



**ಗುರು ಪೂರ್ಣಿಮೆಯ ದಿನದಂದು ಮಹಾಸಭಾಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ, ಉಪಾಧ್ಯಕ್ಷ ಶಶಿಭೂಷಣ ಹೆಗಡೆ ಹಾಗೂ ಸಂಘಟನಾ ಕಾರ್ಯದರ್ಶಿ ಜಯಸಿಂಹ ಇವರು ಶ್ರೀ ಬ್ರಹ್ಮಾನಂದ ಭಾರತೀ ಹಾಗೂ ಶ್ರೀ ಮಾಧವಾನಂದ ಭಾರತೀ ಸ್ವಾಮಿಗಳನ್ನು ಸಂದರ್ಶಿಸಿ, ಆಶೀರ್ವಾದ ಪಡೆದರು.**

# ಬೆಂಗಳೂರಿನಲ್ಲಿ ಹರಿಹರಪುರ ಶ್ರೀಗಳ ಚಾತುರ್ಮಾಸ್ಯ

## ಚಿತ್ತ ಶುದ್ಧಿಗೆ ಪ್ರೇರಣೆ ನೀಡುವ ಕಾಲ ಚಾತುರ್ಮಾಸ್ಯ

**– ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮಿಗಳು**



**ಶ್ರೀಗಳ ಪಾದ ಪೂಜೆಯನ್ನು ಮಾಡಿ ಫಲ–ಪುಷ್ಪ ಸಮರ್ಪಿಸುತ್ತಿರುವ ಸಂಸದ ತೇಜಸ್ವಿ ಸೂರ್ಯರವರು.**

ಮನುಷ್ಯನ ಉನ್ನತಿ ಅವನತಿಗೆ ಕಾರಣವೇ ಮನಸ್ಸು. ಇಂಥ ಮನಸ್ಸೇ ಸಕಲ ಸುಖ ದುಃಖದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಆದ್ದರಿಂದ ಜೀವನದಲ್ಲಿ ಪರಿಪೂರ್ಣತೆ ಸಾಧಿಸಲು ಮನಸ್ಸು ಶುದ್ಧವಾಗಿರಬೇಕು. ಎಲ್ಲ ಯಶಸ್ಸಿಗೂ ಇದೇ ಪ್ರಧಾನ ಅಂಶ. ಮನುಷ್ಯ ಜೀವನದಲ್ಲಿ ವೈಯಕ್ತಿಕ ಉನ್ನತಿ, ಕುಟುಂಬದ ಕ್ಷೇಮ, ಸಮಾಜದ ಹಿತ, ದೇಶದ ಅಭಿವೃದ್ಧಿ, ವಿಶ್ವದ ಕಲ್ಯಾಣವನ್ನು ಬಯಸುತ್ತ ಸಾತ್ವಿಕ ಜೀವನ ನಡೆಸಿದರೆ, ಅದು ಪರಿಪೂರ್ಣವೆನಿಸುತ್ತದೆ. ಶುದ್ಧ ಅಂತಕರಣದಿಂದ ಭಗವಂತನನ್ನು ಆರಾಧಿಸುವುದಕ್ಕೆ ಚಾತುರ್ಮಾಸ್ಯ ಪ್ರಶಸ್ತ ಕಾಲ. ವರ್ಷದಲ್ಲಿ ಕೊನೆ ಪಕ್ಷ ನಾಲ್ಕು ತಿಂಗಳಾದರೂ ಮನುಷ್ಯ ಆಧ್ಯಾತ್ಮಿಕ ವಿಚಾರದ ಕಡೆಗೆ ಗಮನ ಕೊಡಲಿ ಎಂದು ಈ ವ್ರತ ಆಚರಿಸಲಾಗುತ್ತಿದೆ ಎಂದು ಚಾತುರ್ಮಾಸ್ಯ ಪ್ರಯುಕ್ತ ಬೆಂಗಳೂರಿನಲ್ಲಿ ನಡೆದ ಶ್ರೀಗಳ ಪುರಪ್ರವೇಶ ಕಾರ್ಯಕ್ರಮದಲ್ಲಿ **ಶ್ರೀ ಆದಿಶಂಕರಾಚಾರ್ಯ ಶಾರದಾಲಕ್ಷ್ಮೀನರಸಿಂಹ ಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿಗಳು** ಆಶೀರ್ವಚನ ನೀಡುತ್ತಾ ತಿಳಿಸಿದರು. ಈ ಸಂದರ್ಭದಲ್ಲಿ ಸ್ವಾಮಿಗಳು ಗುರುಪೂರ್ಣಿಮೆಯ ಮಹತ್ವವನ್ನು ಹೀಗೆ ತಿಳಿಸಿದರು.

### ಗುರುಪೂರ್ಣಿಮೆ ಮಹತ್ವ :

ಈ ದೇಹ ಬಿಟ್ಟ ನಂತರ ನಾನು ಎಂಬುದಕ್ಕೆ ಅಸ್ತಿತ್ವ ಇದೆಯಾ? ಇದ್ದರೆ ಯಾವ ಆಧಾರದಲ್ಲಿ ನಿಂತಿದೆ. ಈ ಎಲ್ಲ ವಿಚಾರಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಅನಾದಿ ಕಾಲದಿಂದಲೂ ಅತ್ಯಂತ ಶ್ರೇಷ್ಠವಾದ, ಅನುಭವಕ್ಕೆ ಬರುವಂತೆ ಅಸಾಧ್ಯವಾದ ಜ್ಞಾನಸಂಪತ್ತನ್ನು ನಮ್ಮ ಹಿರಿಯರ, ಋಷಿ ಮುನಿಗಳ ಗುರುಪರಂಪರೆ ಬಿಟ್ಟುಹೋಗಿದೆ. ಆತ್ಮವಿಶ್ವಾಸದಿಂದ ಬದುಕಬೇಕೆಂದರೆ, ನಮಗೆ ಜ್ಞಾನದ ಬೆಳಕು ಜೀವನದಲ್ಲಿ ಪ್ರತೀ ಹೆಜ್ಜೆಗೂ ಬೇಕು. ಆದ್ದರಿಂದ ಅಂಥ ಜ್ಞಾನ ಸಂಪತ್ತಿನ



ಸಂರಕ್ಷಣೆ ಮಾಡಬೇಕು. ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆ ನಿಟ್ಟಿನಲ್ಲಿ ಬದುಕು ಸಾಗಿಸಬೇಕು ಎಂಬ ಕಾರಣಕ್ಕೆ ಪ್ರತೀ ವರ್ಷ ಆಷಾಢ ಪೌರ್ಣಿಮಿ ದಿನ ನಮಗೆ ಜ್ಞಾನ ಸಂಪತ್ತು ನೀಡಿದ ಋಷಿ ಪರಂಪರೆ, ಗುರು ಪರಂಪರೆ ಸ್ಮರಿಸಿ, ಅವರಿಂದ ಪ್ರೇರಣೆ ಪಡೆದು ಜೀವನದಲ್ಲಿ ಜ್ಞಾನಾರ್ಜನೆ ಮಾಡುವ ಸಂಕಲ್ಪ ಕೈಗೊಳ್ಳುವ ಗುರುಪೂರ್ಣಿಮೆಯನ್ನು ನಾಡವೆಲ್ಲ ಆಚರಿಸಬೇಕು. ಮನುಷ್ಯನ ಬದುಕಿನಲ್ಲಿ ದುಃಖ, ಮುಪ್ಪು ಅಥವಾ ವಾರ್ಧಖ್ಯದ ದುಃಖ ಮತ್ತು ಮರಣದ ದುಃಖ ನಿಶ್ಚಿತ. ಅದಕ್ಕೆ ಕಾರಣ ನಮಗೆ ನಮ್ಮ ಮೂಲ ಸ್ವರೂಪದ ಅರಿವು ಇಲ್ಲದಿರುವುದು. ಇದರಿಂದ ಪಾರಾಗಲು ದಾರಿಯೆಂದರೆ ಆತ್ಮವನ್ನು ಅರಿವುದೇ. ಎಲ್ಲಿಯವರೆಗೆ ನಾವು ನಾನೆಂದರೆ ದೇಹ, ಇಂದ್ರಿಯ, ಬುದ್ಧಿ, ಮನಸ್ಸು, ಪ್ರಾಣ ಎಂದು ಗುರುತಿಸಿಕೊಳ್ಳುತ್ತೇವೋ ಅಲ್ಲಿಯವರೆಗೆ ದುಃಖ ತಪ್ಪಿದ್ದಲ್ಲ. ನಾವು ವಿಪರೀತ ಸಂಶೋಧನೆ ಮಾಡುತ್ತೇವೆ. ಚಂದ್ರಗ್ರಹ ತಲುಪಿದ್ದೇವೆ. ಮಂಗಳನ ಮೇಲೂ ಕಾಲಿಡುತ್ತಿದ್ದೇವೆ. ಆದರೆ, ನಮ್ಮ ಬಗ್ಗೆಯೇ ಸ್ಪಷ್ಟ ಜ್ಞಾನ ಇಲ್ಲ. ಆ ಅರಿವು ಬರುವವರೆಗೆ ನಮಗೆ ದುಃಖ ತಪ್ಪಿದ್ದಲ್ಲ. ಇಂಥ ದುಃಖ ತಪ್ಪಿಸುವ ಮಾರ್ಗವೇ ವೇದಾಂತ. ವೇದಾಂತದ ಪಿತಾಮಹ ಭಗವಾನ್ ವೇದವ್ಯಾಸರು. ಆತ್ಮಜ್ಞಾನ ಹೇಗೆ ಹೊಂದಬೇಕೆಂದು ಅನುಭವಕ್ಕೆ ಬರುವಂತೆ ತೋರಿಸಿಕೊಟ್ಟವರು ವೇದವ್ಯಾಸರು. ಹೀಗಾಗಿ ಗುರುಪೂರ್ಣಿಮೆಯಲ್ಲಿ ವ್ಯಾಸರಿಗೆ ಎಲ್ಲರಿಗಿಂತ ದೊಡ್ಡ ಸ್ಥಾನ. ಗುರು ಅಂದರೆ ಜ್ಞಾನ. ಹಾಗಾಗಿ ಗುರುಪೂರ್ಣಿಮೆಯನ್ನು ವ್ಯಾಸಪೂರ್ಣಿಮೆ ಎಂದು ಆಚರಿಸಲಾಗುತ್ತದೆ ಎಂದು ಶ್ರೀಗಳು ತಿಳಿಸಿದರು.

### ಚಾತುರ್ಮಾಸ್ಯದ ಹಿನ್ನೆಲೆ :

ಚಾತುರ್ಮಾಸ್ಯ ವ್ರತವನ್ನು ಅನಾದಿ ಕಾಲದಿಂದ ಬೇರೆ ಬೇರೆ ರೀತಿ ನಮ್ಮ ಋಷಿಮುನಿಗಳು ಆಚರಿಸಿಕೊಂಡು ಬರುತ್ತಿದ್ದಾರೆ. ಭಗವಾನ್ ವ್ಯಾಸರು ಹಾಗೂ ಅವರ ನಂತರ ಬಂದವರು ಮಹಾಭಾರತ ಕಾಲದ ನಂತರ ಚಾತುರ್ಮಾಸ್ಯಕ್ಕೊಂದು ಸ್ಪಷ್ಟ ಚೌಕಟ್ಟು ಹಾಕಿದ್ದಾರೆ. ಇದಕ್ಕೆ

ಎರಡು ಕಾರಣ. ಮೊದಲನೆಯದು ನಾವು ಜ್ಞಾ ಪರಂಪರೆಗೆ ಗೌರವ ಕೊಡುವುದು. ಯಾರು ತಪಸ್ಸು ಮಾಡಿ ಅಗಾಧ ಸೃಷ್ಟಿ ರಹಸ್ಯವನ್ನು ಅಮೂಲ್ಯ ತತ್ತ್ವವನ್ನು ಜಗತ್ತಿನ ಕಲ್ಯಾಣಕ್ಕಾಗಿ ಬಿಟ್ಟುಹೋಗಿದ್ದಾರೋ, ಅವರೆಲ್ಲರನ್ನು ಶ್ರದ್ಧಾಭಕ್ತಿಯಿಂದ ಸ್ಮರಿಸಿ, ಅವರ ಅನುಗ್ರಹಕ್ಕಾಗಿ ಪ್ರಾರ್ಥನೆ ಮಾಡುವುದು. ಚಾತುರ್ಮಾಸ್ಯವೆಂದರೆ ನಾಲ್ಕು ಮಾಸಗಳು ಅಂದರೆ, ಆಷಾಢಶುದ್ಧ ಪೌರ್ಣಮಿಯಿಂದ ಕಾರ್ತಿಕ ಶುದ್ಧ ದ್ವಾದಶಿವರೆಗೆ ಅತ್ಯಂತ ಶುಭಕರವಾಗಿರುವ ವಿವರಗಳು ಈ ಸಂದರ್ಭದಲ್ಲಿ ಮಾಡುವಂಥ ಆಧ್ಯಾತ್ಮಿಕ ಉಪಚಾರಗಳು ತ್ವರಿತವಾಗಿ ಜಗತ್ತಿಗೆ ಕಲ್ಯಾಣ ಉಂಟು ಮಾಡುತ್ತವೆ ಎನ್ನುವುದು ನಂಬಿಕೆ. ಆಷಾಢ ಶುದ್ಧ ಏಕಾದಶಿಯಿದ ಕಾರ್ತೀಕ ಶುದ್ಧ ಏಕಾದಶಿವರೆಗೆ ಮಹಾ ವಿಷ್ಣು ಯೋಗ ನಿದ್ದೆಯಲ್ಲಿರುತ್ತಾರೆ. ಈ ಅವಧಿಯಲ್ಲಿ ಯತಿಗಳು ವಿಶೇಷ ವ್ರತ ಆಚರಿಸುವ ಮೂಲಕ ಲೋಕಕಲ್ಯಾಣಕ್ಕೆ ಪ್ರಾರ್ಥಿಸಬೇಕು ಎಂದು ಹಿರಿಯರು ಹೇಳಿದ್ದಾರೆ. ಈ ಕಾರಣಕ್ಕಾಗಿ ಅನಾದಿ ಕಾಲದಿಂದ ಭಾರತೀಯ ಪರಂಪರೆಯಲ್ಲಿ ಚಾತುರ್ಮಾಸ್ಯ ವ್ರತಾಚರಣೆ ಮಾಡಲಾಗುತ್ತಿದೆ ಎಂದರು.

**ಪಂಚಕೋಟಿ ಪಂಚಾಕ್ಷರಿ ಜಪ ಸಂಕಲ್ಪ ಈ ಬಾರಿ ಬೆಂಗಳೂರಿನಲ್ಲಿ ನಡೆಯುತ್ತಿರುವ ಚಾತುರ್ಮಾಸ್ಯದಲ್ಲಿ ಪಂಚಕೋಟಿ ಪಂಚಾಕ್ಷರಿ ಜಪ ಮಾಡುವ ಸಂಕಲ್ಪದೊಂದಿಗೆ ವ್ರತವನ್ನು ಆರಂಭಿಸುತ್ತಿದ್ದೇವೆ ಜಾತಿ, ಮತ, ಪಂಥ, ಸಂಪ್ರದಾಯಗಳನ್ನು ಮೀರಿ ಎಲ್ಲ ಸಮುದಾಯದ ಸರ್ವರೂ ಈ ಜಪ ಯಜ್ಞದಲ್ಲಿ ಭಾಗಿಗಳಾಗಿ ಪರಶಿವನ ಅನುಗ್ರಹಕ್ಕೆ ಪಾತ್ರರಾಗಿ ತನ್ಮೂಲಕ ಸನಾತನ ಧರ್ಮ ಹಾಗೂ ದೇಶದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಿ ಎಂದು ಶ್ರೀಗಳು ಕರೆ ನೀಡಿದರು.**

ಇದಕ್ಕೂ ಮೊದಲು ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರೂ ಹಾಗೂ ಚಾತುರ್ಮಾಸ್ಯ ಮಹೋತ್ಸವ ಸಮಿತಿ ಗೌರವ ಸಲಹೆಗಾರರಾದ ಶ್ರೀ ಅಶೋಕ ಹಾರನಹಳ್ಳಿ ಅವರು ಮಾತನಾಡುತ್ತಾ, ಚಾತುರ್ಮಾಸ ಸಂದರ್ಭದಲ್ಲಿ ವಿಶೇಷ ಅನುಷ್ಠಾನ–ಉಪಾಸನಗಳಲ್ಲಿ ತೊಡಗಿ, ಭಗವತ್ ಆರಾಧನೆಯಲ್ಲಿ ನಿರತರಾಗಿರುವ ಯತಿಗಳ ದರ್ಶನ ಪಡೆದು ಅವರ ಸೇವೆ ಮಾಡುವುದು ಗೃಹಸ್ಥರಿಗೆ ಶ್ರೇಯಸ್ಕರವಾಗಿದೆ. ಜಾತಿ, ಮತ, ಪಂಥ, ಸಂಪ್ರದಾಯಗಳನ್ನು ಮೀರಿ ಸಮಗ್ರ ಹಿಂದೂ ಸನಾತನ ಧರ್ಮದ



ಒಗ್ಗಟ್ಟಿಗೆ ಸಂರಕ್ಷಣೆಗೆ, ಉನ್ನತಿಗೆ ಶ್ರಮಿಸುತ್ತಿರುವ ಹರಿಹರಪುರದ ಎಲ್ಲಾ ಮಹತ್ವದ ಯೋಜನೆಗಳಲ್ಲಿ ಮಹಾಸಭೆ ಎಲ್ಲ ರೀತಿಯಲ್ಲೂ ಭಾಗವಹಿಸಿ, ಸ್ವಾಮಿಗಳ, ಮಠದ ಜೊತೆ ಸದಾ ಇರುತ್ತದೆ ಎಂಬ ಆಶ್ವಾಸನೆ ನೀಡಿದರು.

ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯರವರು ಮಾಡಿದ ಪಾದ ಪೂಜೆಯೊಂದಿಗೆ ಕಾರ್ಯಕ್ರಮವು ಆರಂಭವಾಯಿತು. ಚಾತುರ್ಮಾಸ ಮಹೋತ್ಸವ ಸಮಿತಿಯ ಅಧ್ಯಕ್ಷರಾದ, ಶಾಸಕ ಶ್ರೀ ಗೋಪಾಲ್ಯನವರು ಸ್ವಾಗತ ಭಾಷಣ ಮಾಡುತ್ತ ಶ್ರೀಗಳ ಈ ವರ್ಷದ ಚಾತುರ್ಮಾಸವು ಮಹಾಲಕ್ಷ್ಮಿ ಬಡಾವಣೆಯ ಜನತೆ ಮಾತ್ರವಲ್ಲದೆ ಇಡಿ ಬೆಂಗಳೂರು ನಗರದ ನಾಗರಿಕರ ಭಾಗ್ಯವಾಗಿದೆ ಎಂದು ತಿಳಿಸಿದರು.

**ಪ್ರಸ್ತಾವಿಕ ನುಡಿಗಳನ್ನು ನುಡಿದ ಚಾತುರ್ಮಾಸ್ಯ ಮಹೋತ್ಸವ ಸಮಿತಿಯ ಪ್ರಧಾನ ಸಂಚಾಲಕರಾದ ಶ್ರೀ ರಾಘವೇಂದ್ರ ಭಟ್ಟರು ಈ ಚಾತುರ್ಮಾಸ್ಯ ಮಹೋತ್ಸವದ ಪೂರ್ಣ ಕಾರ್ಯಕ್ರಮಗಳ ಪರಿಚಯವನ್ನು ನೀಡಿದರು. ಮೂರು ತಿಂಗಳ ನಡೆಯುವ ಚಾತರ್ಮಾಸ್ಯದ ಎಲ್ಲಾ ಕಾರ್ಯಕ್ರಮಗಳಿಗು ಭಕ್ತರು ಆಗಮಿಸಿ ಗುರುಗಳ ಅನುಗ್ರಹಕ್ಕೆ ಪಾತ್ರರಾಗಲು ಕೋರಿದರು. ಈ ಮಹೋತ್ಸವವು ಯಶಸ್ವಿಯಾಗಲು ಎಲ್ಲಾ ಭಕ್ತರುಗಳು ಉದಾರವಾಗಿ ತನು–ಮನ–ಧನ ಮತು ವಸ್ತು ರೂಪದಲ್ಲಿ ಭಿಕ್ಷಾ ಸಮರ್ಪಣೆ ಮಾಡಿ ಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕು ಎಂದು ಕೋರಿದರು.**

## ಮೈಸೂರಿನಲ್ಲಿ ಶ್ರೀ ಪೇಜಾವರ ಮಠದ ಶ್ರೀಗಳ 36ನೇ ಚಾತುರ್ಮಾಸ್ಯ



ಮೈಸೂರಿನ ಶ್ರೀ ಕೃಷ್ಣಧಾಮದಲ್ಲಿ ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರ 36 ನೇ ಚಾತುರ್ಮಾಸ್ಯ ವ್ರತದ ಸ್ವಾಗತ ಸಮಾರಂಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ನಂ. ಶ್ರೀಕಂಠಕುಮಾರ್, ಕಾರ್ಯಕಾರಿ ಸದಸ್ಯರಾದ ಎಸ್ ರವಿಕುಮಾರ್, ಶಂಕರನಾರಾಯಣ ರವರು ಫಲಪುಷ್ಪ ಸಮರ್ಪಿಸಿದರು. ಕೃಷ್ಣರಾಜ ಕ್ಷೇತ್ರದ ಶಾಸಕರಾದ ಟಿ.ಎಸ್. ಶ್ರೀವತ್ಸ ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

# ಬ್ರಾಹ್ಮಣರು ಸ್ಪರ್ಧಾತ್ಮಕ ಪರೀಕ್ಷೆಗೆ ಆದ್ಯತೆ ನೀಡಿ

## ಭಗವಂತ ಪ್ರತಿಭೆ ನೀಡಿದ್ದರೂ ಅದನ್ನು ಸಮುದಾಯ ಬಳಸುತ್ತಿಲ್ಲ ಶ್ರೀ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ




ಬ್ರಾಹ್ಮಣ ಸಮುದಾಯಕ್ಕೆ ಭಗವಂತ ಪ್ರತಿಭೆ ನೀಡಿದ್ದರೂ ಅದನ್ನು ಬಳಸಿಕೊಳ್ಳುತ್ತಿಲ್ಲ. ಸಮುದಾಯದ ಯುವ ಜನರು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಆದ್ಯತೆ ನೀಡಬೇಕು ಎಂದು ಸುಬ್ರಹ್ಮಣ್ಯ ಮಠದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಕರೆ ನೀಡಿದರು.

ಅಖಿಲ ಕರ್ನಾಟಕ ಮಾಧ್ವ ಮಹಾಸಭಾದಿಂದ ನಗರದಲ್ಲಿ ಶನಿವಾರ ಆಯೋಜಿಸಿದ್ದ 4ನೇ ವಾರ್ಷಿಕ ಮಹಾಸಭೆ ಹಾಗೂ ಸಮುದಾಯದ ನೂತನ ಸಚಿವರು ಮತ್ತು ಶಾಸಕರಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಬ್ರಾಹ್ಮಣ ಸಮುದಾಯಕ್ಕೆ ಭಗವಂತನು ಸಾಕಷ್ಟು ಪ್ರತಿಭೆ ನೀಡಿದ್ದಾನೆ. ಆದ್ದರಿಂದ ಸಮುದಾಯದ ಯುವ ಜನತೆ ಐಎಎಸ್, ಕೆಎಎಸ್ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸಜ್ಜಾಗಬೇಕು. ಆಡಳಿತಾತ್ಮಕ ಸೇವೆಗಳಲ್ಲಿ ಹೆಚ್ಚಾಗಿ ಆಯ್ಕೆಯಾಗಬೇಕು. ಜನಸಂಖ್ಯೆಯಲ್ಲಿ ಶೇಕಡಾ ಎರಡೂವರೆಯಷ್ಟಿದ್ದರೂ ನಂಬಿಕೆಗೆ ಅರ್ಹರಾಗಿರುವುದರಿಂದ ನಮ್ಮತನವನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಡವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಅಗತ್ಯವಾದ ತರಬೇತಿ ನೀಡಲು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಮುಂದಾಗಬೇಕು. ಸಾಧನೆ ಮಾಡದೇ ಬದುಕು ವ್ಯರ್ಥ ಆಗುವುದಕ್ಕೆ ಅವಕಾಶ ಮಾಡಿಕೊಡಬಾರದು. ಮಾನವ ಜನ್ಮ ಶ್ರೇಷ್ಠವಾಗಿದ್ದು ಸಾಧನೆ ಮಾಡಬೇಕು. ಸಮಾಜಕ್ಕೆ ಉಪಯೋಗವಾಗುವ ಕೆಲಸಗಳನ್ನು ಮಾಡಬೇಕು ಎಂದು ವಿವರಿಸಿದರು.

ಜಗತಿನಲ್ಲಿ ತಾರತಮ್ಯ ನಿವಾರಣೆ ಆಗಬೇಕಿದೆ. ಮುಂದಿನ ದಶಕಗಳ ಬಳಿಕ ಹಿಂದೂ ಸಮಾಜ, ಬ್ರಾಹ್ಮಣ ಸಮುದಾಯ ಹೇಗೆ ಬದಲಾಗುತ್ತದೆ ಎಂಬ ಬಗ್ಗೆ ಗಂಭೀರ ಆಲೋಚನೆ ಮಾಡಬೇಕಿದೆ. ಅಖಿಲ ಕರ್ನಾಟಕ ಮಾಧ್ವ ಮಹಾಸಭಾವು ಸಮುದಾಯದ ಅಭಿವೃದ್ಧಿಗೆ ಹಲವು ಉತ್ತಮ ಕಾರ್ಯಗಳನ್ನು ಕೈಗೊಳ್ಳುತ್ತಿದೆ ಎಂದು ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಮುಳಬಾಗಿಲು ಶ್ರೀ ಪಾದರಾಜ ಮಠದ ಸಂಜಯನಿಧಿ ತೀರ್ಥ ಸ್ವಾಮೀಜಿ, ಶಾಸಕ ಉದಯ ಗರುಡಾಚಾರ್, ಮಹಾಸಭಾ ಅಧ್ಯಕ್ಷ ಡಾ॥ ಮುರಳೀಧರ್ ಉಪಸ್ಥಿತರಿದ್ದರು.

# ಬೆಂಗಳೂರು ಉತ್ತರ ವಲಯ ಮಹಿಳಾ ವಿಭಾಗದ ಉದ್ಘಾಟನಾ ಸಮಾರಂಭ




ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೆಂಗಳೂರು ಉತ್ತರ ವಲಯ ಮಹಿಳಾ ವಿಭಾಗ ಉದ್ಘಾಟನಾ ಸಮಾರಂಭದ ಕಾರ್ಯಕ್ರಮವನ್ನು ರಾಜ್ಯದ ಆರೋಗ್ಯ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿರವರು, ಮಹಿಳಾ ವಿಭಾಗದ ರಾಜ್ಯ ಸಂಚಾಲಕಿಯಾದ ಡಾ. ಶುಭಮಂಗಳ ಸುನಿಲ್ ಹಾಗೂ ಉತ್ತರ ವಲಯದ ಮಹಾಸಭಾ ಸಂಚಾಲಕರಾದ ಎಲ್.ಜಯಸಿಂಹ, ನಾಗಭೂಷಣ್, ಪ್ರಕಾಶ್ ಅಟ್ಟೂರು ವೆಂಕಟೇಶ್, ಸುರೇಶ್ ಶಾಸ್ತ್ರಿ, ರಘುವೀರ್, ಉತ್ತರ ವಲಯದ ಮಹಿಳಾ ಸಂಚಾಲಕಿ ಶ್ರೀಮತಿ ಶೈಲಜಾ ಹಾಗೂ ಚಂದ್ರಶೇಖರ ಹಾಜರಿದ್ದರು, ಈ ಕಾರ್ಯಕ್ರಮ ಆಯೋಜಿಸಿ ನೇಮಕಾತಿ ಪತ್ರ ಹಾಗೂ ಗುರುತಿನ ಚೀಟಿ ವಿತರಣೆ ಮಾಡಲಾಯಿತು,

# ಮಂಡ್ಯ ಜಿಲ್ಲಾ ವಿಪ್ರ ಬಳಗ – ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಸಮಾರಂಭ







ಬ್ರಾಹ್ಮಣರು, ಬ್ರಾಹ್ಮಣ ಜನಾಂಗ, ಸಮಾಜದಲ್ಲಿ ಸ್ವಾಭಿಮಾನಿಗಳಾಗಿ ಬೆಳೆಯಬೇಕು. ನಗರದಲ್ಲಿ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ, ಮಂಡ್ಯ ಸಿಪಿವಿ ಸಮಾಜದಲ್ಲಿ ಅಲ್ಪಸಂಖ್ಯಾತರಾಗಿರುವ ಬ್ರಾಹ್ಮಣ ಸಮಾಜ ಸ್ವಾಭಿಮಾನ, ಬುದ್ಧಿಶಕ್ತಿಯಿಂದ ಉನ್ನತ ಮಟ್ಟದಲ್ಲಿ ಬೆಳೆಯುವ ಪ್ರಯತ್ನ ಮಾಡಬೇಕು. ಇದಕ್ಕೆ ಎಲ್ಲರ ಸಹಕಾರ ಅಗತ್ಯವಾಗಿದ್ದು ಪ್ರಾಚೀನ ಸಂಸ್ಕೃತಿಯಾದ ಸಂಸ್ಕಾರಗಳನ್ನು ತಮ್ಮ ದೈನಂದಿಕ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಸಮಾಜದ ಒಂದು ಶಕ್ತಿಯಾಗಿ ಬೆಳೆಯಲು ಕಾರ್ಯಶೀಲರಾಗಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಅಶೋಕ್ ಹಾರನಹಳ್ಳಿ ಅಭಿಪ್ರಾಯಿಸಿದರು. ಅವರು ನಗರದ ಸೇವಾ ಕಿರಣ ವೃದ್ಧಾಶ್ರಮದಲ್ಲಿ ಮಂಡ್ಯ ಜಿಲ್ಲಾ ವಿಪ್ರ ಬಳಗ ಮತ್ತು ಮಂಡ್ಯ ಜಿಲ್ಲಾ ವಿಪ್ರ ಸಮಾಜದ ವತಿಯಿಂದ ಆಯೋಜಿಸಲಾಗಿದ್ದ ಪ್ರತಿಭಾ ಪುರಸ್ಕಾರ, ಧನ ಸಹಾಯ, ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು. ಬ್ರಾಹ್ಮಣ ಸಮಾಜ ಇಂದು ಆರ್ಥಿಕವಾಗಿ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿದ್ದು ಸಮಾಜದಲ್ಲಿ ಮುಂದುವರೆದ ವ್ಯಕ್ತಿಗಳು ಇತರರಿಗೆ ಸಹಾಯ ಮಾಡಿ ಅವರನ್ನು ಮೇಲೆತ್ತುವ ಕಾರ್ಯವಾಗಬೇಕು ಎಂದು ಕರೆ ನೀಡಿದ ಅವರು ಈ ಕುರಿತು ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಎಲ್ಲಾ ವರ್ಗದ ಜನರಿಂದ ಪೂಜಿಸಲ್ಪಡುವ, ಗೌರವಿಸಲ್ಪಡುವ

ಬ್ರಾಹ್ಮಣ ಜನಾಂಗ ಮೂಢನಂಬಿಕೆಗಳ ಮರೆಹೋಗದೆ, ಸಾಂಪ್ರದಾಯಿಕ ಆಚಾರ ವಿಚಾರಗಳನ್ನು ಮೈಗೂಡಿಸಿಕೊಂಡು ಸಮಾಜದಲ್ಲಿ ಬೆಳೆಯಬೇಕಾಗಿದೆ. ಸಮಾಜದ ಬೆಳವಣಿಗೆಗೆ ಪೂರಕವಾಗುವ ರೀತಿಯಲ್ಲಿ ಬ್ರಾಹ್ಮಣ ಮಹಾಸಭೆ ಅನೇಕ ಕಾರ್ಯ ಯೋಜನೆಗಳನ್ನು ಪ್ರಕಟಿಸಿದ್ದು ಅವುಗಳ ಸದುಪಯೋಗವನ್ನು ಎಲ್ಲರೂ ಅವಶ್ಯಕವಾಗಿ ಪಡೆಯಬೇಕು ಎಂದರು. ಎಲ್ಲರೂ ಬ್ರಾಹ್ಮಣ ಸಮಾಜದ ರಾಜ್ಯ ಸಂಘಕ್ಕೆ ಸದಸ್ಯರಾಗಬೇಕು. ಈ ಮೂಲಕ ಜಿಲ್ಲೆ ತಾಲೂಕುಗಳ ಸಮುದಾಯದವರ ಬಗ್ಗೆ ಬ್ರಾಹ್ಮಣ ಮಹಾಸಭೆ ಕಾರ್ಯ ಯೋಜನೆಗೊಳಿಸಿರುವ ಯೋಜನೆಗಳ ಸದುಪಯೋಗ ಪಡೆಯಬೇಕು ಎಂದು ಅಶೋಕ ಹಾರನಹಳ್ಳಿ ಮನವಿ ಮಾಡಿದರು. ಬ್ರಾಹ್ಮಣ ಸಮಾಜವನ್ನು ಮೇಲೆತ್ತುವ ರೀತಿಯಲ್ಲಿ ಜೈನ ಸಮಾಜದ ಜನರನ್ನು ನೋಡಿ ನಾವು ಕಲಿಯಬೇಕಿದೆ ಎಂದವರು ಜಿಲ್ಲಾಮಟ್ಟದಲ್ಲಿ ಬ್ರಾಹ್ಮಣ ಸಮಾಜವನ್ನು ಸಂಘಟಿಸಲು ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವ ಜಿಲ್ಲಾ ಬ್ರಾಹ್ಮಣ ಮುಖಂಡ ಜಿ.ವಿ ನಾಗರಾಜು ಅವರ ಶ್ರಮ ಸಾರ್ಥಕವಾದುದು ಎಂದರು. ರಾಜ್ಯ ಸರ್ಕಾರ ಸ್ಥಾಪಿಸಿರುವ ಬ್ರಾಹ್ಮಣ ಪ್ರಾಧಿಕಾರದ ಸೌಲಭ್ಯಗಳನ್ನು ವಿದ್ಯಾ ಕ್ಷೇತ್ರ, ಉದ್ಯೋಗ ಇತ್ಯಾದಿ ಪ್ರಕಾರಗಳಲ್ಲಿ ಪಡೆಯಲು ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ಸಮುದಾಯದವರು ಕಾರ್ಯಶೀಲರಾಗುವಂತೆ ಅಶೋಕ ಹಾರನಹಳ್ಳಿಯವರು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದ ಗಣ್ಯರುಗಳನ್ನು ಸಾಧಕರನ್ನು ಗೌರವಿಸಿ ಸನ್ಮಾನಿಸಿ ಮಾತನಾಡಿದ ರಾಜ್ಯ ನಿವೃತ್ತ ಪೊಲೀಸ್ ಆಯುಕ್ತ ಭಾಸ್ಕರ್ ರಾವ್ ಬೇರೆಯವರಿಗೆ ನಾವು ಬೋಧನೆ ಮಾಡುವ ಮೊದಲು ತಾವು ಅದನ್ನು ಎಷ್ಟು ಅನುಷ್ಠಾನಗೊಳಿಸಿದ್ದೇವೆ ಎಂಬುದನ್ನು ಮನಗಾಣಬೇಕಾಗಿದೆ. ಸಂಪ್ರದಾಯಗಳ ಇಂದಿನ ಮಹತ್ವ, ಆರಾಧನೆ ಮತ್ತು ಮೌಢ್ಯತೆಯಿಂದ ಹೊರ ಬಂದು ವಾಸ್ತವ ಸತ್ಯವನ್ನು ಮತ್ತು ಅವುಗಳಿಂದ ಆಗುವ ಪರಿಣಾಮಗಳ ಕುರಿತು ಬ್ರಾಹ್ಮಣ ಸಮುದಾಯದವರು ಎಚ್ಚೆತ್ತುಕೊಂಡು ತಮ್ಮ ಸಂಪ್ರದಾಯಿಕತನವನ್ನು ಬಿಡದೆ ಸಮಾಜದಲ್ಲಿ ಉನ್ನತ ಗೌರವ ಗಳಿಸುವಂತಾಗಬೇಕು ಎಂದರು.




ನಮ್ಮ ಅಭಿವೃದ್ಧಿಯನ್ನು ನಾವೇ ಮಾಡಿಕೊಳ್ಳಬೇಕಾಗಿದೆ ಎಂದ ಅವರು ಬಲಾಢ್ಯರು ಅವರ ಅಭಿವೃದ್ಧಿಯನ್ನು ತಮ್ಮ

ಸಂಘಗಳ, ಸಂಘಟನಾತ್ಮಕ ಶಕ್ತಿಯಿಂದ ನೆರವೇರಿಸಿಕೊಳ್ಳುವವರು ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ಬೆಂಬಲ ನೀಡಲಿದೆ ಎಂದ ಅವರು ರಾಜ್ಯದಲ್ಲಿ ಶೇಕಡ ಎರಡರಷ್ಟಿರುವ ಬ್ರಾಹ್ಮಣ ಸಮುದಾಯ ರಾಜಕೀಯವಾಗಿ, ಆರ್ಥಿಕವಾಗಿ ತೀರಾ ಕಡೆಗಣಿಸಲ್ಪಡುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ರಾಜ್ಯ ಹಾಗೂ ರಾಷ್ಟ್ರದ ಸೇವೆಯಲ್ಲಿ ಬ್ರಾಹ್ಮಣ ಸಮುದಾಯದ ಮುಖಂಡರ ಕೊಡುಗೆ ಅನನ್ಯವಾಗಿದೆ. ಇದಕ್ಕೆ ತಾಂತ್ರಿಕ ಕ್ಷೇತ್ರದಲ್ಲಿ ಶ್ರಮಿಸಿದ ಭಾರತರತ್ನ ವಿಶ್ವೇಶ್ವರಯ್ಯ ಅವರೇ ಸಾಕ್ಷಿಯಾಗಿದ್ದಾರೆ ಎಂದು ಅಭಿಮಾನಿಸಿದ ಅವರು ಸಮಾಜದ ಪ್ರಗತಿಯ ಜೊತೆಯಲ್ಲಿ ಅನೇಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರನ್ನು ಗುರುತಿಸಿ ಗೌರವಿಸುವುದು ಸಮಾಜಕ್ಕೆ ಕೀರ್ತಿ ತರುವ ಸಂಗತಿ ಆಗಿದೆ ಎಂದರು.

ಇದೇ ಸಂದರ್ಭದಲ್ಲಿ ಧಾರ್ಮಿಕ ಕ್ಷೇತ್ರದಲ್ಲಿ ಶ್ರೀ ವೆಂಕಟೇಶ್ ವರಹ ವಿಠಲದಾಸರು, ವೇ.ಬ್ರ. ಶ್ರೀ ಪ್ರಕಾಶ್ ಜೋಯಿಸ್, ಕಾಯಕ ಕ್ಷೇತ್ರದಲ್ಲಿ ಎಲ್.ಐ.ಸಿ. ವೆಂಕಟೇಶ್, ಕೃಷಿ ಕ್ಷೇತ್ರದಲ್ಲಿ ಶ್ರೀ ಕೆ.ಜಿ. ಅನಂತರಾಮ್, ಪತ್ರಿಕೆ ಕ್ಷೇತ್ರದಲ್ಲಿ ಶ್ರೀ ಡಿ.ಎನ್.ಶ್ರೀಪಾದು, ಗಾಯನ ಕ್ಷೇತ್ರದಲ್ಲಿ ಕಲಾಶ್ರೀ ಸಿ.ಪಿ.ವಿದ್ಯಾಶಂಕರ್, ಸಮಾಜ ಸೇವೆಯಲ್ಲಿ ಶ್ರೀ ಹರೀಶ್ ಹೆಮ್ಮನಹಳ್ಳಿ ಹಾಗೂ ಹೋಟೆಲ್ ಉದ್ಯಮದಲ್ಲಿ ಶ್ರೀಮತಿ ಪ್ರೇಮ ಹಂದೆ ಅವರನ್ನು ಆತ್ಮೀಯವಾಗಿ ಗೌರವಿಸಿ, ಅಭಿನಂದಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ಶ್ರೀ ಬಿ.ಕೆ. ನಟರಾಜ್ ಜೋಯಿಸ್ ಅವರು ಬ್ರಾಹ್ಮಣ ಸಮುದಾಯದವರು ಸ್ವಾಭಿಮಾನದಿಂದ ಬುದ್ಧಿ ಕುಶಲತೆಯಿಂದ ಸಮಾಜದ ಎಲ್ಲಾ ಪ್ರಕಾರಗಳಲ್ಲಿ ಮುಂದೆ ಬರಬೇಕಾಗಿದೆ. ಇದಕ್ಕೆ ಕೇವಲ ಬುದ್ಧಿಶಕ್ತಿ ಒಂದೇ ಸಾಲದೆ ಆರ್ಥಿಕವಾದ ಬೆಂಬಲವು ಬೇಕಾಗಿದೆ. ಆದ್ದರಿಂದ ಉಳ್ಳವರು ಆರ್ಥಿಕ ಸಂಕಷ್ಟಕ್ಕೀಡಾಗಿರುವ ಸಮುದಾಯದವರಿಗೆ ನೆರವು ನೀಡಿ ಸಮಾಜದ ಮುಖ್ಯವಾಹಿನಿಗೆ ಕರೆದುಕೊಂಡು ಬರಬೇಕಾಗಿದೆ ಎಂದರು. ಈ ನಿಟ್ಟಿನಲ್ಲಿ ಪ್ರತಿಭಾ ಪುರಸ್ಕಾರವಾಗಿ ತಾವು 10,000 ರೂಗಳ ಕೊಡುಗೆ ನೀಡುವುದಾಗಿ ಘೋಷಿಸಿದರು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ ಕಾರ್ಯಕ್ರಮದ ಆಯೋಜಕ ಮಹಾಸಭಾ ನಿರ್ದೇಶಕ ಜಿ.ವಿ. ನಾಗರಾಜು ಅವರು ಕಾರ್ಯಕ್ರಮದ ಉದ್ದೇಶವನ್ನು ವಿವರವಾಗಿ ತಿಳಿಸಿ, ದುರ್ಬಲರಿಗೆ ಅಶಕ್ತರಿಗೆ ನೆರವಾಗುವ ನಿಟ್ಟಿನಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆಯೋಜಿಸಿರುವ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಮಾಜಿ ಸಚಿವ ಎಂ .ಎಸ್. ಆತ್ಮಾನಂದ ಅವರು ತಮ್ಮ ರಾಜಕೀಯ, ಸೇವಾ ಕ್ಷೇತ್ರದ ಬೆಳವಣಿಗೆಯಲ್ಲಿ ಇನ್ನಿತರ ಎಲ್ಲಾ ಧಾರ್ಮಿಕ ಸೇವಾ ಕಾರ್ಯಗಳಲ್ಲಿ ಬ್ರಾಹ್ಮಣ ಸಮುದಾಯದ ಮುಖಂಡರ ಮಾರ್ಗದರ್ಶನ ನನಗೆ ಸಿಕ್ಕಿರುವುದು ಸೌಭಾಗ್ಯವಾಗಿದೆ. ಇಂತಹ ಮಹಾನೀಯರ ಆದರ್ಶಗಳ ಅನುಷ್ಠಾನದ ಜೊತೆ ಜೊತೆಯಾಗಿಯೇ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕಾಗಿದೆ ಎಂದು ಆಶಿಸಿದರು.

ಇದೇ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಹಾಗೂ ಪಿಯುಸಿಯಲ್ಲಿ ಅತ್ಯಧಿಕ ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು



ಪುರಸ್ಕರಿಸಲಾಯಿತು. ಆರ್ಥಿಕವಾಗಿ ತೀರ ಸಂಕಷ್ಟಕ್ಕೀಡಾದ ಹತ್ತಾರು ಸಮುದಾಯದ ಕುಟುಂಬಗಳಿಗೆ ಆಹಾರದ ಕಿಟ್ ಗಳನ್ನು ವಿತರಿಸಲಾಯಿತು.. ವೇದಿಕೆಯಲ್ಲಿ ಬ್ರಾಹ್ಮಣ ಸಮಾಜ ಮುಖಂಡರಾದ ಶ್ರೀ ರವೀಂದ್ರ, ಶ್ರೀ ಕಾರ್ತಿಕ್ ಉಪಸ್ಥಿತರಿದ್ದರು. ವೇದಬ್ರಹ್ಮ ಶ್ರೀ ಪ್ರಕಾಶ್ ಮತ್ತು ವಿಶ್ವೇಶ್ವರಯ್ಯ ಅವರಿಂದ ವೇದ ಪಠಣ ನಡೆಯಿತು. ಶ್ರೀ ಜಿ.ವಿ.ಕುಮಾರ್ ಶ್ರೀಮತಿ ಬಿ.ಜಿ.ಉಮಾ ಕಾರ್ಯಕ್ರಮ ನಿರೂಪಿಸಿದರು.

## ಡಾ. ಶುಭಮಂಗಳ ಸುನೀಲ್

### ರಾಜ್ಯ ಸಂಚಾಲಕಿಯಾಗಿ ಒಂದು ವರ್ಷ ಹಾರ್ದಿಕ ಅಭಿನಂದನೆಗಳು



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದ ರಾಜ್ಯ ಸಂಚಾಲಕಿಯಾಗಿ ಒಂದು ವರ್ಷ ಯಶಸ್ವಿಯಾಗಿ ಪೂರೈಸಿರುವ, ರಾಜ್ಯಾದ್ಯಂತ ಮಹಿಳಾ ಸಂಘಟನೆಯನ್ನು ಬಲಿಷ್ಠವಾಗಿ ಸಂಘಟನೆ ಮಾಡುತ್ತಿರುವ ಡಾ॥ ಶುಭಮಂಗಳ ಸುನಿಲ್ ಅವರನ್ನು ಮಹಾಸಭಾ ಮಹಿಳಾ ವಿಭಾಗದ ಕಾರ್ಯ ಕರ್ತರು ಹಾಗೂ ಮಹಾಸಭಾ ಪದಾಧಿಕಾರಿಗಳು ಅಭಿನಂದಿಸಿದರು, ಅವರು ಯೋಜಿಸಿದ ಮುಂದಿನ ರಾಜ್ಯಮಟ್ಟದ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲಿ ಹಾಗೂ ನಮ್ಮೆಲ್ಲರ ಸಹಕಾರ ಇರುತ್ತೆ, ರಾಜ್ಯ ಸಂಚಾಲಕಿಯಾಗಿ ಒಂದು ವರ್ಷ ಪೂರೈಸಿರುವ ಡಾ. ಶುಭಮಂಗಳ ಸುನಿಲ್ ಅವರಿಗೆ ಇನ್ನೂ ಹೆಚ್ಚಿನ ಯಶಸ್ಸು ಸಿಗಲಿ ಎಂದು ಹಾರೈಸುತ್ತೇವೆಂದು ಮಹಿಳಾ ವಿಭಾಗದ ಸದಸ್ಯರು ಹಾರೈಸಿರುತ್ತಾರೆ.

# ಉತ್ತರ ಕನ್ನಡದಲ್ಲಿ ಬ್ರಾಹ್ಮಣ ಮಹಾಸಭಾದ ಸದಸ್ಯತ್ವ ಅಭಿಯಾನ ಚಾಲನೆ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಶಿರಸಿ ವಿಭಾಗದ ಸಭೆ ಸಿರಸಿಯ ಯೋಗಮಂದಿರದಲ್ಲಿ ನಡೆಯಿತು. ಮಹಾಸಭಾದ ಸಂಘಟನಾ ಕಾರ್ಯದರ್ಶಿ ಸಂಸ್ಕಾರ ಸಂಘಟನೆ ಸ್ವಾವಲಂಬನೆ ಎಂಬ ಧ್ಯೇಯವಾಕ್ಯದೊಂದಿಗೆ 41 ವರ್ಷಗಳಷ್ಟು ಹಿಂದೆ ಆರಂಭ ಆದ ಮಹಾಸಭೆ ತ್ರಿಮತಸ್ಥ ಬ್ರಾಹ್ಮಣರ ಅಭಿವೃದ್ಧಿಗಾಗಿ ಶ್ರಮಿಸುತ್ತ ಬಂದಿದೆ. ಅಶೋಕ ಹಾರನಹಳ್ಳಿಯವರು ಅಧ್ಯಕ್ಷರಾದ ಮೇಲೆ ಸಂಘಟನೆಯನ್ನು ಬಲಗೊಳಿಸಿ ರಾಜ್ಯಾದ್ಯಂತ ವಿಸ್ತರಿಸಿ ಪ್ರಬಲ ಸಂಘಟನೆಯನ್ನಾಗಿ ಮಾಡಿ ಸಮುದಾಯಕ್ಕೆ ಅನೇಕ ರೀತಿಯ ಸಮಾಜಮುಖಿ ಕೆಲಸವನ್ನು ಮಾಡಲಾಗುತ್ತಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿಯೂ ಸಂಘಟನೆಯನ್ನು ಬಲಗೊಳಿಸುವ ಸಲುವಾಗಿ ಸದಸ್ಯತ್ವ ಅಭಿಯಾನ ಹಮ್ಮಿಕೊಂಡು ತಾಲ್ಲೂಕು ಸಮಿತಿ ರಚಿಸಿ ಕಾರ್ಯಪ್ರವೃತ್ತವಾಗಿದೆ. ಪ್ರತಿ ಮನೆಯಲ್ಲಿ ಒಬ್ಬರಾದರೂ ಮಹಾಸಭೆಯ ಸದಸ್ಯತ್ವ ಪಡೆದುಕೊಳ್ಳಬೇಕು ಎಂದರು.

ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ಶಶಿಭೂಷಣ ಹೆಗಡೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಹಾಸಭೆ ವಿಪ್ರರಿಗೆ ಕೊಡಮಾಡುತ್ತಿರುವ ಸವಲತ್ತು ಮತ್ತು ಸಹಾಯ ಕುರಿತು ವಿವರಿಸಿದರು. ನಿರ್ಗತಿಕರಾದ 60 ವರ್ಷ ಮೇಲ್ಪಟ ವಿಪ್ರರಿಗೆ ಸಂಕಷ್ಟದಲ್ಲಿರುವ ಅಂಗವಿಕಲರಿಗೆ ತಿಂಗಳಿಗೆ 500 ರೂ.ಗಳ ಮಾಸಾಶನ ನೀಡಲಾಗುತ್ತದೆ ಎಂದರು. ಸಂಘಟನೆಯ ಕೊರತೆಯಿಂದ ಇಡಬ್ಲ್ಯೂಎಸ್ ಜಾರಿಗೆ ಸರ್ಕಾರದ ಮೇಲೆ ಒತ್ತಡ ಹೇರಲು ಆಗುತ್ತಿಲ್ಲ ಎಂದರು.

ತಾಲ್ಲೂಕು ಪ್ರಧಾನ ಸಂಚಾಲಕ ಎನ್.ಎಸ್. ಭಟ್ ಮಣಂದೂರು ಸ್ವಾಗತಿಸಿದರು. ಪ್ರಧಾನ ಸಂಚಾಲಕ ವಿನಯ್ ಎನ್. ಹೆಗಡೆ ಕಾರ್ಯಕ್ರಮ ನಿರೂಪಿಸಿದರು. ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಎಂ.ಎಲ್.ಹೆಗಡೆ ಹಲಸಿಗೆ ಉಪಸ್ಥಿತರಿದ್ದರು.

ಕೂಡಲೇ ಇಡ್ಬ್ಲ್ಯುಎಸ್ ಜಾರಿ ಮಾಡಬೇಕು.. ಕಾಂತರಾಜ ಆಯೋಗ ವರದಿಯಲ್ಲಿ ಹೇಳಿದಂತೆ 44 ಉಪ ಪಂಗಡಗಳನ್ನು ಕ್ಲಬ್ ಮಾಡಿಕೊಂಡ ಎನ್.200ರ ಅಡಿಯಲ್ಲಿ ಸೇರಿಸಬೇಕು. ಆರ್ಥಿಕವಾಗಿ ಹಿಂದುಳಿದವರು ಮಾನದಂಡವಾಗಬೇಕೇ ಹೊರತು ಮನೆಯ ವಿಸ್ತೀರ್ಣ ಮಾನದಂಡವಾಗದೆ ಇಡ್ಬ್ಲ್ಯುಎಸ್ ಸರ್ಟಿಫಿಕೇಟ್ ನೀಡಬೇಕು ಎಂಬ ನಿರ್ಣಯ ಕೈಗೊಳ್ಳಲಾಯಿತು.

# ಬ್ರಾಹ್ಮಣರ ಅವಹೇಳನಕ್ಕೆ ತಕ್ಕ ಉತ್ತರ ಕೊಡಲು ಸಿದ್ಧ

**– ಶಶಿಭೂಷಣ ಹೆಗಡೆ**

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಂಘಟನೆ ಸ್ವಾವಲಂಬನೆ ಮತ್ತು ಸಂಸ್ಕಾರದ ಉದ್ದೇಶದಿಂದ ತ್ರಿಮತಸ್ಥ ಬ್ರಾಹ್ಮಣರನ್ನು ಸಂಘಟಿಸಬೇಕಾಗಿದೆ. ಅಲ್ಲಲ್ಲಿ ಕೆಲವರು ಬ್ರಾಹ್ಮಣರ ಕುರಿತು ಅವಹೇಳನಕಾರಿಯಾಗಿ ಮಾತನಾಡುತ್ತಾರೆ. ಅಂತಹವರ ಮೇಲೆ ಕಾನೂನಿನ ಸಹಕಾರ ಪಡೆದು ಸಂಘಟನಾತ್ಮಕವಾಗಿ ಹೋರಾಟ ಮಾಡಬೇಕಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಶಶಿಭೂಷಣ ಹೆಗಡೆ ಕರೆ ನೀಡಿದರು. ಇತ್ತೀಚೆಗೆ ಪಟ್ಟಣದ ನಾಯಕನಕೆರೆಯ ಶ್ರೀ ಶಾರದಾಂಬಾ ಸಂಸ್ಕೃತ ಪಾಠಶಾಲೆಯ ಸಭಾಭವನದಲ್ಲಿ ಸದಸ್ಯತ್ವ ಅಭಿಯಾನ ಮತ್ತು ಸಂಘಟನೆ ಔಚಿತ್ಯದ ಕುರಿತು ಮಾತನಾಡುತ್ತಿದ್ದರು.

ತ್ರಿಮತಸ್ಥರಲ್ಲಿ 70–80 ಉಪಪಂಗಡಗಳಿವೆ. ಎಲ್ಲರನ್ನೂ ಸೇರಿಸಿ ಸ್ವಾವಲಂಬನೆಗೆ ಒತ್ತು ನೀಡಬೇಕಾಗಿದೆ. ಬಡ ವಿದ್ಯಾರ್ಥಿಗಳಿಗೆ, ವಯಸ್ಸಾದವರಿಗೆ ಆರ್ಥಿಕ ನೆರವು ಯೋಜನೆ ರೂಪಿಸಿದ್ದೇವೆ. ಕೇಂದ್ರ ಸರ್ಕಾರ 2019ರಲ್ಲಿ ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣರಿಗೆ ಶೇ 10 ರಷ್ಟು ಮೀಸಲಾತಿ ನೀಡಿತ್ತು. ಆದರೂ ರಾಜ್ಯ ಸರ್ಕಾರ ಈವರೆಗೂ ಜಾರಿಗೆ ತಂದಿಲ್ಲ. ಬಡ ಬ್ರಾಹ್ಮಣರಿಗೆ ಕೆಲವು ದೊಡ್ಡ ಆಸ್ಪತ್ರೆಗಳಲ್ಲಿ ಶೇ.25ರಷ್ಟು ಕಡಿತಗೊಳ್ಳುವಂತೆ ನಮ್ಮ ಅಧ್ಯಕ್ಷರು ಒಪ್ಪಂದ ಮಾಡಿಕೊಂಡಿದ್ದಾರೆ. ರಾಜ್ಯ ಸರ್ಕಾರ ಜಾತಿ ಸಮೀಕ್ಷೆ ಮಾಡುವಾಗ ಅಲ್ಲಿಯೂ ಅನ್ಯಾಯ ಆಗುವಂತೆ ಮಾಡಿದೆ. ಹೀಗೆ ಎಲ್ಲೆಡೆ ಬ್ರಾಹ್ಮಣರು ತುಳಿತಕ್ಕೆ ಒಳಗಾಗುತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ಮಾಸ್ಟರ್ ಹಿರಣ್ಣಯ್ಯ 1972ರಲ್ಲಿ ಈ ಸಂಘಟನೆಯನ್ನು ಹುಟ್ಟು ಹಾಕಿದ್ದರು. 2021ರಲ್ಲಿ ಅಶೋಕ ಹಾರನಹಳ್ಳಿ ಅವರು ಅಧ್ಯಕ್ಷರಾದ ಮೇಲೆ ಸಂಘಟನೆ ಬಲಗೊಳ್ಳುವುದಕ್ಕೆ ಪ್ರಾರಂಭವಾಯಿತು. ಇಂದು ಎಲ್ಲ ರಾಜಕೀಯ ಪಕ್ಷದವರಿಗೆ ಬ್ರಾಹ್ಮಣರಿಗೆ ಟಿಕೆಟ್ ನೀಡಿ ಎಂದು ಗಟ್ಟಿಯಾಗಿ ಹೇಳುವ ಸಂಘಟನೆ ಬೆಳೆಸಬೇಕಾಗಿದೆ ಎಂದರು. ಸಂಘಟನಾ ಕಾರ್ಯದರ್ಶಿ ಪ್ರಸಾದ್ ರಾಯ್ಸದ್ ಮಾತನಾಡಿ ಸಮುದಾಯದ ರಕ್ಷಣೆ ಸಂಘಟನೆಯ ಹೊಣೆ. ನಮ್ಮ ಬ್ರಾಹ್ಮಣ ಬಡ ವಿದ್ಯಾರ್ಥಿಗಳಿಗಾಗಿ ಬೆಂಗಳೂರಿನಲ್ಲಿ 2 ವಿದ್ಯಾರ್ಥಿನಿ ನಿಲಯ ಸ್ಥಾಪಿಸಲಾಗಿದೆ. ನಮಗೆ ಸಿಗಬೇಕಾದ ಆರ್ಥಿಕ ಮೀಸಲಾತಿ, ಕಾನೂನಿನ ಹೋರಾಟ ನಡೆದಿದೆ ಎಂದರು.

ಎಂ.ಆರ್. ಹೆಗಡೆ ಕುಂಬ್ರಿಗುಡ್ಡೆ ಮಾತನಾಡಿ, ಈ ಪ್ರದೇಶದಲ್ಲಿ 38 ವರ್ಷಗಳಿಂದ ಹವ್ಯಕ ಸಮಾಜ ಇದೆ. ಸಮಾಜ ಬಾಂಧವರಿಗೆ ಅನ್ಯಾಯವಾಗದಂತೆ ನಮ್ಮ ಶಕ್ತಿ ತೋರಿಸಿದ್ದೇವೆ. ಆ ಉದ್ದೇಶಕ್ಕಾಗಿ ಹವ್ಯಕ ಬ್ರಾಹ್ಮಣ ಸಂಘಟನೆ ಮತ್ತು ಬ್ರಾಹ್ಮಣ ಸಂಘಟನೆ ಪರಸ್ಪರ ಕೂಡಿ ಕೆಲಸ ಮಾಡಬೇಕಾಗಿದೆ ಎಂದರು. ವೇ.ಮೂ.ಗಣಪತಿ ಭಟ್ಟ ಕೋಲೀಬೇಣಿ ಮಾತನಾಡಿ ಬ್ರಾಹ್ಮಣರಾದ ನಾವು ಹೀಗೆ ಮುಂದುವರೆದರೆ ಮುಂದೊಂದು ದಿನ ಕಷ್ಟ ಅನುಭವಿಸಬೇಕಾದೀತು. ಇಂದು ವಿಪ್ರ ಸಂಘಟನೆಯನ್ನು ಪ್ರಬಲಗೊಳಿಸುತ್ತಿದ್ದೇವೆ.

ಪ್ರಮುಖರಾದ ಡಿ. ಶಂಕರ ಭಟ್ಟ ತಾರೀಮಕ್ಕಿ, ಜಿ.ಆರ್. ಹೆಗಡೆ, ಜಗದೀಶ್ ದೀಕ್ಷಿತ್, ಶಿರಸಿ ತಾಲ್ಲೂಕಿನ ಸಂಚಾಲಕ ಎನ್.ಎಸ್. ಭಟ್ಟ, ಈಶ್ವರ್ ಭಟ್ಟ ಕೋಪ್ಪೇಸರ, ನರಸಿಂಹ ಗಣಪುಮನೆ ಸಾಂದರ್ಭಿಕ ಮಾತನಾಡಿದರು. ಪ್ರಮುಖರಾದ ನಾಗೇಂದ್ರ ಭಟ್ಟ ಕಮಳೆ, ಎನ್.ಎಸ್. ಭಟ್ಟ, ವೆಂಕಟರಮಣ ಭಟ್ಟ ಗುರ್ತೆಗದ್ದೆ, ಗೋಪಾಲಕೃಷ್ಣ ತಾರೀಮಕ್ಕಿ, ಚಂದ್ರಕಲಾ ಭಟ್ ಹಂಡ್ರಮನೆ, ಗುರ್ತೆಗಾರ್ ಭಟ್ಟ ತಾರೀಮಕ್ಕಿ, ರಾಘವೇಂದ್ರ ಭಟ್ಟ ಕುಂದರಗಿ, ಮತ್ತಿತರರು ಉಪಸ್ಥಿತರಿದ್ದರು. ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರ ಪ್ರಸಾದ್ ಹೆಗಡೆ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಕೆ.ಎಸ್. ಭಟ್ ವಂದಿಸಿದರು.

## ಜೈನಮುನಿ ಶ್ರೀ ಕಾಮಕುಮಾರ ನಂದಿ ಮಹಾರಾಜರ ಭೀಭತ್ಸ ಹತ್ಯೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರ ಖಂಡನೆ



ಬದುಕಿ, ಬದುಕಲು ಬಿಡಿ ಎಂಬ ತತ್ವದ ಮೂಲಕ ಜಗತ್ತಿಗೆ ಅಹಿಂಸೆ ಮತ್ತು ಶಾಂತಿ ಬೋಧಿಸಿದ ಜೈನ ಮತ, ಪ್ರಾಣಿ ಪಕ್ಷಿಗಳಾದಿಯಾಗಿ ಜೀವರಾಶಿಗಳಿಗೆ ತೊಂದರೆ ಬಯಸದ ಆದರ್ಶ ಮತವಾಗಿದೆ.

ಇಂತಹ ಉತ್ಕೃಷ್ಟವಾದ ತತ್ವಗಳನ್ನು ಜೀವನಪರ್ಯಂತ ಮಹಾವ್ರತದಂತೆ ಪಾಲಿಸುವ ಜೈನ ಮುನಿಗಳೆಡೆಗೆ ಸಮಾಜದಲ್ಲಿ ಅತ್ಯಂತ ಗೌರವಾದರಗಳಿತಕ್ಕದ್ದು. ಆದರೆ ಬೆಳಗಾವಿಯ ಚಿಕ್ಕೋಡಿಯಲ್ಲಿ ಜೈನ ಮುನಿ ಶ್ರೀ ಕಾಮಕುಮಾರ ನಂದಿ ಮಹಾರಾಜರ ಭಿಭತ್ಸ ಹತ್ಯೆ ನಾಗರಿಕ ಸಮಾಜ ತಲೆ ತಗ್ಗಿಸುವ ಹೇಯ ಕೃತ್ಯವಾಗೀದೆಯಷ್ಟೇ ಅಲ್ಲದೇ ಕಳಂಕವೂ ಆಗಿದೆ. ಇಂತಹ ಹೇಯ ಕೃತ್ಯವನ್ನು ಬ್ರಾಹ್ಮಣ ಸಮಾಜ ಖಂಡಿಸುತ್ತದೆ.

ಜೈನಮುನಿ ಶ್ರೀ ಕಾಮಕುಮಾರ ನಂದಿ ಮಹಾರಾಜರ ಹತ್ಯೆ ಮಾಡಿದ ದುಷ್ಕರ್ಮಿಗಳಿಗೆ ಕಠಿಣ ಶಿಕ್ಷೆಯಾಗುವ ನಿಟ್ಟಿನಲ್ಲಿ ಸರ್ಕಾರ ತೀಕ್ಷ್ಣ ಕ್ರಮ ಕೈಗೊಳ್ಳಬೇಕು, ತನ್ಮೂಲಕ ರಾಜ್ಯದಲ್ಲಿ ಕಾನೂನಿನ ಭಯ ಇಲ್ಲದೇ ಹತ್ಯೆಗಳನ್ನು ಮಾಡುವ ದುಷ್ಕರ್ಮಿಗಳ ಕೃತ್ಯಗಳಿಗೆ ಕಡಿವಾಣ ಹಾಕಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆಗ್ರಹಿಸುತ್ತದೆ.

**ಅಶೋಕ ಹಾರನಹಳ್ಳಿ**
ಮಹಾಸಭಾಧ್ಯಕ್ಷರು.

---

## ಸಚಿವರ ಬ್ರಾಹ್ಮಣ ನಿಂದನೆ ಹೇಳಿಕೆಗೆ ಮಹಾಸಭೆಯ ಖಂಡನೆ



ಸಚಿವ ಕೆ.ಎನ್. ರಾಜಣ್ಣ ಅವರು ಬ್ರಾಹ್ಮಣರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವುದು ಖಂಡನೀಯ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ಕೆ.ಎನ್. ಛಾಯಾಪತಿ ಅವರು ಮಹಾಸಭೆಯ ಪರವಾಗಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಚಿವ ರಾಜಣ್ಣ ಅವರು ಇತ್ತೀಚೆಗೆ ದಾವಣಗೆರೆಯಲ್ಲಿ ಬ್ರಾಹ್ಮಣರ ಬಗ್ಗೆ ವಿವಾದಾತ್ಮಕ ಮತ್ತು ವಿವೇಕರಹಿತ ಹೇಳಿಕೆ ನೀಡಿದ್ದಾರೆ. ಬ್ರಾಹ್ಮಣರು ಒಂದು ರೂಪಾಯಿ ಊದಿನಕಡ್ಡಿ ತರುವುದೂ ಇಲ್ಲ, ಹಚ್ಚುವುದೂ ಇಲ್ಲ ಎಂದು ಸಚಿವರು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಅವರು ಪ್ರಕಟಣೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಎಲ್ಲಾ ದೇವಾಲಯಗಳಲ್ಲಿ ಬ್ರಾಹ್ಮಣರೇ ಅರ್ಚಕರಾಗಿಲ್ಲ, ಬ್ರಾಹ್ಮಣೇತರರೂ ಪೂಜಾರಿಗಳಾಗಿದ್ದಾರೆ. ಯಾವುದೇ ವರ್ಗದ ಅರ್ಚಕರು ಸ್ವಂತ ಹಣದಲ್ಲಿ ಊದಿನಕಡ್ಡಿ ತರುವ ಅಗತ್ಯವಿಲ್ಲ. ಭಕ್ತರು ತರುವ ಊದುಬತ್ತಿ ಹಾಗೂ ಕರ್ಪೂರವನ್ನು ಅರ್ಚಕರು ದೇವರ ಮುಂದೆ ಹಚ್ಚುವುದು ವಾಡಿಕೆ. ಸಚಿವರಿಗೆ ಈ ಸಾಮಾನ್ಯ ಜ್ಞಾನ ಸಹ ಇಲ್ಲ, ರಾಜಣ್ಣ ಅವರು ಸಣ್ಣಪುಟ್ಟ ವಿಚಾರಕ್ಕೆ ಬ್ರಾಹ್ಮಣರನ್ನು ನಿಂದಿಸಿದರೆ ತಾವು ಪ್ರಸಿದ್ಧಿಯಾಗುತ್ತೇವೆ ಎಂಬ ಭ್ರಮೆಯಲ್ಲಿದ್ದಾರೆ. ಪ್ರಜ್ಞಾವಂತರಾದ ರಾಜಣ್ಣ ಅವರಲ್ಲಿ ಈ ರೀತಿಯ ಭಾವನೆ ದುರದೃಷ್ಟಕರ ಎಂದು ಟೀಕಿಸಿದ್ದಾರೆ.


ಜಾಹಿರಾತು

**ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ**

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು-560 050.

**ಸ್ಥಳದ ಬಾಡಿಗೆ ಇರುವುದಿಲ್ಲ**

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080-26793054 ಮೊಬೈಲ್ 8277433666**

# ಬೆಳ್ತಂಗಡಿಯಲ್ಲಿ ಕ್ಯಾನ್ಸರ್ ಬಗ್ಗೆ ಅರಿವು ಕಾರ್ಯಕ್ರಮ




ಬೆಳ್ತಂಗಡಿ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಇದರ ಬೆಳ್ತಂಗಡಿ ತಾಲ್ಲೂಕು ಮಹಿಳಾ ಘಟಕದ ವತಿಯಿಂದ ಸ್ತನ ಕ್ಯಾನ್ಸರ್ ಅರಿವು ಮತ್ತು ಸದಸ್ಯತ್ವ ಅಭಿಯಾನ ಕಾರ್ಯಕ್ರಮ ಲಾಯಿಲದ ಸುಬ್ರಹ್ಮಣ್ಯ ಸ್ಥಾನಿಕ ಸಭಾ ಭವನದಲ್ಲಿ ದಿನಾಂಕ 18.06.2023ರಂದು ನಡೆಯಿತು.

ಮಹಾಸಭಾದ ರಾಜ್ಯ ಉಪಾಧ್ಯಕ್ಷ ಮಹೇಶ್ ಕಜೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ "ಸಂಸ್ಕಾರದ ಕೊರತೆಯಿಂದ ಸಮಾಜದಲ್ಲಿ ಸಮಸ್ಯೆಗಳು ಉಂಟಾಗುತ್ತವೆ. ಪೋಷಕರು ತಮ್ಮ ಮಕ್ಕಳಿಗೆ ಎಳವೆಯಿಂದಲೆ ಸಂಸ್ಕಾರ ನೀಡಲಾರಂಭಿಸಿದರೆ ಸಮಾಜದ ಉನ್ನತಿಗೆ ಕಾರಣವಾಗುತ್ತದೆ. ನಮ್ಮತನವನ್ನು ನಾವು ಮರೆಯದೆ ಇತರ ಆಕರ್ಷಣೆಗಳಿಂದ ವಿಮುಖರಾಗದೆ, ಟೀಕೆ ಟಿಪ್ಪಣಿಗಳಿಗೆ ಅಂಜದೆ ಅವನ್ನು ಸವಾಲಾಗಿ ಸ್ವೀಕರಿಸಿ ಮುನ್ನಡೆಯ ಬೇಕು ಎಂದರು.

ಸುಬ್ರಹ್ಮಣ್ಯ ಸ್ಥಾನಿಕ ಸಭಾ ನಿರ್ದೇಶಕ ಧನಂಜಯ ರಾವ್ ಮಾತನಾಡಿ "ಮಹಿಳೆಯರು ಸಂಘಟಿತರಾಗಿ ನಡೆಸುವ ಕಾರ್ಯಕ್ರಮ ಯಶಸ್ವಿಯಾಗುತ್ತವೆ. ಸ್ವಯಂ ಸಾಧನೆಗಳ ಮೂಲಕ ಸಂಘಟಿತರಾಗಿ ಮುಂದುವರಿದರೆ ಅಭಿವೃದ್ಧಿ ಸಾಧ್ಯ. ಸದಸ್ಯತ್ವ ಅಭಿಯಾನಕ್ಕೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದರು.

ಮಹಾಸಭಾದ ಸಂಘಟನಾ ಕಾರ್ಯದರ್ಶಿ ಉಮಾ ಸೋಮಯಾಜಿ, ಕರಾಡ ಬ್ರಾಹ್ಮಣ ಸಮಾಜದ ಡಾ.ಕವಿತಾ ಪ್ರದೀಪ್, ಸುಬ್ರಹ್ಮಣ್ಯ ಸ್ಥಾನಿಕ ಸಭಾದ ತಾಲ್ಲೂಕು ಕಾರ್ಯದರ್ಶಿ ರೇಖಾ ಸುಧೀರ್, ಕೂಟ ಮಹಾಜಗತ್ತಿನ ತಾಲ್ಲೂಕಿನ ಅಧ್ಯಕ್ಷೆ ನಳಿನಿ ಹೊಳ್ಳ, ಚಿತ್ಪಾವನ ಸಂಘದ ತಾಲ್ಲೂಕು ಮಹಿಳಾ ಮುಖ್ಯಸ್ಥೆ ಅಶ್ವಿನಿ ಎ. ಹೆಬ್ಬಾರ್, ತಾಲ್ಲೂಕು ಹವ್ಯಕ ವಲಯ ಮಾತೃ ವಿಭಾಗದ ಅಧ್ಯಕ್ಷೆ ವಾಣಿಶ್ರೀ ಕೃಷ್ಣ ಭಟ್ ಉಪಸ್ಥಿತರಿದ್ದರು. ಹಿರಿಯ ವೈದ್ಯೆ ಡಾ.ವಿದ್ಯಾವತಿ ಸ್ತನ ಕ್ಯಾನ್ಸರ್ ಬಗ್ಗೆ ಮಾಹಿತಿ ನೀಡಿದರು.

# ಅರಸೀಕೆರೆಯಲ್ಲಿ ಉಚಿತ ವೈದ್ಯಕೀಯ ಸಮಾಲೋಚನಾ ಶಿಬಿರ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.) ಮತ್ತು ಅರಸೀಕೆರೆ ತಾಲ್ಲೂಕು ಬ್ರಾಹ್ಮಣ ಸಂಘ (ರಿ.), ದವರ ಸಂಯುಕ್ತಾಶ್ರಯದಲ್ಲಿ 'ಹಾಸನದ ಸ್ಪರ್ಶ್ ಹಾಸ್ಪಿಟಲ್ಸ್' ರವರ ಸಹಯೋಗ ದೊಂದಿಗೆ, ಅರಸೀಕೆರೆ ತಾಲ್ಲೂಕಿನ ಸಮಗ್ರ ಬ್ರಾಹ್ಮಣ ಸಮಾಜ ಬಾಂಧವರ ಆರೋಗ್ಯ ತಪಾಸಣೆ ನಡೆಸುವ ಸದುದ್ದೇಶದಿಂದ ಬೃಹತ್ 'ಉಚಿತ ವೈದ್ಯಕೀಯ ಸಮಾಲೋಚನಾ ಶಿಬಿರ'ವನ್ನು ನಡೆಸಲಾಯಿತು.

ದಿನಾಂಕ: 13.06.2023, ಮಂಗಳವಾರ. ಸಮಯ: ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ, ನೂರಾರು ಸಮಾಜ ಬಾಂಧವರು ಹಾಗು ಸ್ಥಳ: ಶ್ರೀ ಸೀತಾರಾಮ ಮಂದಿರ, ವಾಚನಾಲಯ ರಸ್ತೆ ಅರಸೀಕೆರೆಯಲ್ಲಿ ನಡೆದ ಈ ಶಿಬಿರದಲ್ಲಿ ಭಾಗವಹಿಸಿ ಇದರ ಸಂಪೂರ್ಣ ಪ್ರಯೋಜನ ಪಡೆದರು.

ಈ ಶಿಬಿರದಲ್ಲಿ ನುರಿತ ಹಾಗೂ ತಜ್ಞ ವೈದ್ಯರುಗಳು ಭಾಗವಹಿಸಿ, ಬಿ.ಎಂ.ಡಿ, ಸಕ್ಕರೆ ಖಾಯಿಲೆ, ಹೃದಯ ಸಂಬಂಧಿ ಸಮಸ್ಯೆ, ನರರೋಗ, ಕೀಲು ಮತ್ತು ಮೂಳೆಗೆ ಸಂಬಂಧಿತ ಹತ್ತು ಹಲವು ಸಮಸ್ಯೆಗಳಿಗೆ ಒಂದೇ ಸೂರಿನಡಿ ವೈದ್ಯರಿಂದ ಪರಿಹಾರ ಕಂಡುಕೊಳ್ಳಲು ಅನುಕೂಲವಾಯಿತು.

# ಸಿಂಧೂರಿನಲ್ಲಿ ಮಹಾಸಭಾ ಸಂಘಟನಾ ಸಭೆ ಹಾಗೂ ಆರೋಗ್ಯ ಶಿಬಿರ ಯೋಜನೆ



ಮಂಗಳವಾರ ಸಂಜೆ ಸಿಂಧನೂರಿನ ವಿಪ್ರ ಸಮಾಜದ ಬಾಂಧವರೊಂದಿಗೆ ಸಂಘಟನೆಯ ಕುರಿತಾಗಿ ಮತ್ತು ಜುಲೈ ತಿಂಗಳಿಗೆ ಆರೋಗ್ಯ ಶಿಬಿರ ಏರ್ಪಡಿಸುವ ಕುರಿತಾಗಿ ಸಮಾಲೋಚನೆ ನಡೆಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷ ಡಾಕ್ಟರ್ ಆನಂದತೀರ್ಥ ಫಡ್ನಿಸ್, ಜಿಲ್ಲಾ ಸಂಚಾಲಕ ಶ್ರೀ ಡಿ.ಕೆ ಮುರಳೀಧರ್, ಕಾರ್ಯಕಾರಿ ಸದಸ್ಯ ಶ್ರೀ ವೆಂಕಟೇಶ್ ದೇಸಾಯಿ, ಶ್ರೀ ರಾಮರಾವ್ ನೂತನವಾಗಿ ಕಾರ್ಯಕಾರಿಗೆ ಆಯ್ಕೆಯಾದ ಶ್ರೀ ನರಸಿಂಹಾಚಾರ್ಯ ಮತ್ತು ಎಲ್ಲಾ ವಿಪ್ರ ಬಾಂಧವರು ಪಾಲ್ಗೊಂಡಿದ್ದರು.

# ವಿಪ್ರ ಸಂಘಟನೆಗಳ ನೂತನ ಪದಾಧಿಕಾರಿಗಳು

## ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ಬ್ರಾಹ್ಮಣ ಸಭಾ

ನೂತನ ಅಧ್ಯಕ್ಷರಾಗಿ ಶ್ರೀ ರಮೇಶ್ ನಾಡಿಗ್, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ರವಿಶಂಕರ್ ಮತ್ತು ಖಜಾಂಚಿಗಳಾಗಿ ಶ್ರೀ ನಾಗಭೂಷಣ್‌ರವರು ಇತ್ತಿಚೆಗೆ ನಡೆದ ಸರ್ವಸದಸ್ಯರ ಸಭೆಯಲ್ಲಿ ಆಯ್ಕೆಯಾಗಿರುತ್ತಾರೆ. ಶ್ರೀಯುತರುಗಳಿಗೆ ಮಹಾಸಭೆಯ ಅಭಿನಂದನೆಗಳು.

## ಶೃಂಗೇರಿ ವಿಪ್ರ ಸಂಘ

ಶೃಂಗೇರಿಯ ರಾಜಾನಗರದ ವಿದ್ಯಾಭಾರತೀ ಭವನದಲ್ಲಿ ಹೆಚ್.ಜಿ. ವಿವೇಕಾನಂದ ಅಧ್ಯಕ್ಷತೆಯಲ್ಲಿ ನಡೆದ ನೂತನ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ನೂತನ ಅಧ್ಯಕ್ಷರಾಗಿ ಜಿ ಕೃಷ್ಣಮೂರ್ತಿ ಮೆಣಸೆ (ಗೋಚುವಳ್ಳಿ ರಾಮಣ್ಣಯ್ಯ), ಕಾರ್ಯದರ್ಶಿಯಾಗಿ ಬೆಟ್ಟಗೆರೆ ಮುರಳೀಕೃಷ್ಣರವರು ಬಹುಮತದಿಂದ ಆಯ್ಕೆಯಾಗಿದ್ದಾರೆ. ಮಹಾಸಭಾದ ಆರಂಭದಿಂದಲೂ ಸಹಕಾರ ನೀಡುತ್ತಾ ಹಾಲಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಯುತರ ಸೇವಾ ಹಿರಿತನವನ್ನು ಪರಿಗಣಿಸಿ ಆಯ್ಕೆ ನಡೆಯಿತು. ಪ್ರಧಾನ ಕಾರ್ಯದರ್ಶಿಯಾಗಿ ಸಂಸ್ಥೆ ಆರಂಭದ ವರ್ಷದಲ್ಲಿ ದಶಕಗಳ ಕಾಲ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ಬೆಟ್ಟಗೆರೆ ಬಿ.ಜಿ. ಮುರಳೀಕೃಷ್ಣ ಮರು ಆಯ್ಕೆಗೊಂಡರು. ಗೌರವ ಅಧ್ಯಕ್ಷರಾಗಿ ಸಂಸ್ಥಾಪಕ ಅಧ್ಯಕ್ಷರಾಗಿ ದಶಕಗಳ ಕಾಲ ಸಂಸ್ಥೆ ಮುನ್ನಡಿಸಿದ ಹೆಚ್.ಎಲ್. ತ್ಯಾಗರಾಜರಾವ್ ಮಾನಗಾರು ಉಪಾಧ್ಯಕ್ಷರುಗಳಾಗಿ ತೋರಣಗದ್ದೆ ಕೆ.ಸಿ. ನಟರಾಜ್‌ರಾವ್ ಮತ್ತು ಹರಿಕೆ ಹೆಚ್.ಎಸ್. ನಾಗಭೂಷಣ್ ರಾವ್, ಸಹಕಾರ್ಯದರ್ಶಿಯಾಗಿ ಬೆಟ್ಟಗೆರೆ ಶೃಂಗೇಶ್ವರ್ ಕೋಶಾಧ್ಯಕ್ಷರಾಗಿ ಹೆಚ್.ಎ. ರವಿಶಂಕರ್ ನೆಮ್ಮಾರು, ಸಂಘಟನಾ ಕಾರ್ಯದರ್ಶಿಗಳಾಗಿ ಸೂರ್ಗೋಡು ಕೃಷ್ಣಮೂರ್ತಿ ಕಿಗ್ಗ ಮತ್ತು ಕೆ.ಪಿ. ಆನಂದಸ್ವಾಮಿ ಕಲ್ಕಟ್ಟೆ, ಧಾರ್ಮಿಕ ಸಲಹೆಗಾರರಾಗಿ ವೇದಬ್ರಹ್ಮ ಶ್ರೀ ಮರಳೀಕೃಷ್ಣಭಟ್ ವೈಕುಂಠಪುರ ಆಯ್ಕೆಗೊಂಡರು. ಪ್ರಧಾನ ಕಾರ್ಯದರ್ಶಿ ಶೃಂಗೇರಿ ಸುಬ್ಬಣ್ಣ ಸಭೆ ನಿರೂಪಿಸಿದರು.

## ವಸಂತಪುರ ಬ್ರಾಹ್ಮಣ ಬಳಗ

ಇತ್ತೀಚೆಗೆ ವಸಂತಪುರ ವಿಪ್ರ ಬಳಗದ ಸಭೆಯು ಶ್ರೀ ಭವಾನಿ ಶಂಕರ ದೇವಾಲಯ (ಬೆಂಗಳೂರು ದಕ್ಷಿಣ) ಸಭಾಂಗಣದಲ್ಲಿ ಗೌ॥ ಅಧ್ಯಕ್ಷರಾದ ವೇ॥ ಬ್ರ॥ ಶ್ರೀ ಪಾಲಚಂದ್ರ ಶಾಸ್ತ್ರಿಗಳ ನೇತೃತ್ವದಲ್ಲಿ ಬಳಗದ ಅಧ್ಯಕ್ಷರಾದ ನಾಗರಾಜ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರುಗಿ 2023-24ನೇ ಅವಧಿಗೆ ಅಣತಿ ಆರ್. ಗುಂಡುರಾವ್‌ರವರು ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ನಂತರ ನಡೆದ ಸಭೆಯಲ್ಲಿ ಉಪಾಧ್ಯಕ್ಷರಾಗಿ ಎಸ್.ಶ್ರೀನಿವಾಸ್, ಕಾರ್ಯದರ್ಶಿಯಾಗಿ ಕೆ. ಚಂದ್ರಶೇಖರ್, ಮಹಿಳಾ ಕಾರ್ಯದರ್ಶಿಯಾಗಿ ಶ್ರೀಮತಿ ಲಕ್ಷ್ಮೀ ರಾಮಕೃಷ್ಣ, ಖಜಾಂಚಿಯಾಗಿ ಶ್ರೀಮತಿ ಜಯಶ್ರೀ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಹೆಚ್. ಎಸ್. ರಾಜಗೋಪಾಲ್, ಆರ್.ನಾರಾಯಣರಾವ್, ಎಸ್. ಶ್ರೀಕಾಂತ, ಶ್ರೀಧರ್ ಡಿ. ಮತ್ತು ಟಿ.ಎನ್. ಪ್ರಹ್ಲಾದರಾವ್‌ರವರನ್ನು ಅಧ್ಯಕ್ಷರು ನೇಮಕಮಾಡಿರುತ್ತಾರೆ. ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ಮಹಾಸಭೆಯ ಅಭಿನಂದನೆಗಳು.

**ವಿಪ್ರನುಡಿಯಲ್ಲಿ ಪ್ರಕಟಣೆಗೆ ಮಾಹಿತಿಗಾಗಿ ಮನವಿ**

**ವಿಪ್ರ ಸಂಘಟನೆಗಳ ನೂತನ ಪದಾಧಿಕಾರಿಗಳ ವಿವರ ಹಾಗೂ ಸಂಘಟನೆಗಳು ನಡೆಸಿದ ಸಾಮಾಜಿಕ - ಧಾರ್ಮಿಕ ಕಾರ್ಯಕ್ರಮಗಳ ವಿವರಗಳನ್ನು ಚಿತ್ರ ಸಹಿತ ಮಹಾಸಭೆಗೆ ಕಳಸಿಕೊಡಲು ಕೋರಿದೆ. 50ಕ್ಕು ಹೆಚ್ಚು ವರ್ಷಗಳಿಂದ ಕ್ರಿಯಾಶೀಲವಾದ ವಿಪ್ರ ಸಂಘ ಸಂಸ್ಥೆಗಳ ಬಗ್ಗೆ ಸಂಕ್ಷಿಪ್ತ ಪರಿಚಯವನ್ನು ಚಿತ್ರ ಸಹಿತ ಕಳಿಹಿಸಿ ಕೊಟ್ಟರೆ ವಿಪ್ರನುಡಿಯಲ್ಲಿ ಪ್ರಕಟಿಸಲಾಗುವುದು - ಸಂಚಾಲಕ.**

# ಗದಗ ಜಿಲ್ಲಾ ವಿಶ್ವ ಮಾದ್ವ ಪರಿಷತ್ - ಪ್ರತಿಭಾ ಪುರಸ್ಕಾರ ಸಮಾರಂಭ



ದಿನಾಂಕ: 02-07-2023 ರಂದು ಗದಗ ಜಿಲ್ಲಾ ಮತ್ತು ವಿಶ್ವ ಮಾದ್ವ ಪರಿಷತ್ ವತಿಯಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಗಳಾಗಿ ಖ್ಯಾತ ಚಿಕ್ಕಮಕ್ಕಳ ವೈದ್ಯ ಸಂಜೀವ ಜೋಶಿ, ಅನಿಲ ವೈದ್ಯ, ವರದಾಚಾರ ಜಾಲಿಹಾಳ, ಶ್ರೀಕಾಂತಾಚಾರ್ ನೀಲಗುಂದ, ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶ್ರೀನಿವಾಸ ಹುಯಿಲಗೋಳ, ಕಿರಣ ಪೂಜಾರ, ಗಿರೀಶ ಕುಲಕರ್ಣಿ, ಅನೀಲ ತೆಂಬದ ಮನಿ ಉಪಸ್ಥಿತರಿದ್ದರು.

# ದಾಖಲೆ 18 ಚಿನ್ನದ ಪದಕ ಗಳಿಸಿದ ಚಿನ್ನದ ಹುಡುಗ ಎಸ್. ಮುರಳಿ




ನಾಡಿನ ಪ್ರತಿಷ್ಠಿತ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಬಿ.ಇ. (ಸಿವಿಲ್) ಪದವಿಯಲ್ಲಿ ಪ್ರಥಮ ರ್‍ಯಾಂಕ್ ಗಳಿಸಿರುವ **ಎಸ್. ಮುರಳಿರವರು** ದಾಖಲೆಯ 18 ಚಿನ್ನದ ಪದಕಗಳನ್ನು ಗಳಿಸಿ ಇತಿಹಾಸ ನಿರ್ಮಿಸಿದ್ದಾರೆ. ಇವರು ಬೆಂಗಳೂರಿನ ಬಿ.ಐ.ಟಿ. (ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ) ವಿದ್ಯಾರ್ಥಿಯಾಗಿದ್ದಾರೆ, ಕೋಲಾರದ ಶ್ರೀಮತಿ ಪರಿಮಳ ಮತ್ತು ಶ್ರೀ ಶ್ರೀನಿವಾಸ್‌ರವರ ಸುಪುತ್ರರಾದ ಪ್ರತಿಭಾವಂತ ಎಸ್. ಮುರಳಿ ಬೆಂಗಳೂರಿನ ಯುವಿಸಿಇ (ವಿಶ್ವೇಶ್ವರಯ್ಯ ಯೂನಿವರ್ಸಿಟಿ ಕಾಲೇಜ್ ಆಫ್ ಇಂಜಿನಿಯರಿಂಗ್) ನಲ್ಲಿ ಎಂ.ಟೆಕ್ ಪದವಿ ಮುಂದುವರಿಸಿರುವ ಅಪೂರ್ವ ಸಾಧನೆಗೈದ ವಿಪ್ರ ಪ್ರತಿಭೆ. ಇವರ ಅಪೂರ್ವ ಸಾಧನೆಗೆ ಮಹಾಸಭೆಯ ಹೃತ್ಪೂರ್ವಕ ಅಭಿನಂದನೆಗಳು.

# ಮೂರನೇ ರ್‍ಯಾಂಕ್ ಗಳಿಸಿದ ಕು॥ ಅನಘಳಿಗೆ ಅಭಿನಂದನೆ

2023ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರಾಜ್ಯಕ್ಕೆ ಮೂರನೇ ಸ್ಥಾನ, ಮೈಸೂರು ಜಿಲ್ಲೆಗೆ ಪ್ರಥಮ ಸ್ಥಾನ (623/625) ಪಡೆದ ವಿದ್ಯಾರ್ಥಿನಿ **ಕು॥ ಅನಘ ಎಸ್.** ಕಾರ್ನಿಕ್ಸ್ ರವರನ್ನು ರಾಜ್ಯ ಉಪಾಧ್ಯಕ್ಷ ನಂ ಶ್ರೀಕಂಠಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರನಾರಾಯಣ, ಕೆ.ಆರ್. ಯೋಗಾನರಸಿಂಹನ್, ಸೌಭಾಗ್ಯಮೂರ್ತಿ, ವಿಪ್ರ ಮಹಿಳಾ ಸಂಗಮ ಅಧ್ಯಕ್ಷೆ ಡಾ.ಲಕ್ಷ್ಮಿ, ಸೌಭಾಗ್ಯಮೂರ್ತಿ ಅಭಿನಂದಿಸಿದರು. ತಂದೆ ಶ್ರೀನಿವಾಸ್ ಕಾರ್ನಿಕ್ಸ್, ತಾಯಿ ವಾಣಿ ಉಪಸ್ಥಿತರಿದ್ದರು.





# ಪದವಿ ಪೂರ್ವ ಪರೀಕ್ಷೆಯಲ್ಲಿ ರಾಜ್ಯಕ್ಕೆ ಆರನೇ ರ್‍ಯಾಂಕ್ ಕು. ಅದ್ವಿತಾ ಎಂ.

ಈ ಸಾಲಿನ ಪದವಿ ಪೂರ್ವ ಪರೀಕ್ಷೆಯ ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ ಆರನೇ ಸ್ಥಾನ (591 ಅಂಕ, 98.5%) ಪಡೆದಿರುವ ವಿದ್ಯಾರಣ್ಯಪುರದ ಶ್ರೀಮತಿ ನೀತಾ ಮತ್ತು ಮಂಜುನಾಥ್ ರವರ ಪುತ್ರಿ **ಕು. ಅದ್ವಿತಾ** ಇವರಿಗೆ ಮಹಾಸಭೆಯ ಹೃತ್ಪೂರ್ವಕ ಅಭಿನಂದನೆಗಳು.

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಹಾಗೂ ನಳಂದ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ

# ಉಚಿತ ಆರೋಗ್ಯ ತಪಾಸಣಾ ಶಿಬಿರ



ನಳಂದ ಸಂಸ್ಥೆಯ ಮುಖ್ಯಸ್ಥರದ ಶ್ರೀ ಎಂ.ಆರ್. ಶಿವಶಂಕರ್ ಹಾಗೂ ಶಾಸಕ ಸಿ.ಕೆ. ರಾಮಮೂರ್ತಿ

ದಿನಾಂಕ 09.07.2023ರ ಭಾನುವಾರದಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ನಳಂದ ಶಿಕ್ಷಣ ಸಂಸ್ಥೆಗಳು, ಜೆ.ಪಿ.ನಗರ ಇವರ ಸಹಯೋಗದಲ್ಲಿ ವಿಪ್ರ ಮಹಿಳೆಯರಿಗೆ ಉಚಿತವಾಗಿ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು. ಸದರಿ ಶಿಬಿರದಲ್ಲಿ ಕಿದ್ವಾಯಿ ಸಂಸ್ಥೆಯಿಂದ ಗರ್ಭಕೋಶ ಕ್ಯಾನ್ಸರ್‌ನ



ತಪಾಸಣೆ, ನಿರಾಮಯ್ ಸಂಸ್ಥೆಯಿಂದ ಸ್ತನ ಕ್ಯಾನ್ಸರ್ ಪರೀಕ್ಷೆಯನ್ನು ಜೆ.ಪಿ.ನಗರದಲ್ಲಿರುವ ಶೇಖರ್ ಕಣ್ಣಿನ ಆಸ್ಪತ್ರೆಯಿಂದ ಕಣ್ಣಿನ ಪರೀಕ್ಷೆಯನ್ನು, ಜಯನಗರದಲ್ಲಿರುವ ಯುನೈಟೆಡ್ ಆಸ್ಪತ್ರೆಯಿಂದ ಮೂಳೆ ರೋಗಕ್ಕೆ ಸಂಬಂಧಪಟ್ಟಂತೆ ಪರೀಕ್ಷೆ ಮತ್ತು ಸಲಹೆಯನ್ನು





ಮಾಡಲಾಯಿತು.

ಸದರಿ ಶಿಬಿರಕ್ಕೆ ಮಹಾಸಭೆಯ ಉಪಾಧ್ಯಕ್ಷರೂ, ನಳಂದ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದಂತಹ ಶ್ರೀ ಎಂ.ಆರ್. ಶಿವಶಂಕರ್‌ರವರು ಊಟ ಮತ್ತು ನೀರಿನ ವ್ಯವಸ್ಥೆಯನ್ನು, ಜಾಗದ ವ್ಯವಸ್ಥೆಯನ್ನು ಬಹಳ ಅಚ್ಚುಕಟ್ಟಾಗಿ ಉಚಿತವಾಗಿ ಏರ್ಪಡಿಸಿ ಶಿಬಿರಕ್ಕೆ ಸಹಾಯವನ್ನು ಮಾಡಿರುತ್ತಾರೆ. ಮತ್ತು ರೂ.5,000/– ದೇಣಿಗೆಯನ್ನು ಕಿದ್ವಾಯಿ ಸಂಸ್ಥೆಗೆ ಮಹಾಸಭೆಯ ಮುಖಾಂತರ ನೀಡಿರುತ್ತಾರೆ ಹಾಗೂ ಬೆಂಗಳೂರಿನ ಪ್ರತಿಷ್ಠಿತ ಕ್ಯಾನ್ಸರ್‌ನ ಸ್ಕ್ಯಾನಿಂಗ್ ಕೇಂದ್ರವಾದಂತಹ ನ್ಯೂ ಮೆಡ್ ಡಯಾಗಾಸ್ಟಿಕ್ ಸಂಸ್ಥೆಯ ಮುಖ್ಯಸ್ಥರಾದ ಡಾ. ಮುರಳಿ ನಾಡಿಗ್‌ರವರು ರೂ.5,000/– ಶಿಬಿರ ನಿಮಿತ್ತ ಕಿದ್ವಾಯಿ ಸಂಸ್ಥೆಗೆ ಮುಹಾಸಭೆಯ ಮುಖಾಂತರ ನೀಡಿ ಸಹಾಯ ಮಾಡಿರುತ್ತಾರೆ.

ಸದರಿ ಶಿಬಿರಕ್ಕೆ ಜಯನಗರ ವಿಧಾನಸಭಾ ಸದಸ್ಯರಾದಂತಹ ಶ್ರೀ ಸಿ.ಕೆ. ರಾಮಮೂರ್ತಿ ಯವರು ಭೇಟಿ ಕೊಟ್ಟು, ಮಹಾಸಭೆಗೂ, ನಳಂದ ಶಿಕ್ಷಣ ಸಂಸ್ಥೆಗೂ, ಶಿಬಿರವನ್ನು ನಡೆಸಿಕೊಟ್ಟ ಎಲ್ಲಾ ಸಂಸ್ಥೆಯವರನ್ನು ಪ್ರಶಂಸಿಸಿದರು.



ನಳಂದ ಸಂಸ್ಥೆಯ ಸಿಬ್ಬಂದಿ ವರ್ಗ

# ದಾಸ ನಾದಲಹರಿ ಸಮಾರಂಭದ "ಕೆಲ್ಲಂಗೆರೆ ತಿಮ್ಮಪ್ಪ ದಾಸರು" ಕೃತಿ ಬಿಡುಗಡೆ



ವಿಖ್ಯಾತರಾದ ಅನೇಕರಲ್ಲದೆ, ಅಜ್ಞಾತರಾಗಿ ಉಳಿದ ಅದೆಷ್ಟೋ ಮಹನೀಯರು ಕೀರ್ತನೆಗಳನ್ನು, ದೇವರ ನಾಮಗಳನ್ನು ರಚಿಸುವ ಮೂಲಕ ಕರ್ನಾಟಕ ಸಂಗೀತ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಅಂತಹ ಎಲೆಮರೆಯ ಕಾಯಿಗಳಲ್ಲಿ ಕೆಲ್ಲಂಗೆರೆ ತಿಮ್ಮಪ್ಪದಾಸರು, ಅವರ ವಂಶಜರೇ ಆದ ಅರಸೀಕೆರೆಯ ರಾಂ ಮೇಸ್ಟ್ರು ಮತ್ತು ಶ್ಯಾನುಭೋಗ್ ವೆಂಕಟದಾಸಪ್ಪನವರು ಕಳೆದ ಶತಮಾನದಲ್ಲಿ ಬಾಳಿ ಸಂಗೀತ ಸೇವೆಯಲ್ಲಿ ತೊಡಗಿಕೊಂಡವರು.

ಅನೇಕ ಹಾಡುಗಳನ್ನು ರಚಿಸಿ ಸಂಗೀತ ಕ್ಷೇತ್ರಕ್ಕೆ ತಮ್ಮ ಅಳಿಲುಸೇವೆಯನ್ನು ಸಲ್ಲಿಸಿದ ಮೇಲ್ಕಂಡ ಮಹನೀಯರ ಹಾಡುಗಳನ್ನು ಹಿಂದಿನ ತಲೆಮಾರಿನ ಕೆಲ ಗಾಯಕರು ಹಾಡಿದ್ದಾರಾದರೂ, ಪ್ರಸ್ತುತದಲ್ಲಿ ಅವರ ಕೃತಿಗಳ ಗಾಯನ ಅಷ್ಟಾಗಿ ನಡೆದಿಲ್ಲ. ಅಲ್ಲದೆ ಬಾಯಿಂದ ಬಾಯಿಗೆ ಹರಿದುಬಂದ ಅವರ ಹಾಡುಗಳಲ್ಲಿ ಕೆಲವು ಮರೆಯಾಗಿಯೇ ಹೋಗಿವೆ. ಇದನ್ನು ಮನಗಂಡ ದಿ॥ ಕೆ ವಿ ಶ್ರೀನಿವಾಸ್ ಅವರು "ಕೆಲ್ಲಂಗೆರೆ ತಿಮ್ಮಪ್ಪದಾಸರು" ಎನ್ನುವ ಕೃತಿಯೊಂದನ್ನು ರಚಿಸುವ ಮೂಲಕ, ಮರೆಯಾಗಿ ಹೋಗಬಹುದಾಗಿದ್ದ ಅವರ ಜೀವನ ಮತ್ತು ಸಾಧನೆಯನ್ನು ಬೆಳಕಿಗೆ ತರಲು ಶ್ರಮಿಸಿದ್ದಾರೆ.

ಅನೇಕ ವರ್ಷಗಳ ನಂತರ ತಿಮ್ಮಪ್ಪದಾಸರ ಕುಟುಂಬದ ಕೆಲ ಯುವಜನರು ತಿಮ್ಮಪ್ಪದಾಸರ ಕೆಲವು ಕೃತಿಗಳನ್ನು ಖ್ಯಾತ ಗಾಯಕರಿಂದ ಹಾಡಿಸಿ ಅವುಗಳ ಧ್ವನಿಮುದ್ರಿಕೆಯನ್ನು ಹೊರತರುವುದರ ಜತೆಗೆ "ಕೆಲ್ಲಂಗೆರೆ ತಿಮ್ಮಪ್ಪದಾಸರು" ಕೃತಿಯ ಪುನರ್ ಮುದ್ರಣವನ್ನೂ ಮಾಡಿಸುವ ಸಾಹಸಕ್ಕೆ ಕೈ ಹಾಕಿದರು. ವಿದ್ವಾನ್ ಗಣೇಶ್ ಶರ್ಮ ಅವರ ಸಂಗೀತ ಸಂಯೋಜನೆಯಲ್ಲಿ ಖ್ಯಾತ ಗಾಯಕರಾದ ರಾಜೇಶ್ ಕೃಷ್ಣನ್, ರಾಹುಲ್ ವೆಲ್ಲಾಳ್, ವಿಷ್ಣು ಸುರೇಶ್, ಸಿದ್ದಾರ್ಥ್ ಬೆಳ್ಮಣ್ಣು, ಗಣೇಶ್ ಶರ್ಮ ಹಾಗೂ ಕುಮಾರಿ ಶ್ರೇಯಾ ಶ್ರೀನಿವಾಸ್ ಹಾಡಿರುವ ಆರು ದೇವರನಾಮಗಳ ಧ್ವನಿ ಮುದ್ರಿಕೆಯ ಮತ್ತು "ಕೆಲ್ಲಂಗೆರೆ ತಿಮ್ಮಪ್ಪದಾಸರು" ಕೃತಿಯ ಬಿಡುಗಡೆ ಸಮಾರಂಭವು ದಿನಾಂಕ 07 ಮೇ 2023 ರ ಭಾನುವಾರ ಅದ್ದೂರಿಯಾಗಿ ನೆರವೇರಿತು. ಖ್ಯಾತ ನ್ಯಾಯವಾದಿಗಳಾದ ಅಶೋಕ್ ಹಾರನಹಳ್ಳಿ, ಕಗ್ಗದ ಭಟ್ಟರು ಎಂದೇ ಹೆಸರಾದ ಹೆಚ್ ಎಸ್ ಲಕ್ಷ್ಮಿನಾರಾಯಣ ಭಟ್ಟ ಮತ್ತು ಪ್ರೊಫೆಸರ್ ಜಿ ಅಶ್ವತ್ಥನಾರಾಯಣ ಅತಿಥಿಗಳಾಗಿ ಭಾಗವಹಿಸಿ ಧ್ವನಿ ಮುದ್ರಿಕೆ ಹಾಗೂ "ಕೆಲ್ಲಂಗೆರೆ ತಿಮ್ಮಪ್ಪದಾಸರು" ಕೃತಿಯ ಬಿಡುಗಡೆ ಮಾಡಿ ಸಂಗೀತ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಅನೇಕ ವಿಚಾರಗಳನ್ನು ಸಭಿಕರೊಂದಿಗೆ ಹಂಚಿಕೊಂಡರು.

ವಿಷ್ಣು ಸುರೇಶ್ ಅವರ ಪ್ರಾರ್ಥನೆ, ಕಾರ್ತಿಕ್ ಬಾಪಟ್ ಅವರ ಸ್ವಾಗತ, ಹಾಡುಗಾರರಿಂದ ಗೀತೆಗಳ ಗಾಯನ, ಬಹುಮಾಧ್ಯಮ ಪ್ರಸ್ತುತಿ, ಇದ್ದುದರಿಂದ ಸಮಾರಂಭ ಆಸಕ್ತಿದಾಯಕವಾಗಿತ್ತು.

ಪ್ರಾಸ್ತಾವಿಕ ನುಡಿಗಳನ್ನಾಡಿದ ರಾಂಪ್ರಸಾದ್ ಅವರು ಮುಂದಿನ ದಿನಗಳಲ್ಲಿ ತಿಮ್ಮಪ್ಪದಾಸರ ಇನ್ನಷ್ಟು ಹಾಡುಗಳನ್ನು ಸಂಗೀತಾಸಕ್ತರ ಮುಂದೆ ಇಡುವ ವಿಚಾರವಿದೆ ಎಂದು ತಿಳಿಸಿ, ಈ ಕಾರ್ಯಕ್ಕೆ ಕೈ ಜೋಡಿಸಿದ ಎಲ್ಲರಿಗೂ ವಂದಿಸಿದರು.

ವಿಶ್ವೇಶ್ವರಪುರಂನ ಮಾನಂದಿ ನಂಜುಡಶೆಟ್ಟಿ ಸಭಾಂಗಣದಲ್ಲಿ ನಡೆದ ಈ ಸಮಾರಂಭದಲ್ಲಿ ತಿಮ್ಮಪ್ಪದಾಸರ ಕುಟುಂಬದವರು, ಅವರ ಬಂಧು ಬಾಂದವರಲ್ಲದೆ, ಅನೇಕ ಕಲಾಸಕ್ತರು ಹಾಜರಿದ್ದು ಸಂಗೀತ ಸುಧೆಯನ್ನು ಸವಿಯುವುದರ ಜತೆಗೆ ಪ್ರಬುದ್ಧವಾದ ಮಾತುಗಳನ್ನೂ ಆಲಿಸುತ್ತಾ ಸಮಾರಂಭವನ್ನು ಕಳೆಗಟ್ಟಿಸಿದ್ದು ವಿಶೇಷವಾಗಿತ್ತು.

# ಮೈಸೂರಿನಲ್ಲಿ ಮಕ್ಕಳಿಗೆ ಪಠ್ಯಪುಸ್ತಕ ವಿತರಣೆ

ಮೈಸೂರಿನ ಕೃಷ್ಣಮೂರ್ತಿಪುರಂ ಬಡಾವಣೆಯಲ್ಲಿರುವ 112 ವರ್ಷಗಳ ಐತಿಹಾಸಿಕ ಗುಬ್ಬಚ್ಚಿ ಶಾಲೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಸ್ಪಂದನ ಟ್ರಸ್ಟ್ ದಶಮಾನೋತ್ಸವ ಅಂಗವಾಗಿ ಶಾಲಾ ವಿದ್ಯಾರ್ಥಿಗಳಿಗೆ ಪುಸ್ತಕ ಪಠ್ಯ ಸಾಮಗ್ರಿಗಳನ್ನ ವಿತರಿಸಲಾಯಿತು. ಹಿರಿಯ ಸಮಾಜ ಸೇವಕ ಜಿ.ಆರ್ ನಾಗರಾಜ್, ಯುವ ಮುಖಂಡ ಅಜಯ್ ಶಾಸ್ತ್ರಿ, ಪ್ರತಿಭೆ ವೇದಿಕೆಯ ಅಧ್ಯಕ್ಷರಾದ ರಾಜರತ್ನಂ, ವಿದ್ಯಾಸ್ಪಂದನ ಟ್ರಸ್ಟ್ ಅಧ್ಯಕ್ಷ ಪುನೀತ್ ಕೂಡ್ಲೂರು, ಗಣೇಶ್, ಪೂಜಾ, ಶಾಲಾ ಶಿಕ್ಷಕರಾದ ಮೋಹನ್ ಕುಮಾರ್ ಕೆ.ಆರ್ ಚಂಪಾ ರವರು ಭಾಗವಹಿಸಿದ್ದರು.



# ಶೃಂಗೇರಿಯಲ್ಲಿ ಮೇ 13 ಹಾಗೂ 15 ರಂದು ನಡೆದ ಶುಕ್ಲಯಜುರ್ವೇದ ಸಮ್ಮೇಳನದ ಸಂಕ್ಷಿಪ್ತ ವರದಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಶುಕ್ಲಯಜುರ್ವೇದ ಸಮ್ಮೇಳನ ಕ್ರಿಯಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಬೃಹತ್ ಶುಕ್ಲ ಯಜುರ್ವೇದ ಸಮ್ಮೇಳನವು, ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಗುರುಗಳ, ಶ್ರೀ ಶೃಂಗೇರಿ ಶಾರದಾಂಬೆ ಅಮ್ಮನವರ, ಜಗದ್ಗುರು ಶಂಕರಾಚಾರ್ಯರ ಹಾಗೂ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠದ ಪ್ರಥಮ ಗುರುಗಳಾದ ಶ್ರೀ ಸುರೇಶಾಚಾರ್ಯರ ಅನುಗ್ರಹ ಮತ್ತು ಈಗಿನ ಉಭಯ ಗುರುಗಳಾದ ಶ್ರೀ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿದಾನಂಗಳ ಹಾಗೂ ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿದಾನಂಗಳ ಆಶೀರ್ವಾದದಿಂದ ದಿನಾಂಕ 13.05.2023 ಹಾಗೂ 14.05.2023ರಂದು ಬಹಳ ವಿಜೃಂಭಣೆಯಿಂದ ನಡೆಯಿತು.

ದಿನಾಂಕ 13.05.2023 ಶನಿವಾರ ಜಗದ್ಗುರುಗಳಾದ ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿದಾನಂಗಳ ಅಮೃತ ಹಸ್ತದಿಂದ ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಗುರುಗಳು ಹಾಗೂ ಜಗದ್ಗುರು ಶಂಕರಾಚಾರ್ಯರಿಗೆ ಪೂಜೆಯನ್ನು ಸಲ್ಲಿಸಿ, ಜ್ಯೋತಿ ಬೆಳಗುವುದರ ಮೂಲಕ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀಯುತ ಅಶೋಕ್ ಹಾರನಹಳ್ಳಿ ಅವರ ಅಧ್ಯಕ್ಷತೆ ಹಾಗೂ ಗುರು ಸೇವಾಧುರಿಣ ಪದ್ಮಶ್ರೀ ಪುರಸ್ಕೃತ ಡಾ.ಪಿ. ಎಸ್. ಗೌರಿಶಂಕರ್ ಅವರ ಉಪಸ್ಥಿತಿಯಲ್ಲಿ ಉದ್ಘಾಟನೆಯಾಯಿತು.

ಸಮ್ಮೇಳನದ ಸಂಚಾಲಕರು ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರು ಆದ ಶ್ರೀ ವೈಎ ಸುಧಾಕರ್ ಬಾಬು ಅವರು ಗುರುಗಳ ಪಾದಾರವಿಂದಗಳಿಗೆ ನಮಸ್ಕರಿಸಿ ಹೃತ್ಪೂರ್ವಕ ಸ್ವಾಗತವನ್ನು ಕೋರಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾದ ಶ್ರೀಯುತ ಡಿ ವಿ ರಾಜೇಂದ್ರ ಪ್ರಸಾದ್ ಅವರು ಮಾತನಾಡಿ, ಮಹಾಸಭೆಯ ಅಧ್ಯಕ್ಷರಾದ ಶ್ರೀಯುತ ಅಶೋಕ್ ಹಾರನಹಳ್ಳಿ ಅವರು ನಮ್ಮ ಸಮುದಾಯದ ಧರ್ಮ ಧಾರ್ಮಿಕ ಪರಂಪರೆ ವೇದ ಮತ್ತು ಸಂಸ್ಕೃತಿಯನ್ನು ಉಳಿಸುವ ಹಾಗೂ ಬೆಳೆಸುವ ಉದ್ದೇಶದಿಂದ ಚತುರ್ವೇದಗಳಲ್ಲಿ ಒಂದಾದ ಶುಕ್ಲ ಯಜುರ್ವೇದವನ್ನು ಎಲ್ಲರಿಗೂ ತಿಳಿಸುವ ಉದ್ದೇಶದಿಂದ ಶುಕ್ಲ ಯಜುರ್ವೇದ ಸಮಾವೇಶವನ್ನು ಆಯೋಜಿಸಿರುತ್ತಾರೆ.

ಕಾರ್ಯಕ್ರಮದ ಉದ್ಘಾಟನಾ ಭಾಷಣವನ್ನು ನೆರವೇರಿಸಿದ ವೇ.ಬ್ರ, ಶ್ರೀ ಶಂಕರ್ ನಾರಾಯಣ ಶಾಸ್ತ್ರಿಯವರು ಮಾತನಾಡಿ ವಿಶ್ವದ ಪ್ರತಿಯೊಂದು ಜೀವಿಗೂ ಅತ್ಯಂತ ಮುಖ್ಯವಾದ ಹಾಗೂ ಜೀವಸತ್ವವಾದ ವೇದವು ತುಂಬಾ ಮುಖ್ಯವಾಗಿದ್ದು ಅಂತಹ ವೇದ ಪರಂಪರೆಯನ್ನು ಪ್ರಪಂಚಕ್ಕೆ ತಿಳಿಸುವ ನಿಟ್ಟಿನಲ್ಲಿ ಇಂತಹ ಸಮ್ಮೇಳನವನ್ನು ಆಯೋಜಿಸಿರುವುದು ತುಂಬಾ ಉತ್ತಮವಾದ ಕಾರ್ಯಕ್ರಮವೆಂದು ತಿಳಿಸಿದರು.

ಮೊದಲ ವಿಚಾರಗೋಷ್ಠಿ ನಡೆಸಿಕೊಟ್ಟ ಅಗಡಿ ಆನಂದವನದ ಗುರುಗಳಾದ ಪರಮಪೂಜ್ಯ ಶ್ರೀ ಗುರುದತ್ತ ಚಕ್ರವರ್ತಿ ಮೂರ್ತಿ, ಬೆಂಗಳೂರಿನ ಶ್ರೀಮತಿ ಬಿ ವಿ ಆರತಿ, ಹಾಗೂ ಗುರ್ಲಾಹೊಸೂರಿನ ರಾಜಾರಾಮ ಮಠದ ಗುರುಗಳಾದ ಶ್ರೀ ಸದಾನಂದ ದೀಕ್ಷಿತರು ವೇದಿಕೆಯಲ್ಲಿ ಭಾಗವಹಿಸಿ, ಇಂದಿನ ನಮ್ಮ ಸಮುದಾಯಕ್ಕೆ ಮತ್ತು ಸಮಾಜಕ್ಕೆ ವೇದ ಪರಂಪರೆಯ ಮತ್ತು ಅದನ್ನು ಉಳಿಸುವ ನಿಟ್ಟಿನಲ್ಲಿ ಹಾಗೂ ಶ್ರೀ ಯೋಗೀಶ್ವರ ಯಾಜ್ಞವಲ್ಕಯ ಗುರುಗಳ ಚರಿತ್ರೆ ಮತ್ತು ಅಂದು ಅವರು ಸ್ತ್ರೀಯರಿಗೆ ನೀಡಿದ ಗೌರವ ಶ್ರೀಮತಿ ಮೈತ್ರೇಯಿ ಮತ್ತು ಗಾರ್ಗೇಯಿ ಮಾತೆಯರ ಚರಿತ್ರೆ, ಅವರು ಸಮಾಜಕ್ಕೆ ನೀಡಿದ ಕೊಡುಗೆ ಎಲ್ಲವನ್ನು ಸ್ಪಷ್ಟವಾಗಿ ತಿಳಿಸಿದರು.

ಎರಡನೆಯ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ ತುಮಕೂರಿನ ಶ್ರೀಮತಿ ಜ್ಯೋತಿಯವರು ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಗುರುಗಳ ಚರಿತ್ರೆಯನ್ನು ಸವಿಸ್ತಾರವಾಗಿ ಸಭೆಗೆ ತಿಳಿಸಿದರು. ಮೇಲುಕೋಟೆಯ ಸಂಸ್ಕೃತ ಪಾಠಶಾಲೆಯ ಪ್ರಾಂಶುಪಾಲರಾದ ವಿದ್ವಾನ್ ಡಾ. ಕೆ.ಎಸ್. ಅರುಣ್ ಕುಮಾರ್, ಪದಬಂಧ ವಿನ್ಯಾಸಕರಾದ ಆ ನಾ ಪ್ರಹಲ್ಲಾದ್ ಸೌದತ್ತಿಯ ಪರಮಪೂಜ್ಯ ಶ್ರೀ ಗಂಗಾಧರ ದೀಕ್ಷಿತರು, ಶ್ರೀ ಪ್ರಸನ್ನ ದೀಕ್ಷಿತರು ಹಾಗೂ ಅಗಡಿ ಆನಂದವನದ ಶ್ರೀ ವಿಶ್ವನಾಥ ಚಕ್ರವರ್ತಿ ಮೂರ್ತಿ ಭಾಗವಹಿಸಿ, ನಮ್ಮ ಗುರುಪರಂಪರೆ, ವೇದ, ಉಪನಿಷತ್ತುಗಳ ಬಗ್ಗೆ ಸಮಾಜಕ್ಕೆ ತಿಳಿಸುವ ನಿಟ್ಟಿನಲ್ಲಿ ಇಂತಹ ಸಮ್ಮೇಳನಗಳು ಅತ್ಯಂತ ಮುಖ್ಯವಾಗಿದ್ದು ಮುಂದಿನ ದಿನಗಳಲ್ಲಿ ನಿರಂತರವಾಗಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಇಂಥ ಸಮ್ಮೇಳನಗಳು ನಡೆಯಲಿ ಹಾಗೂ ಶುಕ್ಷಯಜುರ್ವೇದ ಪರಂಪರೆಯಲ್ಲಿ ತ್ರಿಮತಸ್ಥ ಸಂಪ್ರದಾಯದ ಬ್ರಾಹ್ಮಣರು ಇರುವುದು ವಿಶೇಷವಾಗಿದೆ ಎಂದು ಹೇಳಿದರು. ಇಂತಹ ಬೃಹತ್ ಸಮಾವೇಶವು ದಕ್ಷಿಣಾಮ್ನಾಯಿ ಶ್ರೀ ಶೃಂಗೇರಿ ಶಾರದಾ ಪೀಠದ ಪ್ರಥಮ ಗುರುಗಳಾದ ಶ್ರೀ ಸುರೇಶ್ವರಾಚಾರ್ಯರು ಇರುವ ಸನ್ನಿಧಿಯಲ್ಲಿ ಮತ್ತು ಅನೇಕ ಯತಿ ಮನಿಗಳು ನಡೆದಾಡಿದ ಪುಣ್ಯ ಸ್ಥಳದಲ್ಲಿ ನಡೆಯುತ್ತಿರುವುದು ನಿಜಕ್ಕೂ ತುಂಬಾ ಸಂತಸದ ವಿಷಯವಾಗಿದೆ ಎಂದು ತಿಳಿಸಿದರು. ಸಂಜೆ ಕುಮಾರಿ ಶ್ರೀ ವಿದ್ಯಾ ಭಾರತ್ವಾಜ್ ರವರಿಂದ ಕೂಚಿಪುಡಿ ನೃತ್ಯ ಕುಮಾರಿ ವಿದ್ಯಾ ಕುಮಾರಿ ವಿಭಾ ಹಾಗೂ ಶ್ರೀಮತಿ ವಿದ್ಯಾರವಿಶಂಕರ ಅವರಿಂದ ಭರತನಾಟ್ಯ ಮತ್ತು ಶ್ರೀ ರಾಜೇಶ್, ಶ್ರೀಮತಿ ಕವನರಾಜಕುಮಾರ್ ರವರ ತಂಡದವರಿಂದ ಶಾಸ್ತ್ರೀಯ ಸಂಗೀತದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ದಿನಾಂಕ 14.5.2023ರಂದು ಬೆಳಿಗ್ಗೆ 8 ಗಂಟೆಗೆ ಸುಮಾರು 3 ರಿಂದ 4 ಸಾವಿರ ಶುಕ್ಷಯಜುರ್ವೇದಿಗಳ ಬೃಹತ್ ಮಟ್ಟದ ಶೋಭಾಯಾತ್ರೆ ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಯವರ ನೇತೃತ್ವದಲ್ಲಿ ಶ್ರೀ ಮಠದ ಅಶ್ವ ಹಾಗೂ ಗಜರಾಜ ದೊಂದಿಗೆ ಆರಂಭವಾಗಿ ನೃತ್ಯ ಕೋಲಾಟ, ಭಜನೆಗಳೊಂದಿಗೆ ಅತ್ಯಂತ ವೈಭವದಿಂದ ನಡೆಯಿತು.

ಅಂದಿನ ವೇದಿಕೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀಯುತ ಅಶೋಕ್ ಹಾರನಹಳ್ಳಿ ಅವರು ಮಾತನಾಡಿ, ಇಂದು ಸನಾತನ ಧರ್ಮವು ವಿಶ್ವದಲ್ಲಿ ಅತ್ಯಂತ ಪ್ರಬಲವಾಗಿದ್ದು ಇಂತಹ ಸನಾತನ ಧರ್ಮವನ್ನು ಉಳಿಸಿ ಬೆಳಸುವುದು ನಮ್ಮ ವಿಪ್ರರ ಮುಖ್ಯ ಪಾತ್ರವಾಗಿದೆ. ಮಾತೆ ಶಾರದಾಂಬೆ ಹಾಗೂ ಚಂದ್ರಮೌಳೇಶ್ವರರು ಮತ್ತು ಅನೇಕ ಜಗದ್ಗುರು ಗುರುವರ್ಯರು ನಡೆದಾಡಿದ ಪವಿತ್ರ ಸ್ಥಳದಲ್ಲಿ ನಾವೆಲ್ಲರೂ ಈ ಸಮ್ಮೇಳದಲ್ಲಿ ಭಾಗಿಯಾಗಿರೋದು ನಮ ಪೂರ್ವ ಜನ್ಮದ ಸುಕೃತ ಫಲವೆನ್ನಬಹುದು ಎಂದರು.

ಸಮ್ಮೇಳನದ ಸಂಚಾಲಕರಾದ ಶ್ರೀ ವೈ ಎ ಸುಧಾಕರಬಾಬು ಮಾತನಾಡಿ, ಶ್ರೀಮಠಕ್ಕೆ ಸುಮಾರು 5 ವರ್ಷಗಳಿಂದ ಚಾತುರ್ಮಾಸದ ಸಂದರ್ಭದಲ್ಲಿ ರಾಜ್ಯದ ಅನೇಕ ಭಾಗಗಳಿಂದ ಶುಕ್ಷಯಜುರ್ವೇದಿಗಳು ಬಂದು ಗುರುಗಳ ಭಿಕ್ಷಾವಂದನೆ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿತ್ತು ಗುರುಗಳು ನಮ್ಮ ಶುಕ್ಲ ಯಜುರ್ವೇದ ಬಂಧುಗಳಿಗೆ ತಮ್ಮ ವಿಶೇಷ ಅನುಗ್ರಹ ಆಶೀರ್ವಾದವನ್ನು ನೀಡಿತ್ತಾ ಬಂದಿರುತ್ತಾರೆ.

ಸಮಾಜದಲ್ಲಿ ಶುಕ್ಲ ಯಜುರ್ವೇದಿಗಳು ಅಥವಾ ಪ್ರಥಮ ಶಾಖೆಯವರೆಂದರೆ ಎಲ್ಲೋ ಕುಂಚ ಕೀಳುಅರಿಮೆಯಿಂದ ನೋಡುತ್ತಿದ್ದ ದಿನಗಳನ್ನು ನೆನಪಿಸಿಕೊಂಡು, ಶುಕ್ಲಯಜುರ್ವೇದಿಗಳು ಎಂದರೆ ಯಾರು ಅವರ ಗುರು ಪರಂಪರೆ, ಆ ಗುರುಗಳು ನೀಡಿದ ಶುಕ್ಲಯಜುರ್ವೇದಕ್ಕೆ ಇರುವ ಮಹತ್ವ ಮತ್ತು ಅವರು ಸಮಾಜಕ್ಕೆ ನೀಡಿದ ಕೊಡುಗೆ ಎಲ್ಲವನ್ನು ಸಮಾಜಕ್ಕೆ ತಿಳಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಇಂದು ಇಂತಹ ಮಹತ್ತರವಾದ ಕಾರ್ಯಕ್ರಮವನ್ನು ನಡೆಸಲು ಶೃಂಗೇರಿಯಲ್ಲಿ ಅದರಲ್ಲಿಯೂ ಶ್ರೀಮಠದ ಆವರಣದಲ್ಲಿ ಸ್ಥಳಾವಕಾಶ ಮಾಡಿಕೊಟ್ಟು ಎಲ್ಲರಿಗೂ ಪ್ರಸಾದ ವ್ಯವಸ್ಥೆ ವಸತಿ ವ್ಯವಸ್ಥೆಯನ್ನು ಸಹ ಮಾಡಿಕೊಟ್ಟಿರುತ್ತಾರೆ ಇಂತಹ ಸಂದರ್ಭದಲ್ಲಿ ಶ್ರೀಮಠದ ಉಭಯ ಗುರುಗಳ ಪಾದಾರವಿಂದಕ್ಕೆ ಶಿರಸಾ ನಮಸ್ಕರಿಸುತ್ತಾ ಶ್ರೀ ಮಠದ ಆಡಳಿತ ಅಧಿಕಾರಿಗಳು ಗುರು ಸೇವಾ ಧುರೀಣರು ಆದ ಡಾ. ವಿ ಎಸ್ ಗೌರಿಶಂಕರ್ ರವರಿಗೂ ಮತ್ತು ಶ್ರೀಮಠದ ಎಲ್ಲಾ ಆಡಳಿತ ವರ್ಗದವರಿಗೂ ವಿಶೇಷ ಧನ್ಯವಾದಗಳನ್ನು ತಿಳಿಸಿದರು. ವಿಶೇಷವಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀಯುತ ಅಶೋಕ್ ಹಾರನಹಳ್ಳಿ ಹಾಗೂ ಮಹಾಸಭೆಯ ಪದಾಧಿಕಾರಿಗಳಿಗೂ ಮತ್ತು ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರಿಗೂ, ರಾಜ್ಯದ ಮೂಲೆ ಮೂಲೆಗಳಿಂದ ಆಗಮಿಸಿದ. ನಮ್ಮ ಶಾಖಾಬಾಂಧವರೆಲ್ಲರಿಗೂ, ಸುಮಾರು ಮೂರು ತಿಂಗಳಿಂದ ನನ್ನ ಜೊತೆಯಲ್ಲಿ ರಾಜ್ಯ ಉದ್ದಕ್ಕೂ ಪ್ರವಾಸಗಳು ಕೈಕೊಂಡು ಈ ಕಾರ್ಯಕ್ರಮವು ಯಶಸ್ವಿಯಾಗಲು ಸಹಕರಿಸಿದ ಎಲ್ಲ ಕಾರ್ಯಕರ್ತರಿಗೂ ಶ್ರೀ ಮಠದ ಎಲ್ಲಾ ಸಿಬ್ಬಂದಿಯವರಿಗೂ, ಆಡಳಿತ ವರ್ಗದವರಿಗೂ ಶೃಂಗೇರಿ ಬ್ರಾಹ್ಮಣ ಸಂಘದ ಅಧ್ಯಕ್ಷರಿಗೂ ಮತ್ತು ಪದಾಧಿಕಾರಿಗಳಿಗೂ ಹಾಗೂ ವಸತಿ ವ್ಯವಸ್ಥೆಯನ್ನು ಅನುಕೂಲ ಮಾಡಿದ ಸ್ಥಳೀಯ ಶಾಲಾ ಕಾಲೇಜಿನ ವ್ಯವಸ್ಥಾಪಕರಿಗೂ ವಿಶೇಷ ಧನ್ಯವಾದಗಳು ತಿಳಿಸಿದರು.

ಜಗದ್ಗುರುಗಳಾದ ಶ್ರೀ ಶ್ರೀ ವಿಧುಶೇಖರಶೇಖರ ಭಾರತೀ ಸನ್ನಿಧಾನಂಗಳವರು ಆಶೀರ್ವಚನ ನೀಡುತ್ತ, ಇದೊಂದು ಮಹಾತ್ತರವಾದ ಕಾರ್ಯಕ್ರಮವಾಗಿದೆ. ನಮ್ಮ ವೇದ ಧರ್ಮ ಪರಂಪರೆಯನ್ನು ಉಳಿಸುವ ನಿಟ್ಟಿನಲ್ಲಿ ಇಂತಹ ಸಮ್ಮೇಳನಗಳು ಆಗಾಗ್ಗೆ ನಡೆಯಬೇಕು ಯೋಗೀಶ್ವರ ಯಾಜ್ಞವಲ್ಕ್ಯ ಗುರುಗಳು ನೀಡಿದ ಶುಕ್ಲಯಜುರ್ವೇದವು ಅತ್ಯಂತ ಮಹತ್ವದಾಗಿದ್ದು ಅದರಲ್ಲಿಯೂ ಅವರು ನೀಡಿದ ಉಪನಿಷತ್ತುಗಳು ಅತ್ಯಂತ ಮಹತ್ವ ಪಡೆದಿವೆ ಅಂತಹ ಶಿಷ್ಯ ಪರಂಪರೆಯವರಾದ ಶ್ರೀ ಸುರೇಶ್ವರಚಾರ್ಯರು ಈ ಪೀಠದ ಮೊದಲ ಗುರುಗಳಾಗಿರುವುದು ಶುಕ್ಲಯಜುರ್ವೇದಿಗಳಿಗೂ ಈ ಮಠಕ್ಕೂ ಇರುವ ಸಂಬಂಧವನ್ನು ತಿಳಿಸುತ್ತದೆ. ಇಂದಿನ ದಿನದಲ್ಲಿ ಶುಕ್ಲಯಜುರ್ವೇದಿಗಳಾದ ತಾವು ಮಠಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವುದು ಬಹಳ ಸಂತಸದ ವಿಷಯವಾಗಿದ್ದು ಮುಂದಿನ ದಿನಗಳಲ್ಲಿ ಮಠದವತಿಯಿಂದ ಶುಕ್ಲ' ಯಜುರ್ವೇದದ ವೇದ ಪಾಠಶಾಲೆಯನ್ನುಆರಂಭಿಸುವುದಾಗಿ ತಿಳಿಸಿದರು.

ನಮ್ಮ ಧರ್ಮ ಪರಂಪರೆ ಸಂಪ್ರದಾಯಗಳನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿರುವ ಮಹಾಸಭೆಯನ್ನು ಬಲಪಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಮಾನವನ ಪರಿಪೂರ್ಣ ದೇಹಕ್ಕೆ ಎಲ್ಲಾ ಅಂಗಗಳು ಎಷ್ಟು ಮುಖ್ಯವೋ ಅದೇ ರೀತಿ ಈ ಬ್ರಾಹ್ಮಣ ಸಭೆಗೆ ಎಲ್ಲ ಉಪಪಂಗಡಗಳ ಸಹಕಾರವು ಅಷ್ಟೇ ಮುಖ್ಯವಾಗಿರುತ್ತದೆ, ಶರೀರದದ ಯಾವ ಭಾಗಕ್ಕೆ ತೊಂದರೆಯಾದರೂ, ಕೇವಲ ಆ ಭಾಗಕ್ಕೆಲ್ಲದೆ ಇಡೀ ಶರೀರಕ್ಕೆ ನೋವು ಉಂಟಾಗುತ್ತದೆ, ಆದ್ದರಿಂದ ನಮ್ಮ ಉಪಪಂಗಡಗಳಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ನಾವೆಲ್ಲರೂ ನಮ್ಮ ಸಮಾಜ ಮತ್ತು ಹಿಂದೂ ಧರ್ಮವನ್ನು ಬಲಪಡಿಸೋಣವೆಂದು ತಿಳಿಸಿದರು. ಇಂತಹ ಮಹತ್ತರ ಕಾರ್ಯಕ್ರಮವನ್ನು ಆಯೋಜಿಸಿದ ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಉಪಾಧ್ಯಕ್ಷರಾದ ಶ್ರೀ ಡಿ ವಿ ರಾಜೇಂದ್ರ ಪ್ರಸಾದ್ ಹಾಗೂ ಸಮ್ಮೇಳನ ಕ್ರಿಯಾ ಸಮಿತಿಯ ಸಂಚಾಲಕರಾದ ವೈ.ಎ. ಸುಧಾಕರಬಾಬು ಮತ್ತು ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರಿಗೂ ನಾರಾಯಣ ಸ್ಮರಣ ಪೂರಕವಾಗಿ ಆಶೀರ್ವಾದವನ್ನು ತಿಳಿಸಿದರು.

ಈ ಕಾರ್ಯಕ್ರಮಕ್ಕೆ ಅನೇಕ ದಿನಗಳಿಂದ ಶ್ರಮಿಸಿದ ಮಹಾಸಭೆಯ ಹಾಗೂ ಸಮ್ಮೇಳನ ಕ್ರಿಯಾ ಸಮಿತಿಯ ಕಾರ್ಯಕರ್ತರಾದ ಶ್ರೀ ಟಿ.ಎಲ್. ಅರುಣ್ ಕುಮಾರ್, ಕೋಲಾರದ ಅಮರನಾಥ್, ಡಿಎಂ ಶೇಖರ್, ಗೋಪಾಲ್ ಮಂಡಿಕಲ್, ವೆಂಕಟೇಶ್, ಮಾಲತೇಶ್ ಕುಲಕರ್ಣಿ, ಶ್ರೀಪತಿ, ರಮೇಶ್ ದಿಡಗ, ಜಯರಾಮ್, ವೆಂಕಟೇಶ್ ಕೋಲದೇವಿ, ಬಳ್ಳಾರಿ ಪ್ರಕಾಶ್ ರಾವ್, ವೈ ಜಿ ರಾಘವೇಂದ್ರ, ಸಿ ಎಚ್ ಪ್ರಭಾಕರ್, ಕೈವಾರ ಕೃಷ್ಣಮೂರ್ತಿ, ಬಿ ಎಸ್ ವಾಸು, ಶ್ರೀ ಉಮೇಶ್ ಶಾಸ್ತ್ರಿ, ಶ್ರೀ ರವಿಕುಮಾರ್, ಅಶ್ವತ್ಥನಾರಾಯಣ, ಟಿ ಲಕ್ಷ್ಮಿಕಾಂತ್ ರಾವ್, ಅರುಣ್ ಕುಮಾರ್ ಶ್ರೀನಿವಾಸಪುರ, ಶ್ರೀ ಡಿಜಿ ಅಶ್ವತ್ಥನಾರಯಣರಾವ್, ' ಕುಮಾರಸ್ವಾಮಿ, ಡಿ. ಆರ್ ಶ್ರೀನಿವಾಸರಾವ್, ಶ್ರೀಮತಿ ಮಾಲತಿ ನಾಗರಾಜ್. ಹೆಗ್ಗೆರೆ ಚಂದ್ರಶೇಖರ್, ಟಿ ಎಸ್ ನಾಗರಾಜ್ ರಾವ್, ಶ್ರೀ ಪ್ರಕಾಶ್ (ಡೈರಿ), ರಾಘವೇಂದ್ರ ಜೋಶಿ,ಗಂಗಾಧರ್ ಜೋಶಿ, ಟಿ. ಮೋಹನ್ ಕುಮಾರ್, ಶ್ರೀನಾಥ್ ಚಿಂತಾಮಣಿ ಅನಂತರಾಘವ, ಪುರುಷೋತ್ತಮಾಚಾರ್, ಶ್ರೀ ಮೋಹನ್ ರಾಜು, ಅಂಜನ್ ಕುಮಾರ್ ಶರ್ಮ ರವರಿಗೂ ಹಾಗೂ ಈ ಕಾರ್ಯಕ್ರಮಕ್ಕೆ ಸಲಹೆ, ಸಹಕಾರ ಮತ್ತು ಉತ್ತೇಜವನ್ನು ನೀಡಿದ ನಮ್ಮ ಸಮುದಾಯದ ಹಿರಿಯ ಮುಖಂಡರಾದ ಕೆ ಎನ್ ಎಲ್ ರಾವ್ ಅವರಿಗೂ ಹಾಗೂ ಶೃಂಗೇರಿ ಆಡಳಿತ ಮಂಡಳಿಯ ಸಿಬ್ಬಂದಿ, ಶೃಂಗೇರಿ ಬ್ರಾಹ್ಮಣ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ವಿಶೇಷವಾಗಿ ಕರ್ನಾಟಕ ರಾಜ್ಯದ ಎಲ್ಲಾ ಮೂಲೆಗಳಿಂದ ಆಗಮಿಸಿದ ಎಲ್ಲಾ ಸಂಘ–ಸಂಸ್ಥೆಯವರಿಗೂ, ಎಲ್ಲಾ ವಿಪ್ರ ಬಾಂಧವರಿಗೆ ಮತ್ತು ಈ ಕಾರ್ಯಕ್ರಮಕ್ಕೆ. ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದ ಪ್ರತಿಯೊಬ್ಬರಿಗೂ, ಶ್ರೀ ಶಾರದಾಮಾತೆಯ ಹಾಗೂ ಗುರುಗಳ ಅನುಗ್ರಹ ಆಶೀರ್ವಾದ ಸಿಗಲಿ ಎಂದು ಪ್ರಾರ್ಥಿಸುತ್ತಾ ಎಲ್ಲರಿಗೂ ಧನ್ಯವಾದಗಳು ತಿಳಿಸುತ್ತೇನೆ.

ವಿಶೇಷವಾಗಿ ಮತ್ತು ಇತರೆ ಸ್ಥಳಗಳಿಂದ ಈ ಕಾರ್ಯಕ್ರಮಕ್ಕೆ ಶೃಂಗೇರಿಗೆ ಬರಲು ಸಾರಿಗೆ ಸಹಕಾರವನ್ನು ನೀಡಿದ ಸ್ಮಾರ್ಟ್ ಶಾಲೆಯ ಸಂಸ್ಥಾಪಕರಾದ ಶ್ರೀ ಎಲ್ ಎಸ್ ಶಾಮ್ ಸುಂದರ್ ಶರ್ಮಾ, ಹಾವೇರಿಯ ಪವನ್ ಕೆ. ಬಹದ್ದೂರ್ ದೇಸಾಯಿ, ಹುಬ್ಬಳ್ಳಿಯ ಶ್ರೀ ವಿಜಯನಾಡ ಜೋಷಿ ಶ್ರೀ ನಾಗೇಶ್ ಕೃಷ್ಣಮೂರ್ತಿ, ಶ್ರೀ ಎನ್ ಮುರಳಿಧರ್, ಶ್ರೀ ಡಿ. ಮುನಿರಾಜು, ಚಿಂತಾಮಣಿಯ ವಕೀಲರಾದ ಶ್ರೀ ಶ್ರೀನಾಥ್, ಬಳ್ಳಾರಿ ಪ್ರಕಾಶ್ ರಾವ್, ಡಿ ಜಿ ಅಶ್ವತ್ಥನಾರಾಯಣರಾವ್, ವೈ ಜಿ ರಾಘವೇಂದ್ರ ಶ್ರೀ ರಾಘವೇಂದ್ರ ಭಟ್, ಶ್ರೀ ಪುರುಷೋತ್ತಮಾಚಾರ್ ಶ್ರೀ ವಿನಾಯಕ, ಶ್ರೀ ಸಂಜೀವರಾಯ, ಶ್ರೀ ಪ್ರಕಾಶ ಡೈರಿ, ಕೆಆರ್ ಪುರ ಮುರಳಿಧರ್, ಸಿ ಎಚ್ ಪ್ರಭಾಕರ್, ಶ್ರೀ ಸೋಮಸುಂದರ್, ಶುಕ್ಲಯಜುರ್ವೇದ ಮಹಾಸಭೆಯ ಶ್ರೀ ವೆಂಕಟೇಶ ದ್ವಾರಕನಾಥ್, ಶ್ರೀ ನಾಗರಾಜರಾವ್ ಮತ್ತು ಎಲ್ಲರಿಗೂ ಅನಂತ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಕಾರ್ಯಕ್ರಮವನ್ನು ರೂಪಿಸಲು ಕಾರಣೀಕರ್ತರಲ್ಲಿ ಒಬ್ಬರಾದ ಶ್ರೀ ವೈ ಎ ಸುಧಾಕರಬಾಬು ಅವರ ಕಾರ್ಯವೈಕರಿಯು ತುಂಬಾ ಶ್ಲಾಘನೀಯವಾಗಿದ್ದು ಅವರಿಗೂ ಮತ್ತು ಮಾರ್ಗದರ್ಶಿಗಳು ಹಾಗೂ ಆರ್ಥಿಕ ಸಹಾಯವನ್ನು ನೀಡಿದ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿಯವರಿಗೆ ಸಹ ನನ್ನ ವಿಶೇಷ ಧನ್ಯವಾದಗಳನ್ನು ತಿಳಿಸುತ್ತೇನೆ.

**– ಡಿ.ವಿ. ರಾಜೇಂದ್ರ ಪ್ರಸಾದ್**

ಉಪಾಧ್ಯಕ್ಷರು, ಸಮ್ಮೇಳನ ಸಮಿತಿ

## ಪ್ರಖ್ಯಾತ ಚಲನಚಿತ್ರ ನಟ ಸಿ.ವಿ. ಶಿವಶಂಕರ್



ಕನ್ನಡ ಚಲನಚಿತ್ರ ಹಾಗೂ ರಂಗಭೂಮಿಯ ಹಿರಿಯ ದಿಗ್ಗಜ ನಟ, ನಿರ್ದೇಶಕ, ಸಾಹಿತಿ, ಕನ್ನಡ ಕುವರ ಶ್ರೀ ಸಿ.ವಿ. ಶಿವಶಂಕರ್ ರವರ ನಿಧನ ಕನ್ನಡ ಕಲಾ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ.

ಬೆಂಗಳೂರು ಬೆಳೆಯೋಕೆ ಮುಂಚೇನೆ 'ಬೆಳೆದಿದೆ ನೋಡಾ ಬೆಂಗಳೂರು ನಗರ' ಅಂತಾ ಬರೆಸಿದ್ದ... 'ಸಿರಿವಂತನಾದರೂ ಕನ್ನಡ ನಾಡಲ್ಲಿ ಬೆಳೆವೆ...' ಎನ್ನುವ ಸಾಲುಗಳನ್ನು ಪೋಣಿಸಿದ್ದವರು, ಹಿರಿಯ ನಿರ್ದೇಶಕ ಸಿ.ವಿ. ಶಿವಶಂಕರ್ ಇವರ ಹಿರಿಯ ಪುತ್ರ ವೆಂಕಟ್ ಭಾರದ್ವಾಜ್ ಸಿನಿಮಾ ನಿರ್ದೇಶಕರಾಗಿದ್ದಾರೆ. ಕಿರಿಯ ಪುತ್ರ ಲಕ್ಷ್ಮಣ್ ಕೂಡಾ ನಟರಾಗಿ ಗುರುತಿಸಿಕೊಂಡಿದ್ದಾರೆ. ಕನ್ನಡ ಚಿತ್ರರಂಗದ ಸಂಪೂರ್ಣ ಇತಿಹಾಸ ಬಲ್ಲವರಾಗಿದ್ದ ಶಿವಶಂಕರ್ ಅವರ ಅಗಲಿಕೆಯಿಂದ ಚಿತ್ರರಂಗದ ಕೊನೆಯ ಕೊಂಡಿ ಕಳಚಿ ಬಿದ್ದಂತಾಗಿದೆ.

ತೀರಾ ಸಣ್ಣ ವಯಸ್ಸಿಗೇ ಚಿತ್ರರಂಗಕ್ಕೆ ಬಂದು ಬಾಲ ನಟರಾಗಿ ಹೆಸರು ಮಾಡಿದ್ದರು. ಸ್ಕೂಲ್ ಮಾಸ್ಟರ್, ರತ್ನಗಿರಿ ರಹಸ್ಯ, ಕೃಷ್ಣಗಾರುಡಿ, ಧರ್ಮವಿಜಯ, ಭಕ್ತವಿಜಯ, ಆಶಾಸುಂದರಿ, ವೀರಸಂಕಲ್ಪ ಚಿತ್ರಗಳಲ್ಲಿ ನಟಿಸಿದ್ದಾರೆ. ಅನೇಕ ಹಿರಿಯ ನಿರ್ದೇಶಕರ ಬಳಿ ಕೆಲಸ ಮಾಡಿ ಅನುಭವ ಪಡೆದು ನಂತರ ಮನೆಕಟ್ಟಿನೋಡು ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾದರು. ಪದವೀಧರ, ನಮ್ಮ ಊರು, ಮಹಡಿಯ ಮನೆ, ಹೊಯ್ಸಳ, ಮಹಾ ತಪಸ್ವಿ, ವೀರಮಹಾದೇವ ಚಿತ್ರಗಳನ್ನು ನಿರ್ದೇಶನ ಮಾಡಿದರು. 1994ರಲ್ಲಿ ರಾಜ್ಯ ಪ್ರಶಸ್ತಿಯನ್ನೂ ಪಡೆದಿದ್ದರು.

ಅಗಲಿದ ಕನ್ನಡ ಕಲಾ ಚೇತನದ ಆತ್ಮಕ್ಕೆ ಸದ್ಗತಿ ದೊರೆಯಲೆಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಯು ಭಗವಂತನಲ್ಲಿ ಪ್ರಾರ್ಥಿಸುತ್ತದೆ.

## ಡಿ.ಆರ್. ಶ್ರೀಕಂಠಯ್ಯ



ಬೆಂಗಳೂರಿನ ಸಮಾಜದ ಹಿರಿಯ ಮುಖಂಡರು, ಖ್ಯಾತ ಉದ್ಯಮಿಗಳು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಾಜಿ ಉಪಾಧ್ಯಕ್ಷರು, ಆಗಿದ್ದ ಡಿ.ಆರ್. ಶ್ರೀಕಂಠಯ್ಯ ನವರ ಇತ್ತಿಚೆಗೆ ನಿಧನರಾದರು. ಅಗಲಿದ ಚೇತನಕ್ಕೆ ಭಗವಂತನು ಸದ್ಗತಿಯನ್ನು ಅನುಗ್ರಹಿಸಲೆಂದು ಮಹಾಸಭೆಯು ಪ್ರಾರ್ಥಿಸುತ್ತದೆ.

P.M. SANTOSHA HOSPITAL
ಪಿ.ಎಂ. ಸಂತೋಷ ಆಸ್ಪತ್ರೆ
(A UNIT OF P.M. SANTOSHA CHARITABLE TRUST)
YOUR HEALTH IS OUR MISSION

ಪಿ ಎಂ ಸಂತೋಷ ಆಸ್ಪತ್ರೆ
ಮತ್ತು
ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ
ಸಹಯೋಗದಲ್ಲಿ
ಮಹಿಳೆಯರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಉಚಿತ ಸೌಲಭ್ಯಗಳು

ಬಿ ಪಿ ✳ ಬ್ಲಡ್ ಗ್ಲುಕೋಸ್ ✳ ಹಿಮೋಗ್ಲೋಬಿನ್ ✳ ಟೋಟಲ್ ಕೊಲೆಸ್ಟ್ರಾಲ್
ಮೂತ್ರ ಪರೀಕ್ಷೆ ✳ ಈ ಸಿ ಜಿ ✳ ಎತ್ತರ ✳ ತೂಕ ✳ ವೈದ್ಯರೊಂದಿಗೆ ಸಮಾಲೋಚನೆ

ದಿನಾಂಕ : 29/7/2023, ಶನಿವಾರ
ಸಮಯ : ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಘಂಟೆ ವರೆಗೆ
ಸ್ಥಳ : ಗಾಯತ್ರಿ ಭವನ 9ನೇ ಮುಖ್ಯ ರಸ್ತೆ, ಸಿದ್ದಣ್ಣ ಬಡಾವಣೆ, ತ್ಯಾಗರಾಜನಗರ, ಬಸವನಗುಡಿ, ಬೆಂಗಳೂರು - 560070

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9742088412

ಪಿ ಎಂ ಸಂತೋಷ ಆಸ್ಪತ್ರೆ
Ward No.198 Near Mahaveer Lakes Apartment, Dr.Vishnuvardhana Road, Sunkalpalya, Bengaluru - 560060.

ಪಿ ಎಂ ಸಂತೋಷ ಕ್ಲಿನಿಕ್
#730, Dr.Vishnuvardhan Road, Opposite Sai Sri Heritage Apartment, Kengeri, Bengaluru, 560060.

More info:
www.pmsantoshahospital.com

FOR EMERGENCY CALL: 7996666888/89

# ಶಸ್ತ್ರವೈದ್ಯ ಪ್ರವೀಣ– ಡಾ. ಎಸ್ ಸುಬ್ಬರಾಯರು

– ಸುರೇಶ್ ಮೂನ.

ಸುಮಾರು ಒಂದು ಶತಮಾನಕ್ಕೂ ಹಿಂದೆಯೇ ಮೈಸೂರು ಸಂಸ್ಥಾನದ ಖ್ಯಾತ ಶಸ್ತ್ರವೈದ್ಯ ಪ್ರವೀಣರಾಗಿದ್ದವರು ಡಾಕ್ಟರ್ ಎಸ್. ಸುಬ್ಬರಾಯರು. ಇವರು ಹೊಯ್ಸಳ ಕರ್ನಾಟಕರು. ಹೊಯ್ಸಳ ಕರ್ನಾಟಕ ಸಂಘವು ತಮ್ಮ ಸಮುದಾಯದ ಸಾಧಕರ ಮಾಲೆಯಲ್ಲಿ ಇವರ ಬಗ್ಗೆ ಒಂದು ಕಿರುಪುಸ್ತಕವನ್ನು ಹೊರತಂದಿದೆ. ಸುಬ್ಬರಾಯರ ಕುಟುಂಬ ವರ್ಗದವರೇ ನೀಡಿದ ಮಾಹಿತಿ ಆಧಾರಿತ ಈ ಕೃತಿಯನ್ನೇ ಇಲ್ಲಿ ಆಕರವನ್ನಾಗಿ ಬಳಸಿಕೊಳ್ಳಲಾಗಿದೆ.

ಸುಬ್ಬರಾಯರು 1883 ರ ಜೂನ್ 24ರಂದು ಜನಿಸಿದರು. ತಂದೆ ಶ್ರೀಕಂಠಯ್ಯ. ತಾಯಿ ಪುಟ್ಟಕ್ಕಯ್ಯ. ಮಾತಾಪಿತೃಗಳು ದೈವಭಕ್ತರು, ಧರ್ಮ ಬೀರುಗಳು ಮತ್ತು ಶಿಸ್ತಿನ ಸಿಪಾಯಿಗಳಾಗಿದ್ದವರು. ಈ ಗುಣಗಳು ಮತ್ತು ಸೇವಾ ಮನೋಭಾವ ಸುಬ್ಬರಾಯರಿಗೆ ಬಳುವಳಿಯಾಗಿ ಬಂದಿತು . ಇವರ ಪ್ರಾರಂಭಿಕ ವಿದ್ಯಾಭ್ಯಾಸ ಮೈಸೂರಿನ ವೆಸ್ಲಿಯನ್ ಮಿಷನ್ ಪಾಠಶಾಲೆಯಲ್ಲಿ ನಡೆಯಿತು. ಪ್ರತಿಹಂತದಲ್ಲೂ ಪ್ರಥಮ ಸ್ಥಾನದಲ್ಲಿ ತೇರ್ಗಡೆ ಹೊಂದುತ್ತಿದ್ದ ಇವರ ಶ್ರದ್ಧೆ ಮತ್ತು ಪರಿಶ್ರಮವನ್ನು ಗಮನಿಸಿದ ಶಾಲೆಯ ಆಂಗ್ಲ ಉಪಾಧ್ಯಾಯರೊಬ್ಬರು ಇವರಿಗೆ ವಿದ್ಯಾರ್ಥಿವೇತನ ದೊರೆಯುವಂತೆ ಮಾಡಿದರು. 1895 ರಿಂದ 1898 ರವರಿಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿಎ ಪದವೀಧರರಾದರು. ಇನ್ನೂ ವ್ಯಾಸಂಗದಲ್ಲಿ ಇದ್ದಾಗಲೇ ವೆಂಕಟಲಕ್ಷ್ಮಮ್ಮ ಎಂಬ ಸುಶಿಕ್ಷಿತ ಕನ್ಯೆಯೊಂದಿಗೆ ವಿವಾಹವಾಯಿತು. ಬಿಎ ವ್ಯಾಸಂಗದಲ್ಲಿ ಇವರು ಭೌತಶಾಸ್ತ್ರ, ರಸಾಯನಶಾಸ್ತ್ರ, ಮತ್ತು ಗಣಿತ ಶಾಸ್ತ್ರಗಳನ್ನು ಐಚ್ಛಿಕ ವಿಷಯಗಳನ್ನಾಗಿ ಆರಿಸಿಕೊಂಡಿದ್ದರು. ಹೀಗಾಗಿ ಬಿಎ ನಂತರ ಮದ್ರಾಸಿನ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ವ್ಯಾಸಂಗವನ್ನು ಮುಂದುವರಿಸಿದರು. ದಿವಾನ್ ಪೂರ್ಣ ರಾಘವೇಂದ್ರರಾಯರು ಇವರಿಗೆ ನೆರವಾಗಿ ಮೈಸೂರು ಅರಮನೆಯ ಮೂಲಕ ವಿದ್ಯಾರ್ಥಿವೇತನವನ್ನು ದೊರಕಿಸಿಕೊಟ್ಟರು. 1903– 1904 ರಲ್ಲಿ ವೈದ್ಯಕೀಯ ಶಿಕ್ಷಣವನ್ನು ಪ್ರಥಮ ಶ್ರೇಣಿಯನ್ನು ಪಡೆಯುವುದರೊಂದಿಗೆ ಪೂರ್ಣಗೊಳಿಸಿದ ಇವರಿಗೆ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ದೊರೆಯುತ್ತಿದ್ದ ಪ್ರತಿಷ್ಠಿತ ಜಾನ್ಸ್ಟನ್ ಪದಕ ದೊರೆಯಿತು. ವಿದೇಶದಲ್ಲಿ ಹೆಚ್ಚಿನ ವ್ಯಾಸಂಗ ಮಾಡಿ ಹಿಂತುರುಗಿ ಬಂದು ಸಂಸ್ಥಾನದ ಜನರಿಗೆ ಸೇವೆ ಮಾಡಬೇಕೆಂದು ಇವರ ಮನಸ್ಸು ತುಡಿಯುತ್ತಿತ್ತು. ಅದಕ್ಕೆ ಪೂರಕವಾಗಿ 1908 ರಲ್ಲಿ ದಾಮೋದರ್ ದಾಸ್ ವಿದ್ಯಾರ್ಥಿ ವೇತನ ದೊರೆತು ಇಂಗ್ಲೆಂಡ್ನಲ್ಲಿ ಹೆಚ್ಚಿನ ವಿದ್ಯಾಭ್ಯಾಸವನ್ನು ಮುಂದುವರೆಸಲು ಸಾಧ್ಯವಾಯಿತು. ಆದರೆ ಆಗಿನ ಕಾಲದಲ್ಲಿ ವಿದೇಶಕ್ಕೆ ಹೋಗಿ ಬಂದವರನ್ನು ಲಂಡನ್ ಪಾರ್ಟಿ ಎಂದು ಕರೆದು ತಮ್ಮ ಸಮಾಜದಿಂದ ಬಹಿಷ್ಕಾರ ಮಾಡಲಾಗುತ್ತಿತ್ತು. ಆದರೂ ಪ್ರಾಯಶ್ಚಿತ್ತ ಮಾಡಿಕೊಂಡವರಿಗೆ ಇದರಿಂದ ಮುಕ್ತಿ. ಇವಕ್ಕೆಲ್ಲಾ ತಲೆಕೆಡಿಸಿಕೊಳ್ಳದ ಸುಬ್ಬರಾಯರು ಲಂಡನ್ ವಿಶ್ವವಿದ್ಯಾನಿಲಯದ ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ನಲ್ಲಿ ವ್ಯಾಸಂಗ ಮುಂದುವರಿಸಿ ಉನ್ನತ ಪದವಿಗಳನ್ನು ಪಡೆದರು. ಅಲ್ಲಿನ ಆಸ್ಪತ್ರೆಗಳಿಗೆ ಭೇಟಿ ನೀಡಿ ಹೆಚ್ಚಿನ ಅನುಭವ ಮತ್ತು ಪರಿಣಿತಿಯನ್ನು ಪಡೆದರು. ಹಿಂತಿರುಗಿ ಬಂದ ಮೇಲೆ ವಿದೇಶದಲ್ಲಿ ಉನ್ನತ ಪದವಿಗಳನ್ನು ಪಡೆದುಬಂದ ಇವರಿಗೆ ಬಹುಬೇಗ ಸರ್ಕಾರಿ ಆಸ್ಪತ್ರೆಯಲ್ಲಿ ಉತ್ತಮ ಹುದ್ದೆ ದೊರೆಯಿತು. ಇಂತಹವರನ್ನು ಪ್ರಾಯಶ್ಚಿತ್ತಕ್ಕೆ ಹೇಗೆ ಒಳಪಡಿಸಬೇಕು ಎಂಬುದೇ ಸಂಪ್ರದಾಯಸ್ಥರ ಸಮಸ್ಯೆಯಾಗಿತ್ತು. ಕೊನೆಗೆ ತಂದೆ–ತಾಯಿಯರ, ಹಿತೈಷಿಗಳ ಕೋರಿಕೆಗೆ ಮಣಿದು ಶೃಂಗೇರಿಯ ಗುರುಗಳಿಂದ ದೇವರ ತೀರ್ಥವನ್ನು ಪ್ರೋಕ್ಷಣೆ ಮಾಡಿಸಿಕೊಂಡು ಪ್ರಾಯಶ್ಚಿತ್ತದ ಶಾಸ್ತ್ರವನ್ನು ಮುಗಿಸಿದರು. ವೈದ್ಯಕೀಯದ ಮೂಲಕ ಜನಸೇವೆಯೇ ಜನಾರ್ದನ ಸೇವೆ ಎಂಬ ಜೀವನದ ಗುರಿಯನ್ನು ಇಟ್ಟುಕೊಂಡು ತಂದೆಯ ಊರಾದ ಅರಕಲಗೂಡಿನಲ್ಲಿ ಸ್ವಂತ ಖರ್ಚಿನಲ್ಲಿ ಸಾರ್ವಜನಿಕ ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟರು. 1910ರಿಂದ 1918 ರವರಿಗೆ ಮೈಸೂರಿನ ಕೆಆರ್ ಆಸ್ಪತ್ರೆಯಲ್ಲಿ ಸಹಾಯಕ ಸರ್ಜನ್ ನಂತರ ರೆಸಿಡೆನ್ಶಿಯಲ್ ಮೆಡಿಕಲ್ ಆಫೀಸರ್ ಆಗಿ ಸೇವೆ ಸಲ್ಲಿಸಿದರು. 1918ರಲ್ಲಿ ಶಿವಮೊಗ್ಗ ನಗರಕ್ಕೆ ಜಿಲ್ಲಾ ವೈದ್ಯಾಧಿಕಾರಿಯಾಗಿ ವರ್ಗಾವಣೆಯಾಯಿತು. ಅಲ್ಲಿ ಇವರ ಸೇವಾಮನೋಭಾವಕ್ಕೆ ಮನ್ನಣೆ ದೊರೆತು ಜನಪ್ರಿಯರಾಗಿ ಗಣ್ಯವ್ಯಕ್ತಿಗಳಿಗೆ ಹತ್ತಿರದವರಾದರು. 1920 ರಲ್ಲಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ವೈದ್ಯಾಧಿಕಾರಿಯಾಗಿ ನೇಮಕಗೊಂಡು ಇಲ್ಲಿ ಅನೇಕ ಆಡಳಿತಾತ್ಮಕ ಸುಧಾರಣೆಯನ್ನು ತಂದರು. ಕಿವಿ, ಗಂಟಲು ವಿಭಾಗ, ಎಕ್ಸರೇ, ಪೆಥಾಲಜಿ, ಹೊರ ರೋಗಿಗಳ ವಿಭಾಗ ಇವೆಲ್ಲ ಇವರ ಕಾಲದ ಕೊಡುಗೆಗಳು. ಈ ಮಧ್ಯೆ ಬೆಂಗಳೂರು ಮೆಡಿಕಲ್ ಸ್ಕೂಲಿನಲ್ಲಿ ಪ್ರಾಂಶುಪಾಲರಾಗಿ, ಶಸ್ತ್ರಚಿಕಿತ್ಸೆಯ ಮುಖ್ಯಾಧಿಕಾರಿಯಾಗಿಯೂ ಕಾರ್ಯನಿರ್ವಹಿಸಿದರು.

ಇವೆಲ್ಲದರ ನಡುವೆಯೇ ಇವರ ಆರನೆಯ ಪುತ್ರನ ಜನನವಾದ ನಂತರ ಪತ್ನಿ ವೆಂಕಟಲಕ್ಷ್ಮಮ್ಮ ಅವರು ಇನ್ಫ್ಲುಯೆನ್ಸ ರೋಗದಿಂದ ನಿಧನರಾದರು. ವಯಸ್ಸು ಚಿಕ್ಕದಾಗಿತ್ತಾದ್ದರಿಂದ ಹಿರಿಯರ ಒತ್ತಾಯದ ಮೇರೆಗೆ 1924 ರಲ್ಲಿ ಹಾಸನದ ಶ್ರೀಕಂಠಯ್ಯನವರ ಪುತ್ರಿ ಪಾರ್ವತಮ್ಮ ಅವರನ್ನು ವಿವಾಹವಾದರು.

1928–29 ರಲ್ಲಿವಿಶ್ವೇಶ್ವರ ಪುರದಲ್ಲಿ ಒಂದು ದೊಡ್ಡ ನಿವೇಶನವನ್ನು ಖರೀದಿಸಿ ಸತ್ಸುಮ ಎಂಬ ವಿಶಾಲವಾದ ಮನೆಯನ್ನು ಕಟ್ಟಿಸಿ ಅಲ್ಲಿ ವಾಸಿಸತೊಡಗಿದರು. ಈ ಬಂಗಲೆಯ ವಾಸ್ತು, ವಿನ್ಯಾಸ, ಶೈಲಿ, ತಾಂತ್ರಿಕತೆಗಳು ಆಗಿನ ಬೆಂಗಳೂರಿನಲ್ಲಿ ವಿಶಿಷ್ಟ ಮತ್ತು ವಿಭಿನ್ನವಾಗಿದ್ದು ಮ್ಯಾನ್ಷನ್ ಆಫ್ ಬ್ಯಾಂಗಲೋರ್ ಎಂದೇ ಪ್ರಸಿದ್ಧವಾಗಿತ್ತು.

ಈ ವೇಳೆಗಾಗಲೇ ಇವರು ಮೈಸೂರು ಮಹಾರಾಜರ ಅಪಾರ ಗೌರವಕ್ಕೆ ಪಾತ್ರರಾಗಿದ್ದರು. 1925ರಲ್ಲಿ ಸೀನಿಯರ್ ಸರ್ಜನ್ ಆಗಿ ನೇಮಕಗೊಂಡ ಸುಬ್ಬರಾಯರನ್ನು ಮಹಾರಾಜ ಕೃಷ್ಣರಾಜ ಒಡೆಯರ್ ಅವರ ಆದೇಶದ ಮೇರೆಗೆ ಯುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್, ಅವರ ಜೊತೆಗೆ ಯುರೋಪ್ ಪ್ರವಾಸಕ್ಕೆ ಕರೆದೊಯ್ದರು. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮುಂತಾದ ಕಡೆಗಳಲ್ಲಿ ನೂತನ ವೈದ್ಯಕೀಯ ಅದರಲ್ಲೂ ಶಸ್ತ್ರಚಿಕಿತ್ಸೆಯ ವಿಧಿವಿಧಾನಗಳನ್ನು

ಅಧ್ಯಯನ ಮಾಡಿ ಹಿಂತಿರುಗಿದ ನಂತರ ನಮ್ಮ ನಾಡಿನ ವೈದ್ಯಕೀಯ ಪದ್ಧತಿಯಲ್ಲೂ ಅವುಗಳನ್ನು ಅಳವಡಿಸಿಕೊಂಡರು. ಸೀನಿಯರ್ ಸರ್ಜನ್ ಹುದ್ದೆಯ ಜೊತೆಗೆ ಇವರು ಮೈಸೂರು ಸರ್ಕಾರದ ವಿಮಾ ಇಲಾಖೆಯ ತಪಾಸಣಾ ಅಧಿಕಾರಿಯಾಗಿಯೂ, ಇನ್‌ಸ್ಪೆಕ್ಟರ್ ಜನರಲ್ ಆಫ್ ಪ್ರಿಸನ್ಸ್ ಆಗಿಯೂ ಸೇವೆ ಸಲ್ಲಿಸಿದರು. 1925–35 ದಶಕದಲ್ಲಿ ಸಂಸ್ಥಾನದಾದ್ಯಂತ ನೂರಾರು ಡಿಸ್ಪೆನ್ಸರಿ ಗಳನ್ನು ಸ್ಥಾಪಿಸಲು ಕಾರಣರಾದರು. ಜಿಲ್ಲಾಮಟ್ಟದ ಆಸ್ಪತ್ರೆಗಳಿಗೆ ಭೇಟಿ ನೀಡಿ ಅಲ್ಲಿಯ ಶಸ್ತ್ರಚಿಕಿತ್ಸಾ ವಿಧಾನಕ್ಕೆ ಹೊಸ ಸ್ವರೂಪವನ್ನು ನೀಡಿದರು. ಇವರು ಸೀನಿಯರ್ ಸರ್ಜನ್ ಆಗಿದ್ದಾಗ ಬೆಂಗಳೂರಿನಲ್ಲಿ ಮಾನಸಿಕ ರೋಗದ ಆಸ್ಪತ್ರೆಯನ್ನು ಸ್ಥಾಪಿಸಲಾಯಿತು. ಈಗ ನಿಮ್ಹಾನ್ಸ್ ಎಂದು ಹೆಸರು ಪಡೆದಿರುವ ಈ ಸಂಸ್ಥೆ ದಕ್ಷಿಣ ಭಾರತದ ಮೊದಲ ಮಾನಸಿಕ ಚಿಕಿತ್ಸೆಯ ಆಸ್ಪತ್ರೆ ಎಂಬ ಖ್ಯಾತಿಗೆ ಒಳಗಾಯಿತು.

ಮೈಸೂರು ಸ್ಯಾಂಡಲ್ ಸೋಪ್ ತಯಾರಿಕೆಗೆ ಹೆಸರಾದ ಎಸ್. ಜಿ ಶಾಸ್ತ್ರಿಗಳ ಸಹಕಾರದೊಂದಿಗೆ ಕೈಗಾರಿಕಾ ಮತ್ತು ಪರೀಕ್ಷಾ ಪ್ರಯೋಗಶಾಲೆಯನ್ನು ಸ್ಥಾಪಿಸಿದರು. ಮುಂದೆ ಇದು ಸಂಯುಕ್ತ ಬಂಡವಾಳ ಸಂಸ್ಥೆಯಾಗಿ ಪರಿವರ್ತನೆಯಾಯಿತು. ಇದರ ಮೊಟ್ಟ ಮೊದಲ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿ ಸುಬ್ಬರಾಯರು ನೇಮಕಗೊಂಡರು. ಇವರ ಕಾಲದಲ್ಲಿ ತಯಾರಾಗುತ್ತಿದ್ದ ಐಟಿಯಾಲ್, ಆಸ್ತಮಾ ಸಿರಪ್, ಗ್ರೈಪ್ ವಾಟರ್ ಇವೆಲ್ಲ ಮನೆಮಾತಾಗಿದ್ದು ಮುಂದೆ ಈ ಸಂಸ್ಥೆ ಆಸ್ಟ್ರಾ ಐಡಿಎಲ್ ಜೊತೆ ವಿಲೀನಗೊಂಡಿತು. ಹೊಯ್ಸಳ ಕರ್ನಾಟಕ ಸಂಘದ ಬೆಳವಣಿಗೆಯಲ್ಲೂ ಇವರ ಕೊಡುಗೆ ಅಪಾರ.

ಇವರ ಸೇವಾವಧಿಯಲ್ಲಿ ದಿವಾನರು ಗಳಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯ, ಸರ್. ಮಿರ್ಜಾ ಇಸ್ಮಾಯಿಲ್, ಮಹಾರಾಜರ ಖಾಸಗಿ ಕಾರ್ಯದರ್ಶಿ ತಂಬುಚೆಟ್ಟಿ, ದಿವಾನ್ ಎನ್. ಮಾಧವರಾವ್ ಮುಂತಾದ ಗಣ್ಯಾತಿಗಣ್ಯರ ನಿಕಟ ಪರಿಚಯವಿತ್ತು. ಧರ್ಮಕಾರ್ಯ ಪ್ರವೀಣ ಸಜ್ಜನ ರಾಯರು ಇವರ ಆಪ್ತಮಿತ್ರರಾಗಿದ್ದರು.

ಮಹಾತ್ಮ ಗಾಂಧೀಜಿಯವರು ವಿಶ್ರಾಂತಿಗಾಗಿ ನಂದಿಬೆಟ್ಟದಲ್ಲಿ ತಂಗಿದ್ದಾಗ ಅವರ ಆರೋಗ್ಯದ ಮೇಲ್ವಿಚಾರಕರಾಗಿದ್ದವರು ಇವರೇ. ಗಾಂಧೀಜಿಯವರು ಪೂರ್ಣ ಗುಣಮುಖರಾದ ಮೇಲೆ ಸುಬ್ಬರಾಯರನ್ನು ಅಭಿನಂದಿಸಿ ಒಂದು ಪತ್ರವನ್ನು ಬರೆದಿದ್ದರು. ಅಷ್ಟೇ ಅಲ್ಲದೆ ತಮ್ಮ ಆಪ್ತರ ಅನಾರೋಗ್ಯದ ಬಗ್ಗೆ ಉಲ್ಲೇಖಿಸಿ ಸುಬ್ಬರಾಯರು ಪರಿಶೀಲಿಸಬೇಕೆಂದು ಕೋರಿದ್ದರು.

ಹೀಗೆ, ಈ ನಾಡಿನ ವೈದ್ಯಕೀಯ ಕ್ಷೇತ್ರದ ಸರ್ವತೋಮುಖ ಬೆಳವಣಿಗೆಗೆ ಅವಿರತವಾಗಿ ದುಡಿದು ತಮ್ಮ 55ನೆಯ ವಯಸ್ಸಿನಲ್ಲಿ ನಿವೃತ್ತರಾದರು. ನಂತರ ಡಾ. ಶ್ರೀನಿವಾಸಾಚಾರ್ಯ ಅವರೊಂದಿಗೆ ಸೆಂಟ್ ಮಾರ್ಕ್ಸ್ ರೋಡ್ ನಲ್ಲಿ ಒಂದು ಪರ್ಯಾಲೋಚನೆ ಕ್ಲಿನಿಕ್ ಅಥವಾ ಕನ್ಸಲ್ಟೇಶನ್ ಕೇಂದ್ರವನ್ನು ಪ್ರಾರಂಭಿಸಿ ಸುಮಾರು ಏಳು ವರ್ಷ ತಮ್ಮ ಅನುಭವವನ್ನು ಅಲ್ಲಿಗೆ ಧಾರೆ ಎರೆದರು.

1937ರಲ್ಲಿ ರಾಜಕುಮಾರ ಜಯಚಾಮರಾಜೇಂದ್ರ ಒಡೆಯರ್ ಅವರು ಜಪಾನ್ ಮತ್ತಿತರ ಪೂರ್ವ ದೇಶಗಳಿಗೆ ಜ್ಞಾನಾರ್ಜನೆಗಾಗಿ ಸಂಚಾರ ಹೊರಟಾಗ ಸುಬ್ಬರಾಯರನ್ನು ಸಂರಕ್ಷಕರಾಗಿ ಕರೆದೊಯ್ದರು. ಆಗಲೂ ಸಹ ಅನೇಕ ಹೆಸರಾಂತ ಆಸ್ಪತ್ರೆಗಳಿಗೆ ಭೇಟಿ ನೀಡಿ ಅಲ್ಲಿನ ಪ್ರಾಚೀನ ಮತ್ತು ಆಧುನಿಕ ವೈದ್ಯಕೀಯ ಪದ್ಧತಿಗಳ ಅಧ್ಯಯನ ಮಾಡಿದರು.

1937ರಲ್ಲಿ ಇವರ ಬಹುಮುಖ ಪ್ರತಿಭೆಯನ್ನು, ಶಸ್ತ್ರವೈದ್ಯ ನಿಪುಣತೆ ಮತ್ತು ಪರಿಣಿತಿಯನ್ನು ಗೌರವಿಸಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಇವರಿಗೆ ಶಸ್ತ್ರವೈದ್ಯ ಪ್ರವೀಣ ಎಂಬ ಬಿರುದನ್ನು ನೀಡಿ ಸತ್ಕರಿಸಿದರು.

ಹೀಗೆ. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಶ್ರದ್ಧೆ ಆಸಕ್ತಿ ಪ್ರಾಮಾಣಿಕತೆ ಪ್ರಾಮಾಣಿಕತೆ ಯಂತಹ ಉನ್ನತ ಗುಣಗಳೊಂದಿಗೆ ಶ್ರಮಿಸಿ ಎಲ್ಲರ ಗೌರವಕ್ಕೆ ಪಾತ್ರರಾಗಿದ್ದ ಧೀಮಂತ ವ್ಯಕ್ತಿ ಎಸ್. ಸುಬ್ಬರಾಯರು, ಸರ್ವಕಾಲದಲ್ಲೂ ಎಲ್ಲ ಪೀಳಿಗೆಯವರು ನೆನಪಿನಲ್ಲಿ ಇಟ್ಟುಕೊಳ್ಳಲೇ ಬೇಕಾದ ಈ ಮಹಾನುಭಾವರು ತುಂಬು ಜೀವನ ನಡೆಸಿ ತಮ್ಮ 72 ನೇ ವಯಸ್ಸಿನಲ್ಲಿ 1955ರ ಜನವರಿ ಎರಡರಂದು ದೈವಾಧೀನರಾದರು.


**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು**

**ಸ್ಥಳ : ಗಾಯತ್ರಿ ಭವನ**

**ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,**

**ಬನಶಂಕರಿ 2ನೆ ಹಂತ, ಬೆಂಗಳೂರು-70.**

**ದೂರವಾಣಿ : 080-26770066/26771695**

**ಸಮಯ : ಸಂಜೆ 5.00 ರಿಂದ 7.00 ರವರೆಗೆ**

**ಮಂಗಳವಾರ ಮತ್ತು ಶನಿವಾರ**

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು : ಶ್ರೀಮತಿ ಜಯಲತಾ ಸತ್ಯನಾರಾಯಣ್**

**ಮೊ. : 9916325902**

**ಸದಸ್ಯರು**

**ಶ್ರೀಮತಿ ನಳಿನಿ ನಟರಾಜ್, ಮೊ. : 9481788495**

**ಶ್ರೀಮತಿ ಗಾಯತ್ರಿ ರಾವ್, ಮೊ>9980481245**

# "ದಿ ಗ್ರೇಟ್ ಬ್ರಾಹ್ಮಿನ್ ಲ್ಯಾಂಡ್ ರಾಬರಿ"

## – ವಿಪ್ರರೆಲ್ಲರೂ ಓದಲೇ ಬೇಕಾದ ಕಾದಂಬರಿ

– ಡಾ। ಎಂ.ಕೆ. ಶ್ರೀಧರ್

ಹಿರಿಯ ಪತ್ರಕರ್ತರು, ಓರಿಯಂಟಲ್ ನ್ಯೂಸ್ ಸರ್ವೀಸ್‌ನ ಸ್ಥಾಪಕ ಸಂಪಾದಕರು, ನಾಗರಿಕ ಹಿತರಕ್ಷಣೆ ಸಂಸ್ಥೆಗಳ ಸ್ಥಾಪಕರು, ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಯ ವಾರ್ತೆ ಮತ್ತು ವಾಣಿಜ್ಯ ವಿಭಾಗದ ಮುಖ್ಯ ವರದಿಗಾರರಾಗಿದ್ದ ಶ್ರೀಯುತ ಜಿ.ಎಸ್. ಕೃಷ್ಣಮೂರ್ತಿಯವರು ಆಂಗ್ಲಭಾಷೆಯಲ್ಲಿ ಬರೆದ ದಿ ಗ್ರೇಟ್ ಬ್ರಾಹ್ಮಿನ್ ಲ್ಯಾಂಡ್ ರಾಬರಿ ಎಂಬ ಚೊಚ್ಚಲ ಕಾದಂಬರಿಯು 1970–90ರ ದಶಕದಲ್ಲಿ ಸ್ವಾರ್ಥ ಸಿದ್ಧಾಂತಗಳನ್ನು ಒಳಗೊಂಡ ರಾಜಕೀಯ ಪಕ್ಷಗಳು ನಮ್ಮ ದೇಶ, ಕರ್ನಾಟಕ, ತಮಿಳುನಾಡು ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದು ತಮ್ಮ ರಾಜನೀತಿ–ಕಾರ್ಯಕ್ರಮಗಳ ಮೂಲಕ ಬ್ರಾಹ್ಮಣರು ಹಲವಾರು ಶತಮಾನಗಳಿಂದ ಭೂಮಿ ಒಡೆಯರಾಗಿದ್ದ, ಜೀವನ ನಿರ್ವಹಣೆ ನಡೆಸುತ್ತಿದ್ದ, ಆ ಫಲವತ್ತಾದ ಭೂಮಿಗಳನ್ನು ಭೂಸುಧಾರಣೆ ಕಾಯಿದೆ ಮೂಲಕ, ಎರಡೂವರೆ ಲಕ್ಷ ಹೆಕ್ಟೇರ್ ಕಬಳಿಸಿ, ಸಮಾಜದಲ್ಲಿ ಅವರಿಗಿದ್ದ ಸ್ಥಾನಮಾನ, ಗೌರವವನ್ನು ಕಳೆದ ರೀತಿಯನ್ನು ಅ ಐತಿಹಾಸಿಕ ಘಟನಾವಳಿಗಳನ್ನು ಕರುಣಾಜನಕವಾಗಿ ಚಿತ್ರಿಸುತ್ತದೆ. ಆಗಿನ ಪ್ರಧಾನ ಮಂತ್ರಿಯಾಗಿದ್ದ ದಿ. ಇಂದಿರಾಗಾಂಧಿ ಅವರ ತುರ್ತುಪರಿಸ್ಥಿತಿ ಹೇರಿಕೆ, ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ದಿ. ದೇವರಾಜ ಅರಸ್ ಅವರ 'ಉಳುವವನಿಗೆ ಭೂಮಿ' ಕಾಯಿದೆಯ ಮೂಲಕ ಲಕ್ಷಾಂತರ ಮಧ್ಯಮವರ್ಗದ ಕುಟುಂಬಗಳು, ಭೂಮಿಯನ್ನು ಗೇಣಿ ಮಾಡಿ, ನೆಚ್ಚಿ ಬದುಕುತ್ತಿದ್ದ ಸಾವಿರಾರು ಬ್ರಾಹ್ಮಣ ಕುಟುಂಬಗಳ ಜೀವನ ಅಯೋಮಯವಾಗಿದ್ದನ್ನು ಕಾಲ್ಪನಿಕವಾಗಿ ದಕ್ಷಿಣ ಕರ್ನಾಟಕದ ನೀಲಾಂಜಿಪೇಟೆಯ ಕಾಶಿ ಈಶ್ವರಯ್ಯ ಕುಟುಂಬದ ಮೂಲಕ ವರ್ಣಿಸಲಾಗಿದೆ.

ಸಣ್ಣ ಉದ್ಯೋಗ ಮಾಡುತ್ತಿದ್ದ, ಅರು ಎಕರೆ ಫಲವತ್ತಾದ ಭೂ ಮಾಲೀಕರಾಗಿದ್ದ ಕಾಶಿ ಈಶ್ವರಯ್ಯ ಹೆಂಡತಿ ಮೀನಾಕ್ಷಿ, ಗಂಡು ಮಕ್ಕಳಾದ ಸುಬ್ಬು, ವೆಂಕಟರಮಣ, ಮಗಳು ರಜತಿ ಅವರು ಈ ಕಾದಂಬರಿಯ ಕೇಂದ್ರ ಬಿಂದುಗಳಾಗಿದ್ದು, ಈಶ್ವರಯ್ಯನ ಪ್ರಾಮಾಣಿಕ, ಧಾರ್ಮಿಕ ಜೀವನ, ಮಕ್ಕಳ ಕಾಲೇಜು ವಿದ್ಯಾಭ್ಯಾಸ, ಅವರು ಪದವೀಧರರಾಗಿದ್ದು, ಹಬ್ಬಗಳ ಆಚರಣೆ, ಸಹಪಾಠಿಗಳಾದ ಕುಮುದಾ–ರಮಣರ ಪ್ರಣಯ ಮದುವೆ ನಡೆಯದೇ ಹೋಗಿದ್ದು, ಸುಬ್ಬು ಕೊಯಮತ್ತೂರು, ರಂಗೂನ್‌ನಲ್ಲಿ ಕೆಲಸ ಮಾಡಿ ಹಳ್ಳಿಗೆ ಹಿಂದಿರುಗಿದ್ದು, ರಮಣನ ನಿರುದ್ಯೋಗ, ನೀಲಾಂಜಿಪೇಟೆ ಪ್ರಗತಿಪರ ಯುವಕ ಸಂಘಟನೆ ಸದಸ್ಯರು ಈ ಕಾಯಿದೆ ವಿರುದ್ಧ ಮುಷ್ಕರ, ಸಂಘರ್ಷಕ್ಕೆ ಇಳಿದಿದ್ದು, ಸುಳ್ಳು ಅಪಾದನೆಗಳಿಂದ ಸುಬ್ಬುವಿನ ಕಾರಗೃಹವಾಸ, ಗೇಣಿದಾರ ಕರಿಯನ ವಂಚನೆ, ರಜತಿ– ದೀಪಕ್ ಮದುವೆ, ಸರ್ಕಾರದ ಅಧಿಕಾರಿಗಳಿಗೆ, ಪ್ರಧಾನ ಮಂತ್ರಿಗಳಿಗೆ ಈಶ್ವರಯ್ಯನ ಅಹವಾಲುಪತ್ರದ ವ್ಯರ್ಥ ಪ್ರಯತ್ನ, ಈಶ್ವರಯ್ಯನ ಸಾವು, ದೇಶದಲ್ಲಿ ಜಾರಿಯಾದ ತುರ್ತುಪರಿಸ್ಥಿತಿಯ ಕರಾಳತೆ, ಮೀಸಲಾತಿ ನಿಯಮದಿಂದಾಗಿ ಉಂಟಾದ ಸಾಮಾಜಿಕ ಸಂಘರ್ಷ, ಮೇಲ್ವರ್ಗದವರ ಭರವಸೆರಹಿತ ಭವಿಷ್ಯ ಮುಂತಾದ ಘಟನಾವಳಿಗಳು ಓದುಗರ, ಮನಸ್ಸು–ಹೃದಯಗಳನ್ನು ಹಿಂಡುತ್ತವೆ.

ಈ ರಾಜಕೀಯ ಐತಿಹಾಸಿಕ ಕಾದಂಬರಿ ಕಥನದ ನಡುವೆ 1970–95ರಲ್ಲಿ, ನಮ್ಮ ರಾಜ್ಯ–ದೇಶದಲ್ಲಿ ಆದ ರಾಜಕೀಯ ಸ್ಥಿತ್ಯಂತರಗಳು, ಕೆಲವು ಪಕ್ಷಗಳ ದುರಾಲೋಚನೆ, ತಂತ್ರಗಳು ಅಲ್ಪಸಂಖ್ಯಾತ ಬ್ರಾಹ್ಮಣ ಜನಾಂಗದ ಮೇಲೆ ನಡೆದ ದಮನ, ಬಹು ಸಮುದಾಯಗಳು ಶಾಂತಿ–ಸಾಮರಸ್ಯದಿಂದ ನಡೆಸುತ್ತಿದ್ದ ಜೀವನಕ್ಕೆ ಕೊಡಲಿ ಪೆಟ್ಟು ಬಿದ್ದು, ಆ ಸಮುದಾಯ–ಹಳ್ಳಿಗಳು ದ್ವೇಷ–ವೈಷಮ್ಯಗಳ ಸಂಕೋಲೆಗೆ ಸಿಕ್ಕಿದ್ದನ್ನು ದಾರುಣವಾಗಿ ಮೂಡಿಸಲಾಗಿದೆ. ಜೀವನ ನಿರ್ವಹಣೆ ಕಷ್ಟವಾದ ವಿಷಮ ಪರಿಸ್ಥಿತಿಯಲ್ಲೂ ಬ್ರಾಹ್ಮಣರು ನಂತರ ತಮ್ಮ ಬುದ್ಧಿಶಕ್ತಿ, ಪರಿಶ್ರಮ, ಪ್ರಯತ್ನಗಳ ಮೂಲಕ ಬಹುರಾಷ್ಟ್ರೀಯ ಐಟಿ–ಬಿಟಿ ಸಂಸ್ಥೆಗಳನ್ನು ಸ್ಥಾಪಿಸಿ, ಜಾತಿ, ಕುಲ, ಮತಭೇದವೆಣಿಸದೇ ಲಕ್ಷಾಂತರ ಜನರಿಗೆ ಉದ್ಯೋಗ ನೀಡಿ, ಸಾವಿರಾರು ಕೋಟಿ ರೂಪಾಯಿಗಳನ್ನು ಗಳಿಸಿ ದೇಶಕ್ಕೆ ದೊಡ್ಡ ಮೊತ್ತದ ಆದಾಯ ನೀಡಿದ ಐತಿಹಾಸಿಕ ಸಂಗತಿಗಳನ್ನು ಯಥಾವತ್ತಾಗಿ ಚಿತ್ರಿಸಲಾಗಿದೆ. ಜಿ.ಎಸ್. ಕೃಷ್ಣಮೂರ್ತಿಯವರ ಕಾದಂಬರಿಯು 60 ಸಣ್ಣ ಅಧ್ಯಾಯಗಳನ್ನು ಹೊಂದಿದ್ದು, ಇದರಲ್ಲಿ, ಶಕ್ತಿಯುತ ನಾಣ್ನುಡಿಗಳು ಹೇರಳವಾಗಿವೆ. ಭವಿಷ್ಯ ಜನಾಂಗಕ್ಕೆ ದಾರಿದೀವಿಗೆಯಾಗಿವೆ. ವಿಪ್ರರೆಲ್ಲರೂ, ಭಾರತೀಯರೆಲ್ಲರೂ ಅವಶ್ಯವಾಗಿ ಓದಬೇಕಾದ ಸಂಗ್ರಹಯೋಗ್ಯ ಕಾದಂಬರಿಯನ್ನು ಪ್ರಚಲಿತ ಸಮಾಜಕ್ಕೆ ಸತ್ಯಸಂಗತಿ ತಿಳಿಸಿ, ಮಾರ್ಗದರ್ಶನ ನೀಡಿರುವ ಈ ಕಾದಂಬರಿಯಲ್ಲಿ ಲಘು ಹಾಸ್ಯ, ಕಾರುಣ್ಯ, ಅಣುಕು, ಶೌರ್ಯ, ಎಡಪಂಥೀಯ ಪಕ್ಷಗಳ ನಿಲುವು–ಕೃತ್ಯ, ಸಂಪತ್ತಿನ ಸಮಾನ ವಿನಿಯೋಗದ ವಿಡಂಬನೆಯು ಮಧುರವಾಗಿ ಮೂಡಿಬಂದಿದೆ.

ಖ್ಯಾತ ಆಂಗ್ಲೋ–ಇಂಡಿಯನ್ ಕಾದಂಬರಿಗಳಾದ ಕಮಲಾದಾಸ್‌ರ "ನೆಕ್ಟರ್ ಇನ್ ಸೀವ್", ಹಾಸನ ರಾಜಾರಾವ್ ಅವರ 'ಕಾಂತಾಪುರ', ಆರ್.ಕೆ. ನಾರಾಯಣ್‌ರ 'ವರ್ಲ್ಡ್ ಆಫ್ ನಾಗರಾಜ' ಕಾದಂಬರಿ ಗಳಿಗಿಂತಲೂ ಈ ಕಾದಂಬರಿ ಅತಿಶಯವಾಗಿದೆ ಎಂದು ನನ್ನ ವೈಯಕ್ತಿಕ ಅಭಿಪ್ರಾಯ. ತಮ್ಮ ಮೊದಲ ಪ್ರಯತ್ನದಲ್ಲೇ ಉತ್ತಮ ಕಾದಂಬರಿ ನೀಡಿರುವ ಶ್ರೀಯುತ ಜಿ.ಎಸ್. ಕೃಷ್ಣಮೂರ್ತಿ ಹಾಗೂ ಇದನ್ನು ಪ್ರಕಟಿಸಿರುವ ನವದೆಹಲಿಯ ಗರುಡ ಪ್ರಕಾಶನ್ ಪ್ರೈ. ಲಿ. ನವರು ಅಭಿನಂದನೆಗೆ ಅರ್ಹರು.

# ಚಕ್ರವರ್ತಿ ರಾಜಗೋಪಾಲಚಾರಿ

– ಛಾಯಾಪತಿ ಕೆ.ಎಸ್.




**ಇತ್ತೀಚಿಗೆ ನೂತನ ಸಂಸತ್ ಭವನ ಉದ್ಘಾಟನಾ ಸಮಯದಲ್ಲಿ ಬಹು ಚರ್ಚೆಗೊಳಾಗಾಗಿ ಬಹಳ ಸದ್ದು ಮಾಡಿ ಸುದ್ದಿಯ ಕೇಂದ್ರಬಿಂದುವಾಗಿದ್ದ "ಸೆಂಗೋಲ್" "ಧರ್ಮದಂಡ" ಎಲ್ಲರಿಗೂ ಚಿರಪರಿಚಿತವಾಯಿತು.** ಬ್ರಿಟಿಷರಿಂದ ಭಾರತಕ್ಕೆ ಅಧಿಕಾರ ಹಸ್ತಾಂತರ ಸಂಕೇತವಾಗಿ ಲಾರ್ಡ್ ಮೌಂಟ್ ಬ್ಯಾಟನ್ನರು ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂರವರಿಗೆ ನೀಡಿದ ಈ ದಂಡದ ಪರಿಕಲ್ಪನೆ ಕೊಟ್ಟು, ಮದ್ರಾಸ್ಸಿನಿಂದ ತರಿಸಿ ಕೊಟ್ಟ ವ್ಯಕ್ತಿಯೇ ರಾಜಾಜಿ. ಇವರ ಸಲಹೆಗೆ ಇಷ್ಟೊಂದು ಗೌರವ ಸಿಗಬೇಕಾದರೆ ಆತ ಶ್ರೇಷ್ಠವ್ಯಕ್ತಿಯೇ ಆಗಿರಬೇಕು. ಮಾತ್ರವಲ್ಲ ಭಾರತದಲ್ಲಿ ಪ್ರಪ್ರಥಮವಾಗಿ ಪಾನನಿರೋಧ ಕಾನೂನಿನ ಕಲ್ಪನೆಯನ್ನು ಕೊಟ್ಟು, ಅವರು ಮದ್ರಾಸ್ ಪ್ರಾಂತದ ಮುಖ್ಯಮಂತ್ರಿ ಆಗಿದ್ದಾಗ ಜಾರಿಗೆ ತಂದದ್ದು ಈ ಕರ್ಮಠ ಬ್ರಾಹ್ಮಣನೇ. ಇಂತಹ ಶ್ರೇಷ್ಠ ವ್ಯಕ್ತಿಯ ಬಗ್ಗೆ ಗಣ್ಯರು ಹೀಗೆ ಹೇಳಿದ್ದಾರೆ. ಒಮ್ಮೆ ಗಾಂಧೀಜಿಯವರು ಮದ್ರಾಸಿಗೆ ಬಂದಾಗ ರಾಜಾಜಿಯವರ ಮನೆಯಲ್ಲಿ ಉಳಿದುಕೊಂಡಿದ್ದರು. ರಾಜಾಜಿಯವರ ವ್ಯಕ್ತಿತ್ವ, ವೈಚಾರಿಕತೆ,ಬುದ್ಧಿಶಕ್ತಿ ಇವೆಲ್ಲವನ್ನೂ ನೋಡಿ **"ನಂಬಿಕೆಗೆ ಅರ್ಹರಾದ, ಅಜೇಯರಾದ ದಕ್ಷಿಣದ ದಳಪತಿ ಸಿಕ್ಕಿದರು", ಎಂದರು.**

ಒಮ್ಮೆ ಸ್ವಾಮಿ ವಿವೇಕಾನಂದರು ಮದ್ರಾಸಿಗೆ ಬಂದಾಗ ರಾಜಾಜಿಯವರು ವಾಸವಾಗಿದ್ದ ವಿದ್ಯಾರ್ಥಿನಿಲಯದಲ್ಲೇ ಇಳಿದುಕೊಂಡಿದ್ದರು. ರಾಜಾಜಿಯವರ ಕೊಠಡಿಗೂ ಬಂದಿದ್ದರು. ಗೋಡೆಯ ಮೇಲಿದ್ದ ಶ್ರೀ ಕೃಷ್ಣನ ಚಿತ್ರ ನೋಡಿ ಅವನ ಶರೀರವೇಕೆ ನೀಲಿ ವರ್ಣದ್ದಾಗಿದೆ ಎಂದು ಕೇಳಿದಾಗ ರಾಜಾಜಿಯವರು ಮೇರೆಯಿಲ್ಲದ ಸಮುದ್ರದ ಬಣ್ಣವೂ ಸಹ ನೀಲಿಯಾಗಿರುತ್ತದೆ, ಮೇರೆ ಇಲ್ಲದ ಆಕಾಶದ ಬಣ್ಣವೂ ಸಹ ನೀಲಿಯಾಗಿರುತ್ತದೆ. ಇವೆರಡೂ ಸಹ ಅನಂತವಾದದ್ದು ಹಾಗೆಯೇ ಶ್ರೀ ಕೃಷ್ಣನು ಸಹ ಮೇರೆ ಇಲ್ಲದವನು,ಅನಂತನಾದವನು. ಹಾಗಾಗಿ ಶರೀರವೂ ಸಹ ನೀಲವರ್ಣದ್ದು ಎಂದರು. ಇದನ್ನು ಕೇಳಿ ಸ್ವಾಮಿ ವಿವೇಕಾನಂದರಿಗೆ ಬಹಳ ಸಂತೋಷವಾಗಿ ಇವನು ಮುಂದೆ ದೊಡ್ಡ ಪದವಿಗೆ ಏರುತ್ತಾನೆ, ಕೀರ್ತಿವಂತಾಗುತ್ತಾನೆ ಎಂದು ಹೇಳಿದರು.

ಶ್ರೀ ನೆಹರೂರವರು ತಮ್ಮ ಆತ್ಮಕಥೆಯಲ್ಲಿ ಬರೆಯುತ್ತಾ ರಾಜಾಜಿಯವರ ಬುದ್ಧಿಮತ್ತೆ, ನಿಸ್ವಾರ್ಥಮನೋಭಾವ ಅವರ ಪ್ರಚಂಡ ವಿಮರ್ಶಾಶಕ್ತಿ ಇವೆಲ್ಲವೂ ನಮ್ಮ ಗುರಿ ಸಾಧನೆಗೆ ಮಾರ್ಗದರ್ಶಿಗಳು ಎಂದು ಹೇಳಿದ್ದಾರೆ.

ರಾಜಾಜಿಯವರು ಈ ದೇಶದಲ್ಲಿಯೇ ಅತ್ಯಂತ ಸೂಕ್ಷ್ಮ ಬುದ್ಧಿಯ ಮೇಧಾವಿ ಎಂದು ನಾನು ತಿಳಿದಿದ್ದೇನೆ. ಅವರನಿಲುವನ್ನು ಒಪ್ಪುವೆವೋ ಇಲ್ಲವೋ ಆದರೆ ಅವರ ವಿಚಾರಸ್ಪಷ್ಟತೆ ಆಳ ಮತ್ತು ಅವರು ವಾದವನ್ನು ಮಂಡಿಸುವ ನೈಪುಣ್ಯತೆಗೆ ಮಾರು ಹೋಗಬೇಕಾಗುತ್ತದೆ ಎಂದಿದ್ದಾರೆ ಶ್ರೀಮುರಾರ್ಜಿದೇಸಾಯಿಯವರು.

ಹೀಗೆ ಅನೇಕ ಗಣ್ಯರಿಂದ ಪ್ರಶಂಸೆಗೊಳಗಾದ ವ್ಯಕ್ತಿಗೆ ಅನೇಕ ಹುದ್ದೆಗಳು ಅರಸಿಕೊಂಡು ಬಂದವು.ಬಹುಶಃ ಭಾರತದಲ್ಲಿ ಯಾವವ್ಯಕ್ತಿಗೂ ಇಷ್ಟು ನಾನಾರೀತಿಯ ಅಧಿಕಾರ ದೊರಕಿರಲಾರದು. ಅದಕ್ಕೆ ಸಾಕ್ಷಿಯೆಂಬಂತೆ ಇವರು,

1912ರಲ್ಲಿ ಸೇಲಂ ಪುರಸಭಾಧ್ಯಕ್ಷರಾದರು.

1922ರಲ್ಲಿ ಕಾಂಗ್ರೆಸ್ಸಿನ ಮಹಾಕಾರ್ಯದರ್ಶಿಗಳಾದರು.

1937–39ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯ ಮುಖ್ಯಮಂತ್ರಿಗಳಾದರು.

1947–48ರಲ್ಲಿ ಪಶ್ಚಿಮಬಂಗಾಲದ ರಾಜ್ಯಪಾಲರಾದರು.

1948–50 ರಲ್ಲಿ ಯೂನಿಯನ್ ಇಂಡಿಯಾದ ಗೌರ್ನರ್ ಜನರಲ್ ಆದರು.

1950 ಡಿಸೆಂಬರ್ 17ರ ತನಕ ರಿಪಬ್ಲಿಕ್ ಇಂಡಿಯಾದ ಖಾತೆ ರಹಿತ ಕೇಂದ್ರ ಮಂತ್ರಿ ಆಗಿದ್ದರು.

1950–51 ರಲ್ಲಿ ರಿಪಬ್ಲಿಕ್ ಆಫ್ ಇಂಡಿಯಾ ಕೇಂದ್ರ ಸರ್ಕಾರದ ಗೃಹ ಮಂತ್ರಿಯಾದರು.

1952/54ರಲ್ಲಿ ಮದ್ರಾಸ್ ಪ್ರಾಂತದ ಮುಖ್ಯಮಂತ್ರಿಯಾದರು

1959ರಲ್ಲಿ ಸ್ವತಂತ್ರ ಪಾರ್ಟಿಯ ಸ್ಥಾಪಕರಾದರು.

1954 ರಲ್ಲಿ ಡಾ. ಎಸ್ ರಾಧಾಕೃಷ್ಣನ್ ಮತ್ತು ಡಾ. ಸರ್ ಸಿವಿ

ರಾಮನ್ ಅವರ ಜೊತೆಯಲ್ಲಿ ಭಾರತ ದೇಶದಲ್ಲೇ ಪ್ರಪ್ರಥಮ ಬಾರಿಗೆ, ಅತ್ಯುನ್ನತ ಪ್ರಶಸ್ತಿಯಾದ **"ಭಾರತರತ್ನ"**ವನ್ನು ಪಡೆದುಕೊಂಡರು.

ಇಂತಹ ಶ್ರೇಷ್ಠ ವ್ಯಕ್ತಿಯ ಜೀವನಗಾಥೆಯೂ ಬಹು ರಂಜಿತವಾಗಿದೆ. ಸರಳ ಜೀವನ, ಶ್ರೇಷ್ಠ ಚಿಂತನೆ ಇವೇ ಅವರ ಜೀವನ ಶೈಲಿಯಾಗಿತ್ತು. ರಾಜಾಜಿಯವರು ಶ್ರೀ ವೈಷ್ಣವ ಸಂಪ್ರದಾಯದ ಬ್ರಾಹ್ಮಣ ಜನಾಂಗದಲ್ಲಿ ಜನ್ಮ ತಾಳಿದವರು. ರಾಜಾಜಿಯವರ ತಾತ ವರದಾಚಾರ್ಯರು.ಒಮ್ಮೆ ಅವರು ಹೊಳೆಯಲ್ಲಿ ಸ್ನಾನ ಮಾಡುವಾಗ ಹೆಣವೊಂದು ತೇಲಿ ಬರುತ್ತಿತ್ತು. ಅನಾಥ ಶವವೆಂದು ತಿಳಿದ ಆಚಾರ್ಯರು ಹಾಗೆ ಬಿಡಬಾರದೆಂದು ಶವವನ್ನು ಬದಿಗೆ ತಂದು ಕಟ್ಟಿಗೆಯಿಂದ ದಹಿಸಿ ಶವಸಂಸ್ಕಾರ ಮಾಡಿದರು. ಅವರು ಶೂದ್ರರ ಶವವನ್ನು ದಹನ ಮಾಡಿದ್ದಾರೆಂದು ಅರ್ಥವಿಲ್ಲದ ಕಂದಾಚಾರ ಅನುಸರಿಸುತ್ತಿದ್ದ ಆ ಊರಿನ ಬ್ರಾಹ್ಮಣರು ಅವರಿಗೆ ಬಹಿಷ್ಕಾರ ಹಾಕಿದರು. ಹಾಗಾಗಿ ಆಚಾರ್ಯರ ತಂದೆಯ ಶ್ರಾದ್ಧದಿನ ಊರ ಯಾವ ಬ್ರಾಹ್ಮಣರು ಬರಲಿಲ್ಲ ಸಹಕರಿಸಲಿಲ್ಲ. ಸಮಯ ಕಳೆಯುತ್ತಿದೆ ಆಗ ಅಪರಿಚಿತ ಬ್ರಾಹ್ಮಣನೊಬ್ಬ ಇವರ ಮನೆಗೆ ಬಂದು ಶ್ರಾದ್ಧ ಕಾರ್ಯ ಮುಗಿಸಿ ಹೊರಟರು.ಹೊರಗೆ ಕಾಯುತ್ತಿದ್ದ ಊರ ಬ್ರಾಹ್ಮಣರು ನೀವು ಯಾರು ನೀವೇಕೆ ಅವರ ಮನೆಗೆ ಬಂದಿರಿ ಎಂದು ವರದಾಚಾರ್ಯರ ಬಗ್ಗೆ ದೂರಿನ ಸುರಿಮಳೆಗೈದರು. ಅದಕ್ಕೆ ಅವರು **"ಇವನ್ ಊರಕ್ಕು ಪೊಲ್ಲಾನ್ ಎನ್ನಕ್ಕು ನಲ್ಲಾನ್"** ಅಂದರೆ ಊರಿಗೆ ಕೆಟ್ಟವನು ನನಗೆ ಒಳ್ಳೆಯವನು ಎಂದರು, ತಾನು ಯಾರೆಂದೂ ಹೇಳದೆ ಹೊರಟುಹೋದರು.ಈ ಬ್ರಾಹ್ಮಣನು ದೈವ ಸಂಕಲ್ಪದಿಂದ ಬಂದವನೆಂದು ಗ್ರಹಿಸಿ, ಊರ ಬ್ರಾಹ್ಮಣರು ವರದಾಚಾರ್ಯರ ಬಗ್ಗೆ ವಿಶೇಷ ಗೌರವದಾರಗಳನ್ನು ಹೊಂದಿ, ನೀನು ನಮ್ಮೆಲ್ಲರ ಅಧಿಕಾರಿಯೆಂದು ಹೇಳಿ ನೀನು ನಮಗೆ ***ಚಕ್ರವರ್ತಿ*** ಎಂದು ತಮಾಷೆ ಮಾಡಿದರು. ಅದು ಹಾಗೆಯೇ ಮುಂದುವರೆದು ರಾಜಾಜಿಯವರು ಸಹ ಚಕ್ರವರ್ತಿ ರಾಜಗೋಪಾಲಾಚಾರಿಯಾದರು.

ಮದರಾಸ್ ಪ್ರಾಂತದ ಸೇಲಂ ಜಿಲ್ಲೆಯ ಹೊಸೂರಿನಿಂದ 5 ಮೈಲಿ ದೂರದಲ್ಲಿ ***ತೋರಪಲ್ಲಿ*** ಎಂಬ ಗ್ರಾಮ. ಆ ಗ್ರಾಮದ ಮುನ್ಸೀಫರಾಗಿದ್ದ, ವೇದ, ಶಾಸ್ತ್ರ, ಪುರಾಣದಲ್ಲಿ ಪಾರಂಗತರಾಗಿದ್ದ ಚಕ್ರವರ್ತಿ ಅಯ್ಯಂಗಾರ್ ಮತ್ತು ಪತ್ನಿ ಶೃಂಗಾರಮ್ಮ ದಂಪತಿಗಳಿಗೆ 10.ಡಿಸೆಂಬರ್ 1878ರಂದು ಜನಿಸಿದವರೇ ರಾಜಾಜಿ.

ರಾಜಾಜಿಯವರು ಪ್ರಾಥಮಿಕ ಶಿಕ್ಷಣವನ್ನು ತನ್ನ ಹುಟ್ಟೂರಲ್ಲೇ ಮುಗಿಸಿ ಹೊಸೂರಿನ ಜಿಲ್ಲಾ ಬೋರ್ಡ್ ಹೈಸ್ಕೂಲ್ ಸೇರಿದರು ಮುಂದೆ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿಎ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮದರಾಸಿನಲ್ಲಿ ಕಾನೂನು ಪದವಿ ಗಳಿಸಿದರು. ಸೇಲಂ ನಲ್ಲಿ ವಕೀಲ ವೃತ್ತಿ ಆರಂಭಿಸಿ ಪ್ರಸಿದ್ಧ ವಕೀಲರಾದರು. 20ನೇ ವರ್ಷದಲ್ಲೇ ಅವರು ಕ್ರಿಮಿನಲ್ ಮೊಕದ್ದಮೆಗಳನ್ನು ಲೀಲಾಜಾಲವಾಗಿ ವಾದಿಸಿ ಗೆಲ್ಲುತ್ತಿದ್ದರು. 20 ವರ್ಷ ವಯಸ್ಸಿನಲ್ಲಿ ಅವರು ಆಲಮೇಲು ಮಂಗಾಳಮ್ಮ ಜೊತೆ ವಿವಾಹವಾದರು.

ವ್ಯಕ್ತಿ ಸಮಾಜ ಜೀವಿ ಸಮಾಜದಿಂದ ಬಹಳ ಪಡೆದುಕೊಂಡಿರುತ್ತಾನೆ ಹಾಗಾಗಿ ಸಮಾಜಕ್ಕೆ ನಾನೇನು ನೀಡಬೇಕು ಎಂದು ಅವರು ಯೋಚಿಸುತ್ತಿರುವಾಗಲೇ 1912 ರಲ್ಲಿ ಸೇಲಂ ನಗರ ಪುರಸಭಾ ಅಧ್ಯಕ್ಷರಾದರು.ಆಗ ಪುರಸಭೆಗೆ ಹೊಸ ಹುರುಪು ಬಂದಿತು. ಹಿರಿಯ ವಯಸ್ಕರಿಗಾಗಿ ಶಾಲೆಯನ್ನು ತೆರೆದರು. ಕಾರ್ಮಿಕರಿಗಾಗಿ ರಾತ್ರಿ ಶಾಲೆ ತೆರೆದರು. ಹರಿಜನರಿಗಾಗಿ ಶಾಲೆ ತೆರೆದರು. ಹರಿಜನರಿಗೆ ನೀರನ್ನು ಒದಗಿಸುವ ವ್ಯವಸ್ಥೆ ಮಾಡಿದರು.

ಕಾಲಕ್ರಮೇಣ ಅವರಿಗೆ ರಾಷ್ಟ್ರನಾಯಕರ ಸಹವಾಸ ಲಭಿಸಿತು. ಚಿದಂಬರಂ ಪಿಳ್ಳೆ, ಸುಬ್ರಮಣ್ಯ ಭಾರತಿ, ಲೋಕಮಾನ್ಯ ಬಾಲಗಂಗಾಧರ ತಿಲಕ್, ಗೋಪಾಲಕೃಷ್ಣ ಗೋಖಲೆ ಮುಂತಾದ ಮಹಾನುಭಾವರ ಸಹವಾಸ ಮತ್ತು ಮಾರ್ಗದರ್ಶನ ಸಿಕ್ಕಿತು. ಸ್ವಾತಂತ್ರ್ಯ ಕಳೆದುಕೊಂಡು ಗುಲಾಮಗಿರಿ ಅನುಭವಿಸುತ್ತಿದ್ದ ಭಾರತೀಯರನ್ನು ಎಚ್ಚರಿಸಲು ಶ್ರಮಿಸುತ್ತಿದ್ದ ನಾಯಕರ ಪ್ರಭಾವ ರಾಜಾಜಿಯವರ ಮೇಲಾಯಿತು. ಕಾರಣಾಂತರದಿಂದ ಬ್ರಿಟಿಷರು ಅನಿಬೆಸೆಂಟ್ ಅವರನ್ನು ಬಂಧಿಸಿದ್ದರು. ಅವರ ಪರವಾಗಿ ನ್ಯಾಯಾಲಯದಲ್ಲಿ ವಾದಿಸಿದರು.ಅನಿಬೆಸೆಂಟರ ಬಿಡುಗಡೆಯಾಯಿತು. ಮಹಾತ್ಮ ಗಾಂಧಿಯವರು ಮದರಾಸಿಗೆ ಬಂದಾಗ ರಾಜಾಜಿಯವರ ಮನೆಯಲ್ಲಿ ತಂಗಿದ್ದರು. ಅವರ ಸಹವಾಸ ಅನುಭವಿಸಿದ ರಾಜಾಜಿ ಗಾಂಧೀಜಿ ನನ್ನ *ಅಂತಃಪ್ರಜ್ಞೆಯ ರಕ್ಷಕ*ಎಂದು ಬಣ್ಣಿಸಿದರು.ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹ ಪ್ರಾರಂಭಿಸಿದಾಗ ರಾಜಾಜಿಯವರು ತಿರುಚನಾಪಲ್ಲಿಯಿಂದ ವೇದಾರಣ್ಯಕ್ಕೆ ಜನರನ್ನು ಪಾದಯಾತ್ರೆಯಲ್ಲಿ ಕರೆದೊಯ್ದಿದ್ದರು. ಸಮುದ್ರ ತೀರವನ್ನು ಸೇರಿ ಉಪ್ಪನ್ನು ತಯಾರಿಸಲು ಪ್ರಾರಂಭಿಸಿದರು. ಆಗ ಸರ್ಕಾರ ಅವರನ್ನು ಬಂಧಿಸಿ ಸೆರೆಮನೆಗೆ ಅಟ್ಟಿತು. ಹೀಗೆ ರಾಜಾಜಿಯವರು ಗಾಂಧೀಜಿಗೆ ಪ್ರತಿ ಹೆಜ್ಜೆಗೂ ಸಾಥ್ ಕೊಡುತ್ತಿದ್ದರು. 1920ರಲ್ಲಿ ಗಾಂಧೀಜಿಯವರು ಅಸಹಕಾರ ಚಳುವಳಿಗೆ ಕರೆ ಕೊಟ್ಟರು. ಕೋರ್ಟು, ಶಾಲೆ, ಕಾಲೇಜು, ಶಾಸನ,ವಿದೇಶಿ ಬಟ್ಟೆ, ಎಲ್ಲವನ್ನೂ ವರ್ಜಿಸಿ ಇಡೀ ದೇಶ ಸಂಪೂರ್ಣ ಅಸಹಕಾರವನ್ನ ಆಚರಿಸಬೇಕೆಂದು ತಿಳಿಸಿದರು. ಲೋಕಮಾನ್ಯ ತಿಲಕರೂ ಸಹ ಇದನ್ನು ಮೆಚ್ಚಿದರು.ಆದರೆ ಭಾಗವಹಿಸಲಾಗದೆ ಅನಾರೋಗ್ಯದಿಂದ ಅವರು ಕಾಲವಾದರು. ಆದರೆ ತಿಲಕರಿಂದ ಬಹುವಾಗಿ ಪ್ರಭಾವಿತರಾದ ರಾಜಾಜಿಯವರು ಅತಿಯಾಗಿ ದುಃಖಿಸಿದರು. ಆದರೆ ಅವರಿಂದಲೇ ಪ್ರೇರಿತರಾಗಿ ರಾಜಾಜಿ ಉದ್ವೇಗದ ಬರದಲ್ಲಿ ಚಳುವಳಿಗೆ ಧುಮುಕಿದರು. ತಮ್ಮ ಎಲ್ಲಾ ಕಾಲವನ್ನು ಚಳುವಳಿಗೆ ಮೀಸಲಾಗಿಟ್ಟರು. ತಮಿಳುನಾಡಿನಲ್ಲೆಲ್ಲ ಸಂಚರಿಸಿ, ಸಂಘಟಿಸಿ ಜನರನ್ನು ಚಳುವಳಿಯಲ್ಲಿ ಧುಮುಕಿಸಿದರು. ಇವರ ಭಾಷಣ ಕೇಳಿದ ಸಹಸ್ರಾರು ವಿದ್ಯಾರ್ಥಿಗಳು ಚಳುವಳಿಯಲ್ಲಿ ಧುಮುಕಿದರು. ಆ ಸಂದರ್ಭದಲ್ಲಿ ಬೆಂಗಳೂರಿಗೂ ಸಹ ಬಂದು ಸಭೆಗಳಲ್ಲಿ ಭಾಷಣ ಮಾಡಿ ಪ್ರೇರೇಪಿಸಿ ಜನರನ್ನು ಚಳುವಳಿಯಲ್ಲಿ ಧುಮುಕುವಂತೆ ಮಾಡಿದರು. ಜನರು ಸೇಲಂ ನಗರದ ರಸ್ತೆ ಮಧ್ಯದಲ್ಲಿ ಬೆಂಕಿ ಹಾಕಿ ವಿದೇಶಿ ಬಟ್ಟೆಗಳನ್ನು ಸುಟ್ಟರು. ಆಗ ರಾಜಾಜಿಯವರು ತಮ್ಮ ವಕೀಲ ವೃತ್ತಿಗೆ ತಿಲಾಂಜಲಿ ನೀಡಿ ವಕೀಲ ಸನ್ನದ್ದುಗಳನ್ನು ಒಳಗೊಂಡ ತಮ್ಮಲ್ಲಿದ್ದ ಎಲ್ಲಾ ಪ್ರಶಸ್ತಿಗಳನ್ನು ಅಗ್ನಿಗೆ ಅರ್ಪಿಸಿದರು. ಡಿಸೆಂಬರ್ 2021 ರಲ್ಲಿ ವೇಲೂರಿನ ಸಭೆಯಲ್ಲಿ ಮಾತನಾಡಲು ಬರುತ್ತಿದ್ದಾಗ ಅವರನ್ನ ಭಾಷಣ ಮಾಡಬಾರದೆಂದು ಸರ್ಕಾರ ನಿರ್ಬಂಧ ಹೇರಿತು. ಆದರೆ ರಾಜಾಜಿ ಅದನ್ನು ಲೆಕ್ಕಿಸದೆ ಭಾಷಣ ಮಾಡಿದರು. ಕೂಡಲೇ ಅವರನ್ನು ಬಂಧಿಸಿ ಮೂರು ತಿಂಗಳು ಸೆರೆವಾಸಕ್ಕೆ ಅಟ್ಟಿದರು. ಸ್ವಾತಂತ್ರ ಹೋರಾಟದ ಜೊತೆಗೆ ಸಾಮಾಜಿಕ ಸುಧಾರಣೆಗೂ ಪ್ರಯತ್ನ ಪಟ್ಟರು.ಮದ್ಯಪಾನದ ವಿರುದ್ಧ

ರಾಜಾಜಿಯವರು ಸಮರ ಸಾರಿದ್ದರು. ಹಳ್ಳಿಯಲ್ಲಿ ಹುಟ್ಟಿ ಬೆಳೆದ ರಾಜಾಜಿಗೆ ಮದ್ಯಪಾನದ ಕೆಟ್ಟ ಪರಿಣಾಮ ಚೆನ್ನಾಗಿಯೇ ತಿಳಿದಿತ್ತು. **"ನಾವು ಕುಡುಕರಾದರೆ ನಮಗೆ ಸಿಗುವ ರಾಜ್ಯ ಮತ್ತೆ ಗುಲಾಮಗಿರಿಯಿಂದ ಕೂಡಿರುತ್ತದೆ"**. ಎಂಬ ಗಾಂಧೀಜಿಯ ಮಾತು ರಾಜಾಜಿಗೆ ನಾಟಿತ್ತು. ಅವರು ಸೇಲಂ ಪುರಸಭಾಧ್ಯಕ್ಷರಾದಾಗಲೇ ಅಲ್ಲಿಯ ಜಿಲ್ಲಾ ಕಮಿಷನರ್ ಅವರನ್ನು ಒಪ್ಪಿಸಿ ಊರಲ್ಲಿದ್ದ ಎಲ್ಲಾ ಮದ್ಯದ ಅಂಗಡಿಗಳನ್ನು ಹೊರಗೆ ಹಾಕಿಸಿದ್ದರು. ಇದು ಅಂದು ದೇಶದಲ್ಲೇ ದೊಡ್ಡ ಸುದ್ದಿಯಾಗಿತ್ತು. ರಾಜಾಜಿಯವರು ಅಸಾಧಾರಣ ಪ್ರತಿಭಾವಂತರು. ಯಾವ ವಿಷಯವನ್ನೇ ಆಗಲಿ ತೀಕ್ಷ್ಣಮತಿಯಿಂದ ಸುಲಭವಾಗಿ ಗ್ರಹಿಸುತ್ತಿದ್ದರು. ಯಾವಾಗಲೂ ಕಾವೀಧಾರಿಗಳಾಗಿ ಸರಳಜೀವನ ಉನ್ನತ ಚಿಂತನೆ ಅವರ ಜೀವನ ಶೈಲಿಯಾಗಿತ್ತು. ದೀನದಲಿತರನ್ನು ಬ್ರಾಹ್ಮಣತ್ವಕ್ಕೆ ಏರಿಸಿದ ಸಂತ ಶ್ರೀ ರಾಮಾನುಜಾಚಾರ್ಯರ ಅನುಯಾಯಿ ಆದ್ದರಿಂದ ದಲಿತಪರವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಮಠ ಮಂದಿರಗಳಿಗೆ ಅವರು ಬರುವಂತೆ ಮಾಡಿದರು. ಅವರಿಗೆ ವಿದ್ಯೆ ಲಭಿಸುವಂಥ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದರು. ಅಂದಿನ ದಿನಗಳಲ್ಲಿ ಹರಿಜನರು ದೇವಸ್ಥಾನಗಳಿಗೆ ಹೋಗುವುದು ನಿಷಿದ್ಧವಾಗಿತ್ತು. ಗಾಂಧೀಜಿ ಹರಿಜನ ಕಲ್ಯಾಣಕ್ಕಾಗಿ ಹರಸಾಹಸ ಪಟ್ಟರು. ಸಮಾಜವು (ಕೇವಲ ಬ್ರಾಹ್ಮಣರಲ್ಲ) ಹರಿಜನರನ್ನು ದೇವಸ್ಥಾನಕ್ಕೆ ಬಿಡುವುದನ್ನು ಸಹಿಸುತ್ತಿರಲಿಲ್ಲ. ಇದರ ವಿರುದ್ಧ ಸೆಟೆದು ನಿಂತ ರಾಜಾಜಿ ಜಗದ್ವಿಖ್ಯಾತವಾದ ಮಧುರೈ, ತಂಜಾವೂರು, ಶ್ರೀರಂಗ ಮೊದಲಾದ ದೇವಾಲಯಗಳಿಗೆ ಪ್ರವೇಶಮಾಡಿಸಲು ಹೋರಾಟ ಮಾಡಿದರು. ಅಲ್ಲದೆ ದೇವಾಲಯಕ್ಕೆ ಹರಿಜನ ಪ್ರವೇಶಕ್ಕೆ ರಕ್ಷಣೆ ನೀಡುವ ಮಸೂದೆಯನ್ನು ತಂದರು. ಕಾನೂನನ್ನು ಮಾಡಿದರು. ಇದರ ವಿರುದ್ಧ ಅನೇಕ ಹಿಂದೂ ಸಂಪ್ರದಾಯಸ್ಥರು ಇಂಗ್ಲೆಂಡಿನಲ್ಲಿದ್ದ ಸುಪ್ರೀಂಕೋರ್ಟಿನಲ್ಲೂ ಕಟ್ಟಳೆ ಹೂಡಿದರು. ಅಲ್ಲಿಯೂ ಸಹ ರಾಜಾಜಿಯವರ ನಿಲುವಿಗೆ ಜಯ ಸಿಕ್ಕಿತು. ಹೀಗೆ ಬಹುಮುಖ ಪ್ರತಿಭೆಯುಳ್ಳ ರಾಜಾಜಿಯವರು ಬರಹಗಾರರು, ವರದಿಗಾರರು, ಅನುವಾದಕರು, ಅಲ್ಲದೆ ಕವಿತ್ವ ಪ್ರತಿಭೆಯೂ ಇತ್ತು. ಭಾರತೀಯ ದಾರ್ಶನಿಕ ಕಥೆಗಳಾದ ರಾಮಾಯಣ, ಮಹಾಭಾರತ, ಭಗವದ್ಗೀತೆ, ಉಪನಿಷತ್ತುಗಳು, ಶಂಕರಾಚಾರ್ಯರ ಭಜಗೋವಿಂದಂ ಮುಂತಾದವುಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿದ್ದಾರೆ. ಹಾಗಾಗಿ ಅನೇಕ ವಿದೇಶಗಳಲ್ಲಿ ಮಾರಾಟವಾಗಿ ನಮ್ಮ ಗ್ರಂಥಗಳ ಪರಿಚಯವಾಯಿತು. ಇವರು ತಮಿಳಿನಲ್ಲಿ ರಚಿಸಿದ ಅನೇಕ ಕವಿತೆಗಳಿಗೆ ಸಂಗೀತ ವಿದುಷಿ ಶ್ರೀಮತಿ ಎಂ ಎಸ್ ಸುಬ್ಬಲಕ್ಷ್ಮಿ ಅವರು ರಾಗ ಸಂಯೋಜಿಸಿ ಹಾಡಿ ಪ್ರಖ್ಯಾತಗೊಳಿಸಿದ್ದಾರೆ. ಹೀಗೆ ಸಾಮಾಜಿಕ, ಕ್ಷೇತ್ರ ರಾಜಕೀಯ ಕ್ಷೇತ್ರ, ವಿದ್ಯಾ ಕ್ಷೇತ್ರ, ಸೇವಾ ಕ್ಷೇತ್ರ, ಕಾನೂನು ಕ್ಷೇತ್ರ, ಸಾಹಿತ್ಯ ಕ್ಷೇತ್ರ, ಆಡಳಿತ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ, ಎಂಟು ದಶಕಗಳ ಕಾಲ ದೇಶಕ್ಕೆ ಸಮಾಜಕ್ಕೆ ಜೀವನ ಸವೆಸಿದರು. ಎಷ್ಟೇ ಅಧಿಕಾರವಿದ್ದರೂ ಅನೈತಿಕತೆ, ಭ್ರಷ್ಟಾಚಾರದ ಲವಲೇಶ ಆಪಾದನೆಯೂ ಇಲ್ಲದೆ ಬಾಳಿ ಅವರ 94ನೇ ವಯಸ್ಸಿನಲ್ಲಿ ದಿನಾಂಕ 25 ಡಿಸೆಂಬರ್ 1972ರಂದು ಭಾರತ ಮಾತೆಯ ಪದತಲದಲ್ಲಿ ತಮ್ಮ ಉಸಿರನ್ನು ಸಮರ್ಪಿಸಿದರು. ಇಂತಹ ವ್ಯಕ್ತಿಯನ್ನು ಪಡೆದ ಭಾರತದೇಶ, ಹಾಗೂ ಬ್ರಾಹ್ಮಣ ಜನಾಂಗ ಧನ್ಯ.

**"ಗರ್ವ್‌ಸೆ ಬೋಲೋ ಹಮ್ ಬ್ರಾಹ್ಮಣ್ ಹೈ"**
**"ಭಾರತ್ ಮಾತಾ ಕಿ ಜೈ"**


**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ರಿ)**

**ಗಾಯಿತ್ರಿ ಭವನ 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.**
**ಮೊ : 944 26771695**

**ವಿಪ್ರನುಡಿ ಪತ್ರಿಕೆಗೆ ಚಂದಾ ಅರ್ಜಿ**

ಹೆಸರು : ____________________

ವಿಳಾಸ ____________________

____________________

ಸದಸ್ಯತ್ವದ ಸಂಖ್ಯೆ : ____________

ದಯಮಾಡಿ ವಿಪ್ರನುಡಿ ಮಾಸ ಪತ್ರಿಕೆ ಕನ್ನಡ/ಇಂಗ್ಲೀಷ್ – ಅವೃತ್ತಿಗೆ ಮೂರುವರ್ಷದ ಚಂದಾ ಹಣ **ರೂ. 500/– (ಕನ್ನಡ) ರೂ 1500 (ಇಂಗ್ಲೀಷ್)** ಗಳನ್ನು ನಗದು/ಚೆಕ್/ಯು.ಪಿ.ಐ. ವರ್ಗಾವಣೆ ಮೂಲಕ ಪಾವತಿಸುತ್ತಿದ್ದೇನೆ.

**ಚಂದಾದಾರರ ಸಹಿ/–**

**AKBMS Membership Account Acc Name :** Akhila Karnataka Brahmana Mahasabha
Bank : Karnataka Bank Ltd A/c No : 1072500102058301I
FSC : KARB0000107BRANCH : BANASHANKARI 2ND STAGE

**ವಿ.ಸೂ. : ಹೆಸರು ವಿಳಾಸ, ಹಣ ಪಾವತಿಸಿದ ದಾಖಲೆ/ಸ್ಕ್ರೀನ್‌ಶಾಟ್/ಯು.ಪಿ.ಐ ಸಂಖ್ಯೆಯನ್ನು ಮೊ.ನಂ. 9945850620 ಸಂಖ್ಯೆಗೆ ವಾಟ್ಸ್ಯಾಪ್ ಕಳುಹಿಸಿ ದೂರವಾಣಿ ಮುಖಾಂತರ ತಿಳಿಸಿ ಚಂದಾದಾರರಾಗಲು ಕೋರಿದೆ.**

## ಮಾಸಾಶನಕ್ಕೆ ಪ್ರಾಯೋಜಕರಾಗಲು ಮನವಿ

**ಸಂಕಷ್ಟದಲ್ಲಿರುವ ಅಶಕ್ತ ವಿಪ್ರ ಬ್ರಾಹ್ಮಣ ಅಂಗವಿಕಲರು ಹಾಗೂ ನೋಡಿಕೊಳ್ಳಲು ಯಾರೂ ಇಲ್ಲದ ೬೦ ವರ್ಷಕ್ಕೆ ಮೇಲ್ಪಟ್ಟ ವೃದ್ಧ ಬ್ರಾಹ್ಮಣರಿಗೆ ಪ್ರತಿ ತಿಂಗಳು ೫೦೦ ರೂ.ಗಳನ್ನು ಮಾಸಾಶನ ಅರ್ಹ ವಿಪ್ರ ವೃದ್ಧರಿಗೆ ಮಹಾಸಭೆಯು ನೀಡುತ್ತಿದೆ. ಸಮಾಜದಲ್ಲಿ ಈ ರೀತಿಯ ಸಂಕಷ್ಟದಲ್ಲಿರುವ ವೃದ್ಧರು ಹಾಗೂ ಅಂಗವಿಕಲರಿಗೆ ಸಶಕ್ತ ಬ್ರಾಹ್ಮಣರು ಸಹಾಯ ಹಸ್ತ ಚಾಚಬೇಕಾಗಿದೆ.**

**ಮಹಾಸಭೆಯ ಮಾಸಾಶನ ಯೋಜನೆಗೆ ಒಂದು ವ್ಯಕ್ತಿಗೆ ವರ್ಷಕ್ಕೆ ೬೦೦೦ ರೂ. ಗಳನ್ನು ನೀಡಿ ಪ್ರಾಯೋಜಕರಾಗಿ ಅಶಕ್ತ ವಿಪ್ರರಿಗೆ ನೆರವಾಗುವಂತೆ ಈ ಮೂಲಕ ಸಶಕ್ತ ವಿಪ್ರರಲ್ಲಿ ವಿನಂತಿ. ಕನಿಷ್ಠ ೬೦೦೦ ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತನೀಡಿ ತಮ್ಮ ತಂದೆ-ತಾಯಿ ಅಥವಾ ಇಷ್ಟಪಟ್ಟವರ ಹೆಸರಿನಲ್ಲಿ ದೇಣಿಗೆ ನೀಡಬಹುದಾಗಿದೆ. ಹೀಗೆ ಪ್ರಾಯೋಜಕರಾದವರನ್ನು ವಿಪ್ರನುಡಿಯಲ್ಲಿ ಪರಿಚಯಿಸಲಾಗುವುದು.**

ಪ್ರಧಾನ ಕಾರ್ಯದರ್ಶಿ
ಅಖಿಲ ಕರ್ನಾಟಕ ಬ್ರಹ್ಮಾಣ ಮಹಾಸಭಾ

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

ಬೆಂಗಳೂರು-70.

**ಮಹಾಸಭೆಯು 60 ವರ್ಷ ಮೇಲ್ಪಟ್ಟ ಅಶಕ್ತ ವಿಪ್ರ ವೃದ್ಧರು ಹಾಗೂ ಅಂಗವಿಕಲರಿಗೆ ನೀಡುತ್ತಿರುವ ಮಾಸಿಕ ಮಾಸಾಶನ ನಿಧಿಗೆ ದೇಣಿಗೆ ನೀಡಿರುವ ವಿಪ್ರ ಮಹನೀಯರು.**

| ಹೆಸರು | ಮೊಬಲಗು |
|---|---|
| ಶ್ರೀಮತಿ ಜಯಗೌರಿ, ಬೆಂಗಳೂರು | 50,000/- |
| ಶ್ರೀ ಜಿ.ಎಸ್. ಬಾಲಗಂಗಾಧರ, ವಕೀಲರು | 6,000/- |
| ಶ್ರೀ ಅನಂತರಾಮು, ವಕೀಲರು | 6,000/- |
| ಶ್ರೀ ಎನ್.ಎಸ್.ನರಸಿಂಹಮೂರ್ತಿ, (ವಿಧಾನಸೌಧ) | 6,000/- |

| ಹೆಸರು | ಮೊಬಲಗು |
|---|---|
| ಶ್ರೀ ಬಿ.ಎನ್. ನಾಗರಾಜ್, ಬೆಂಗಳೂರು | 6,000/- |
| ಶ್ರೀ ಕೆ.ಬಿ. ನಾರಾಯಣಸ್ವಾಮಿ, ವಕೀಲರು | 4,000/- |
| ಶ್ರೀ ಬಿ.ಎನ್. ನಾಗರಾಜ್, ಬೆಂಗಳೂರು | 6,000/- |

***ದೇಣಿಗೆ ನೀಡಿರುವ ಎಲ್ಲಾ ಮಹನೀಯರಿಗೆ ಮಹಾಸಭೆಯ ಅನಂತ ಕೃತಜ್ಞತೆಗಳು.***

**JULY 2023 VIPRANUDI ISSUE**

## MATRIMONY ALLIANCE

Required for A kashapa Smartha Boy - Science Graduate - 38 Years - 5.8"-Fair-Legally Divorced-No Issues, Owning Industry at Mysore - Well Settled .
Suitable Girls - Contact : Mob. : 9845114321, Ph : 080-26674312

ಹಿಂದಿನ ಸಂಚಿಕೆಯಿಂದ

# ದೈವ ಮತ್ತು ಪುರುಷ ಪ್ರಯತ್ನ

## ಕೃಪೆ: ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು

– ಡಾ. ಕೆ. ಎಲ್ ಶಂಕರನಾರಾಯಣ ಜೋಯ್ಸ್

ಇದು ನೆರಳಿಗೆ ಸಂಬಂಧಪಟ್ಟ ವಿಷಯವಾದರೆ, ಚಂದ್ರ ಮೊದಲಾದ ಗ್ರಹಗಳ ಕಕ್ಷೆ ಎಂದರೆ ಅವುಗಳು ಸಂಚರಿಸುವ ನಿಯತವಾದ ಜಾಗದ ವಿಚಾರ. ಅದರ ಪರಿಣಾಮವೇನು? ಹಾಗೂ ಎರಡೂ ಕಕ್ಷೆಗಳು ಒಂದನ್ನೊಂದು ಛೇದಿಸುವ ಜಾಗದಲ್ಲಿ ಇರಬಹುದಾದ ಪರಿಣಾಮವೇನು ಎಂಬುದನ್ನು ಗಮನಿಸುವುದಾದರೆ ರಾಹು ಕೇತುಗಳ ಬಗ್ಗೆ ಒಂದು ಪರಿಚಯವನ್ನು ಮಾಡಿಕೊಳ್ಳಲು ಸಾಧ್ಯವಾಗಬಹುದು. ಒಂದು ಪ್ರದೇಶವನ್ನು ಭೌಗೋಳಿಕವಾಗಿ ಪರಿಶೀಲಿಸಿದರೆ ಕಾಲಾನುಗುಣವಾಗಿ ಇಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಗಾಳಿ ಬೀಸುತ್ತದೆ. ನೈರುತ್ಯದಿಂದ ಈಶಾನ್ಯದ ಕಡೆಗೆ ಮೋಡಗಳು ಸಂಚರಿಸುತ್ತವೆ ಎಂದು ಮೊದಲಾಗಿ ತಿಳಿದು ಬರುವುದುಂಟು. ಆಕಾಶದಲ್ಲಿ ನಿರ್ದಿಷ್ಟವಾದ ಮಾರ್ಗವೇನೂ ರಚಿತವಾಗಿಲ್ಲದಿದ್ದರೂ ಪ್ರತಿವರ್ಷ ಸುಮಾರಾಗಿ ಆ ಮಾರ್ಗದಲ್ಲಿ ವಾಯು ಮೊದಲಾಗಿ ಸಂಚರಿಸುವುದರಿಂದ ಇದು ವಾಯುಮಾರ್ಗವೆಂದು ಅನ್ನಿಸಿಕೊಳ್ಳುತ್ತದೆ. ಪರಿಣಾಮವೂ ಸಹ ಆ ಜಾಗದಲ್ಲಿ ಭೌತಿಕವಾಗಿ ಏರ್ಪಡುತ್ತದೆ. ನೀರು ಒಂದು ದಿಕ್ಕಿನಿಂದ ಇನ್ನೊಂದು ದಿಕ್ಕಿಗೆ ಹರಿಯುವುದರಿಂದ ಅದರದಾದ ಒಂದು ಪರಿಣಾಮ ಭೌತಿಕವಾಗಿರುತ್ತದೆ. ಪಶುಪಕ್ಷಿಸರೀಸೃಪಗಳು ನಿರ್ದಿಷ್ಟವಾಗಿ ಸಂಚರಿಸುವ ಮಾರ್ಗಗಳಿದ್ದರೆ ಅದರ ಪರಿಣಾಮವೂ ಇಲ್ಲದಿಲ್ಲ. ವಾಯುವು ಅದೇ ಮಾರ್ಗದಲ್ಲಿ ಸಂಚರಿಸಲು ಕಾರಣವೇನು? ಭೂಮಿಯ ಭೌಗೋಳಿಕರಚನೆ ಹಾಗೂ ಅದರ ಚಲನೆ ಕಾರಣವೆನ್ನಬಹುದು. ಇದೇ ರೀತಿ ನೀರು ಒಂದು ನಿರ್ದಿಷ್ಟ ಪಾತ್ರದಲ್ಲಿ ಪ್ರವಹಿಸಲು ಸಹ ಭೂಮಿಯ ಇಳಿಜಾರು ಕಾರಣವಾಗಿರುತ್ತದೆ. ಪಶುಪಕ್ಷಿ ಸರೀಸೃಪಗಳು ಸಂಚರಿಸುವುದರಲ್ಲಿ ಇಂತಹ ಒಂದು ಭೌಗೋಳಿಕವಾದ ಸೌಲಭ್ಯ ಕಾರಣವೆಂದೇ ತೋರುತ್ತದೆ. ಇಲ್ಲಿ ಕಾರಣವು ಏನೇ ಆಗಿದ್ದರೂ ಸಹ ಸಂಚಾರದ ಪರಿಣಾಮವು ಆಯಾ ಜಾಗದಲ್ಲಿ ತಪ್ಪಿದ್ದಲ್ಲ.

ಸಂಚಾರದ ಪರಿಣಾಮವೆಂದಾಗ ಅದು ಭೌತಿಕವಾಗಿದ್ದಾಗ ಸುಲಭವಾಗಿ ನಮಗೆ ಮನದಟ್ಟಾಗುವುದು. ಆದರೆ ಸೃಷ್ಟಿಯಲ್ಲಿ ಭೌತಿಕವಲ್ಲದ ಶಕ್ತಿವಲಯಕ್ಕೆ ಸೇರಿದ ಪರಿಣಾಮಗಳೂ ಉಂಟು. ಇದು ಇಂದು ಆಧುನಿಕ ವಿಜ್ಞಾನದ ದೃಷ್ಟಿಯಿಂದಲೂ ಮನದಟ್ಟಾದ ವಿಷಯವೆನ್ನಬಹುದು. ಆಗಾಗ ಪತ್ರಿಕೆಗಳಲ್ಲಿ ದೂರದರ್ಶಕದ ರಿಮೋಟ್ ಕಂಟ್ರೋಲರ್, ಮೊಬೈಲ್ ಫೋನ್‌ಗಳ ಧಾರಣೆಯಿಂದ ದೇಹ ಮನಸ್ಸುಗಳ ಮೇಲೆ ಆಗಬಹುದಾದ ಅನನುಕೂಲಕರವಾದ ಪರಿಣಾಮಗಳ ಬಗ್ಗೆ ಓದುತ್ತೇವೆ. ಆದರೆ ಇದು ಒಂದು ಹಂತದ ಪರಿಚಯ ಮಾತ್ರವೇ ವಿನಃ ಸಮಗ್ರ ಪರಿಚಯವಾಗಿಲ್ಲ. ಭಾರತದ ಆರ್ಯಮಹರ್ಷಿಗಳು ಸೂಕ್ಷ್ಮಮತಿಗಳಾಗಿ ಅವರ ಮನೋದೇಹಗಳನ್ನೇ ಪ್ರಯೋಗಾಲಯವನ್ನಾಗಿ ಮಾಡಿಕೊಂಡು ಸೃಷ್ಟಿಯಲ್ಲಿ ಭೌತಿಕವಸ್ತುಗಳ ಹಿಂದೆ ಕೆಲಸ ಮಾಡುತ್ತಿರುವ ಶಕ್ತಿಗಳ ಪರಿಣಾಮವನ್ನು ಬಗೆ ಬಗೆಯಾಗಿ ಗುರುತಿಸಿರುತ್ತಾರೆ. ಅವರ ಶೋಧದ ಹಿನ್ನೆಲೆಯಲ್ಲಿ ಅನೇಕ ನೀತಿ ನಿಬಂಧನೆಗಳೂ ಬೆಳೆದು ಬಂದಿವೆ.

ಪ್ರಾಣಿಪಕ್ಷಿಗಳಾಗಲೀ, ಮಾನವರಾಗಲೀ ಸಂಚರಿಸುವ ಮಾರ್ಗವಿದ್ದರೆ ಆ ಜಾಗದಲ್ಲಿ ಧ್ಯಾನ ತಪಸ್ಸು ಮೊದಲಾದ ಸಾಧನೆಗಳನ್ನು ನಿಷೇಧಿಸಿರುವುದುಂಟು. ಈ ಸಂಚಾರಮಾರ್ಗಗಳು ಒಂದು ವೇಳೆ ಸಂಚಾರಶೂನ್ಯವಾಗಿದ್ದರೂ ಭೌತಿಕವಾಗಿ ಯಾವುದೇ ತೊಡಕುಗಳಿಲ್ಲದಿದ್ದರೂ ಆತ್ಮಸಾಧನೆಗೆ ಅನುಕೂಲಕರವಲ್ಲವೆಂಬುದೇ ನಿರ್ಣಯ. ಯಜ್ಞರೂಪವಾಗಿ ಆಹಾರ ಸೇವಿಸುವ ಕಾರ್ಯಕ್ಕೂ ಸಹ ನಿಷಿದ್ಧ. ತಪಸ್ಸು, ಧ್ಯಾನ, ಯಜ್ಞ ಮೊದಲಾದ ಸಾಧನೆಗಳೆಲ್ಲ ಸತ್ತ್ವಶಕ್ತಿಯ ಜಾಗೃತಿಯಿಂದ ಮಾತ್ರ ಸಾಧ್ಯ. ಸಂಚಾರದ ಪಥವು ವಿಭಿನ್ನವಾದ ರಾಜಸಿಕ ತಾಮಸಿಕ ಶಕ್ತಿಗಳ ಹರಿವೆಗೆ ಆಸರೆ. ಸಾಧಕನಿಗೆ ಚಿತ್ತವಿಕ್ಷೇಪಗಳನ್ನುಂಟುಮಾಡುತ್ತವೆ.

ಸರೀಸೃಪಗಳೂ ಪಶುಪಕ್ಷಿಗಳೂ ಸಂಚರಿಸುವ ಮಾರ್ಗಗಳಲ್ಲೂ ಸಹ ಇಂತಹ ಪರಿಣಾಮಗಳು ಇಲ್ಲದಿಲ್ಲ. ಇದರ ಹಿನ್ನೆಲೆಯಲ್ಲೇ ಗೃಹ, ದೇವಾಲಯ ಮೊದಲಾದವುಗಳ ನಿರ್ಮಾಣಕ್ಕಾಗಿ ಆಯ್ದುಕೊಳ್ಳುವ ನಿವೇಶನದಲ್ಲಿ ನಾಗವೀಥಿ ಇರಬಾರದು ಎಂದು ಮೊದಲಾದ ಅನೇಕ ನಿಯಮಗಳು ಬಂದಿವೆ. ನಾಗವೀಥಿಯೆಂಬುದು ಒಂದು ಶಕ್ತಿಸಂಚಾರದ ಮಾರ್ಗ. ಅಲ್ಲಿ ವಾಸ ಮಾಡುವುದರಿಂದ ಚಿತ್ತಕ್ಷೋಭೆಗೆ ಕಾರಣವಾಗಿ ರಜಸ್ಸು ರೇತಸ್ಸುಗಳ ಮೇಲೆ ವಿಪರಿಣಾಮಗಳುಂಟು. ಇಂತಹ ಮಾರ್ಗಗಳ ಪರಿಣಾಮಗಳನ್ನು ಹಲವು ರೀತಿ ಗುರುತಿಸಿದ್ದಾರೆ.

ಭೌತಿಕವಾಗಿ ಹೀಗೆ ಮಾರ್ಗವೆಂಬುದರಲ್ಲಿ ಶಕ್ತಿಸಂಚಾರದ ಪರಿಣಾಮವಿರುವಂತೆ ಆಕಾಶದಲ್ಲೂ ಸಹ ಗ್ರಹಗಳ ನಿತ್ಯದ ಸಂಚಾರಪಥಗಳಲ್ಲಿ ಅದರದೇ ಆದ ಶಕ್ತಿಯ ಹರಿವೆಯಿದೆ. ಅಂತಹ ಶಕ್ತಿಯ ಹರಿವೆಯನ್ನು ಗುರುತಿಸಿ ಎರಡು ಪಥಗಳು ಸೇರಿಸುವ ಛೇದ ಬಿಂದುಗಳಲ್ಲಿ ರಾಹು ಕೇತುವೆಂಬ ವ್ಯವಹಾರವನ್ನು ತಂದಿದ್ದಾರೆ. ಆ ಸ್ಥಾನಗಳಲ್ಲಿ ತಾಮಸಿಕವಾದ ನಡೆಯು ಗೋಚರಿಸುವುದರಿಂದ ಅವುಗಳನ್ನು ತಮೋಗ್ರಹವೆಂದಿದ್ದಾರೆ. ಆ ಛೇದ ಬಿಂದುಗಳನ್ನು ಬಳಸಿಕೊಂಡು ಏರ್ಪಡುವ ಗ್ರಹಣವನ್ನು ರಾಹುಗ್ರಸ್ತ ಕೇತುಗ್ರಸ್ತವೆಂದು ಹೆಸರಿಸಿದ್ದಾರೆ. ಈ ವ್ಯವಹಾರಗಳೆಲ್ಲವೂ ಅವುಗಳ ವಸ್ತುನಿಷ್ಠವಾದ ಸ್ವಭಾವದ ಜೊತೆಗೆ ಜೀವಕೋಟಿಗಳ ಮೇಲೆ ಅವುಗಳು ಸೂಚಿಸುವ ಪರಿಣಾಮಗಳನ್ನು ಅವಲಂಬಿಸಿದೆ.

ಇತ್ತೀಚೆಗೆ ಆಧುನಿಕವಿಜ್ಞಾನವು ತನ್ನ ಶೋಧನೆಯಿಂದ ಪತ್ತೆ ಹಚ್ಚಿರುವ ಯುರೇನಸ್, ನೆಪ್ಚೂನ್ ಪ್ಲೂಟೋಗಳೆಂಬ ಆಕಾಶಕಾಯಗಳ ಬಗ್ಗೆ ಪ್ರಾಚೀನ ಜ್ಯೋತಿಷ ಶಾಸ್ತ್ರದಲ್ಲಿ ಮಾಹಿತಿಗಳಿಲ್ಲವೆಂದು ಆಕ್ಷೇಪಿಸಿರುವುದುಂಟು. ಆಕಾಶಕಾಯಗಳು ಅನೇಕವಿರಬಹುದು. ಆದರೆ ಆಗುಹೋಗುಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಯಾವುದರ ಅವಶ್ಯಕತೆಯಿದೆಯೆಂಬುದು ಮುಖ್ಯ. ಕಾಲಧರ್ಮಜ್ಞಾಪಕವಾದ ಮುಹೂರ್ತ ಹಾಗೂ ಆಗುಹೋಗುಗಳ ನಿರೂಪಣೆಗೆ ಸಹಾಯವಾಗಿರುವ ಅಂಶಗಳನ್ನು ಮಾತ್ರವೇ ಜ್ಯೋತಿರ್ವಿದರು ಸ್ವೀಕರಿಸಿದ್ದಾರೆಂಬುದು ಯುಕ್ತವಾಗಿದೆ. ಇತ್ತೀಚೆಗೆ ಜ್ಯೋತಿಷ್ಕರೆಂದು ಹೆಸರಾಂತರಾದವರೂ ಈ ಆಕಾಶಕಾಯಗಳನ್ನು ಪರಿಗಣಿಸಿ ವ್ಯವಹರಿಸುತ್ತಾರಲ್ಲಾ? ಎಂದರೆ, ಒಂದು ಕಾಲದಲ್ಲಿ ಜ್ಯೋತಿಶ್ಶಾಸ್ತ್ರದಲ್ಲಿ ಕೇವಲ ಮುಹೂರ್ತಕ್ಕೆ ಪ್ರಾಧಾನ್ಯವಿತ್ತು. 'ತಸ್ಮಾದಿದಂ ಕಾಲವಿಧಾನಶಾಸ್ತ್ರಂ ಯೋ ಜ್ಯೋತಿಷಂ ವೇದ ಸವೇದ

ಯಜ್ಞಮ್– ಕಾಲವಿಧಾನಶಾಸ್ತ್ರವಾದ ಜ್ಯೋತಿಷವನ್ನು ಯಾರು ಬಲ್ಲನೋ ಅವನು ಯಜ್ಞವನ್ನು ಬಲ್ಲನು' ಎಂದು ಅದನ್ನು ಎತ್ತಿಹೇಳಿರುವುದುಂಟು. ಆದರೆ ಕಾಲಾಂತರದಲ್ಲಿ ಅವಶ್ಯಕತೆಯ ಮೇಲೆ ಫಲನಿರೂಪಣೆಯೂ ಪ್ರಾಧಾನ್ಯವನ್ನು ಪಡೆದುಕೊಂಡು ಬಂದಿದೆಯೆಂದು ತಿಳಿದು ಬರುತ್ತದೆ. ಫಲನಿರೂಪಣೆಯೇ ಪ್ರಧಾನವಾದಾಗ ಅದಕ್ಕೆ ತಕ್ಕಂತೆ ಮಾಂದಿ ಯಮಕಂಟಕ ಮೊದಲಾದ ಒಂಭತ್ತು ಉಪಗ್ರಹಗಳನ್ನೂ ವಿಶೇಷವಾಗಿ ಭಾವಿಸಿರುವುದುಂಟು. ಇವುಗಳು ಮೊದಲು ತಿಳಿದಿರಲಿಲ್ಲವೆಂದಲ್ಲ. ಆಯಾ ಕಾಲದ ಅವಶ್ಯಕತೆಯ ಮೇಲೆ ಕೆಲವು ಬೆಳವಣಿಗೆಗಳಾಗಿವೆ.

ಈ ಶಾಸ್ತ್ರದ ಪ್ರಾಮಾಣಿಕತೆಯ ಬಗ್ಗೆ ಸಂದೇಹವನ್ನು ತರುವಂತಹ ಪೂರ್ವಪಕ್ಷಗಳು ಸಾಕಷ್ಟು ಇರಬಹುದು. ಅವುಗಳಲ್ಲಿ ಮುಖ್ಯವಾದವುಗಳನ್ನು ಈ ಹಿಂದೆ ನೆನಪಿಸಿದೆ. ಒಂದೇ ಕ್ಷಣದಲ್ಲಿ ಹುಟ್ಟುವ ರಾಜಕುಮಾರ ಹಾಗೂ ಒಂದು ಕತ್ತೆಗೆ ಒಂದೇ ಜಾತಕವಾಗಿರುವುದರಿಂದ ಜಾತಕದ ಆಗುಹೋಗುಗಳು ಒಂದೇ ಆಗಬೇಕಾಗುತ್ತದೆ ಎಂಬುದು ಒಂದು ಆಕ್ಷೇಪ. ಸಮುದ್ರದಲ್ಲಿ ಸಂಚರಿಸುವ ಒಂದು ದೋಣಿ ಹಾಗೂ ಇನ್ನೊಂದು ಹಡಗು ಒಂದೇ ಸ್ಥಳದಲ್ಲಿದ್ದು ಒಂದೇ ಕಾಲದಲ್ಲಿ ರಭಸದಿಂದ ಬೀಸಿ ಬರುವ ಗಾಳಿಗೆ ಸಿಕ್ಕರೆ ಎರಡರ ಮೇಲೂ ಯದ್ಯಪಿ ಗಾಳಿಯು ಪ್ರಭಾವವನ್ನು ಬೀರುವುದಾದರೂ ಪರಿಣಾಮವು ಒಂದೇ ರೂಪವಾಗುವುದಿಲ್ಲ. ಬಹಳ ಭಾರವಾದ ಹಡಗು ಹೆಚ್ಚು ಪ್ರಭಾವಕ್ಕೆ ಒಳಗಾಗದಿರಬಹುದು. ದೋಣಿಯು ಹೆಚ್ಚಿನ ಪ್ರಭಾವಕ್ಕೆ ಸಿಗಬಹುದು. ಅದೇರೀತಿ ಸ್ಥೂಲದೃಷ್ಟಿಯಿಂದ ಒಂದೇ ಕ್ಷಣದಲ್ಲಿ ಹುಟ್ಟುವ ಎರಡು ಜೀವಿಗಳು ತಮ್ಮ ತಮ್ಮ ಹಿಂದಿನ ಜನ್ಮಗಳ ಸಂಸ್ಕಾರಗಳಿಂದಾಗಿ ಭಿನ್ನ ಭಿನ್ನವಾದ ಸ್ವರೂಪಗಳಿಂದ ಕೂಡಿರುವುದರಿಂದ ಹುಟ್ಟಿನ ಕ್ಷಣದಲ್ಲಿ ಸಮಾನವಾದ ಗ್ರಹಗತಿಗಳೇ ಇದ್ದರೂ ಸಹ ಫಲವು ವ್ಯತ್ಯಾಸವಾಗಬೇಕಾಗುತ್ತದೆ. ಈ ಅಂಶವನ್ನು ಜ್ಯೋತಿಶ್ಶಾಸ್ತ್ರವು ಗುರುತಿಸಿ ಕುಲ ಜಾತಿ ವರ್ಣ ಮೊದಲಾದ ಸೃಷ್ಟಿವೈಚಿತ್ರ್ಯಗಳನ್ನು ಅರಿತು ಅದಕ್ಕೆ ತಕ್ಕಂತೆ ಫಲವನ್ನು ನಿರೂಪಿಸಬೇಕೆಂದು ಜ್ಞಾಪಿಸಿದೆ. ಇದಲ್ಲದೆ ಒಂದೇ ಕಾಲ ಒಂದೇ ದೇಶದಲ್ಲಿ ಎರಡು ಘಟನೆಗಳು ನಡೆದಿವೆಯೆಂಬ ಮಾತು ಸ್ಥೂಲಬುದ್ಧಿಗೆ ಅನ್ನಿಸಿದರೂ ಸಹ ಸೂಕ್ಷ್ಮ ಪರಿಶೀಲನೆಯಲ್ಲಿ ಅವುಗಳಲ್ಲಿ ಕಾಲದೇಶಗಳ ವ್ಯತ್ಯಾಸವಿರುತ್ತದೆ. ಈ ವ್ಯತ್ಯಾಸವನ್ನು ಪರಿಗಣಿಸಿ ಚಂದ್ರಕ್ರಿಯಾಫಲ, ಚಂದ್ರವೇಲಾಫಲವೆಂಬುದಾಗಿ ಸೂಕ್ಷ್ಮವಾದ ಕಾಲದ ಪರಿಣಾಮಗಳನ್ನು ಗುರುತಿಸುವ ವ್ಯವಸ್ಥೆಯಿದೆ. ಇಷ್ಟರಮೇಲೂ ಕಾಲದ ಧರ್ಮವು ಅತ್ಯಂತ ಸೂಕ್ಷ್ಮವಾಗಿರುವುದರಿಂದ ಸಂದಿಗ್ಧ ಸ್ಥಿತಿಗಳಲ್ಲಿ ಸ್ಪಷ್ಟತೆಗಾಗಿ ಪ್ರಶ್ನಶಾಸ್ತ್ರವೆಂಬ ಇನ್ನೊಂದು ವಿಭಾಗವು ಜ್ಯೋತಿಷದ ಅಂಗವಾಗಿ ಬೆಳೆದಿದೆ. ಅದರ ಸಹಕಾರದಿಂದ ಅಸ್ಪಷ್ಟವಾದ ವಿಷಯಗಳನ್ನು ಸ್ಪಷ್ಟಗೊಳಿಸಿಕೊಳ್ಳಬಹುದಾಗಿದೆ.

ಅವಳಿ–ಜವಳಿ ಮಕ್ಕಳೇ ಆದರೂ ಅವುಗಳ ಹುಟ್ಟಿನಲ್ಲಿ ಕಾಲತಃ ಅಂತರ ಇರುವುದುಂಟು. ಸಾಮಾನ್ಯವಾಗಿ ಒಂದು ಶಿಶುವಿನ ಅನಂತರ ಇನ್ನೊಂದು ಶಿಶುವು ಪ್ರಸವಿಸುತ್ತದೆ. ಇದಲ್ಲದೇ ಯಾವುದನ್ನು ಹುಟ್ಟಿನ ಕ್ಷಣವೆಂದು ಪರಿಗಣಿಸಬೇಕೆಂಬ ಬಗ್ಗೆಯೂ ಚಿಂತಿಸಬೇಕಾಗಿದೆ. ಜಲೋದಯ, ಶಿರೋದಯ ಭೂಪತನ, ನಾಭಿನಾಳೋಚ್ಛೇದ ಮೊದಲಾಗಿ ಹಲವು ಘಟ್ಟಗಳಲ್ಲಿ ಜನನವು ಘಟಿಸುತ್ತದೆ. ಇವುಗಳಲ್ಲಿ ಹುಟ್ಟಿನ ಕ್ಷಣವು ಯಾವುದು? ಹೊರಜೀವನದ ವ್ಯವಸ್ಥೆಯು ಉಸಿರಾಟವನ್ನು ಅವಲಂಬಿಸಿ ನಡೆಯುವುದರಿಂದ ಹಾಗೂ ಉಸಿರಾಟದ ಮೇಲೆ ಆಯುಷ್ಯದ ಪ್ರಮಾಣವನ್ನು ನಿರ್ಣಯಿಸುವುದರಿಂದ ಪ್ರಥಮ ಉಸಿರಾಟದ ಆರಂಭದಿಂದ ಹುಟ್ಟನ್ನು ಪರಿಗಣಿಸಬೇಕು ಎಂಬುದು ತಜ್ಞರ ನಿರ್ಣಯ. ಹೀಗೆ ಜೀವನದ ಆರಂಭಕಾಲವು ಅತಿ ಸೂಕ್ಷ್ಮವಾಗಿರುವುದರಿಂದ ಅದೆಲ್ಲದರ ಬಗ್ಗೆ ನಿಗವಿರಬೇಕಾಗುತ್ತದೆ. ಆದರೆ ಹೀಗೆ ಸೂಕ್ಷ್ಮವಾದ ಚಿಂತನೆಗಳು ದೇಶದಲ್ಲಿ ಮರೆಯಾಗುತ್ತಿರುವುದರಿಂದ ಪ್ರಶ್ನೆ ಮೊದಲಾದ ವಿಭಾಗಗಳ ಸಮಗ್ರ ಅಧ್ಯಯನವು ನಡೆಯದೇ ಇರುವುದರಿಂದ ಫಲನಿರೂಪಣೆಯಲ್ಲಿ ಏರುಪೇರುಗಳು ಕಂಡುಬರಬಹುದು. ಇಂತಹ ಏರುಪೇರುಗಳಿಗೆ ಜ್ಯೋತಿಶ್ಶಾಸ್ತ್ರವು ಕಾರಣವಾಗಲಾರದು. ಅಧ್ಯಯನದ ಕೊರತೆ ಕಾರಣವಾಗಿರುತ್ತದೆ.

ಇನ್ನು ಇಂದಿನ ಆಧುನಿಕ ವಿಜ್ಞಾನಯುಗದಲ್ಲಿ ಹುಟ್ಟಿನ ಕ್ಷಣವನ್ನೇ ನಮ್ಮ ಇಚ್ಛೆಯಂತೆ ಬದಲಿಸಬಹುದಲ್ಲ! ಎಂದು ಪ್ರಶ್ನಿಸಬಹುದು. ಈ ಹಿಂದೆ ಒಂದು ಲೇಖನದಲ್ಲಿ ಘಟ್ಟಕುಟ್ಟೀಪ್ರಭಾತನ್ಯಾಯ– ವೆಂಬುದಾಗಿ ಒಂದು ವಿಷಯವನ್ನು ನಿರೂಪಿಸಿರುತ್ತೇವೆ.

ಸುಂಕದ ಕಟ್ಟೆಯನ್ನು ತಪ್ಪಿಸಿ ಸುಂಕ ಉಳಿಸುವ ಉದ್ದೇಶದಿಂದ ರಾತ್ರಿಯೆಲ್ಲ ಅಡ್ಡದಾರಿಯಲ್ಲಿ ಚಲಿಸಿ ಕೊನೆಗೆ ಪ್ರಾತಃಕಾಲದ ವೇಳೆಗೆ ಸುಂಕದ ಕಟ್ಟೆಯ ಬಾಗಿಲಿಗೆ ತಿಳಿಯದೇ ಬಂದು ತಲುಪುವಂತೆ ಜೀವನದಲ್ಲಿ ಅನೇಕ ಘಟನೆಗಳು ಘಟಿಸುವುದುಂಟು. ಯಾವ ಒಂದು ಗರ್ಭವು ಎಷ್ಟು ಹೊತ್ತಿಗೆ ಪ್ರಸವಿಸಬೇಕಾಗಿದೆಯೋ ಅಷ್ಟುಹೊತ್ತಿಗೆ ಅದು ಪ್ರಸವಿಸುತ್ತದೆ. ಇದು ಸಾಮಾನ್ಯ ನಿಯಮ. ಒಳ್ಳೆಯ ಸಂತಾನವಾಗಲಿ ಎಂದು ಆಶಿಸುವುದು ಮಾನವಸಹಜ. ಅದಕ್ಕಾಗಿ ಸಕಲಪ್ರಯತ್ನಗಳನ್ನೂ ಸರಿಯಾದ ಕ್ರಮದಲ್ಲಿ ನಿರ್ವಹಿಸುವುದು ಯುಕ್ತವೇ ಆಗಿದೆ. ಅಷ್ಟೆಲ್ಲ ಪ್ರಯತ್ನಗಳ ಮಧ್ಯದಲ್ಲೂ ವಿಧಿಯಂತೆ ನಿಶ್ಚಿತವಾದ ಕಾಲದಲ್ಲೇ ಸಾಮಾನ್ಯವಾಗಿ ಪ್ರಸವವಾಗುತ್ತದೆ! ಹೀಗಾಗುವಲ್ಲಿ ಬಗೆಬಗೆಯಾದ ಹೊರಕಾರಣಗಳು ಗೋಚರಿಸಬಹುದು. ತಂದೆ–ತಾಯಿಗಳು ಪ್ರಸವ ಕಾಲದ ಬಗ್ಗೆ ತಮ್ಮ ಸಲಹೆ ನೀಡಿರಬಹುದು. ಜ್ಯೋತಿಷ್ಕರು ಕಾಲವನ್ನು ಆಯ್ಕೆ ಮಾಡಿರಬಹುದು. ವೈದ್ಯನು ಬುದ್ಧಿಪೂರ್ವಕವಾಗಿಯೋ ಅನಿವಾರ್ಯವಾಗಿಯೋ ಒಂದು ನಿರ್ಣಯಕ್ಕೆ ಬಂದಿರಬಹುದು. ಗರ್ಭಿಣಿಯೇ ಒಂದು ನಿಲುವನ್ನು ಸ್ವೀಕರಿಸಬಹುದು. ಕೆಲವೊಮ್ಮೆ ಇಂತಹ ಯಾರಾದರೊಬ್ಬರ ಅಥವಾ ಹಲವರ ನಿರ್ಣಯದಂತೆ ಪ್ರಸವವಾಗಿದೆಯೆಂದು ಕಂಡುಬಂದರೂ ಅದು ವಿಧಿಯ ನಿರ್ಣಯಕ್ಕೆ ಹೊಂದಿಕೊಂಡ ನಿರ್ಣಯವಾಗಿದೆ, ಅಷ್ಟೆ. ವಿಧಿಯು ತನ್ನ ನಿರ್ಣಯವನ್ನೇ ಬೇರೆ ಬೇರೆಯವರ ಮಾಧ್ಯಮದಿಂದ ಸಾಧಿಸಿದಾಗ ಸಾಮಾನ್ಯ ಬುದ್ಧಿಗೆ ಭ್ರಮೆಯುಂಟಾಗಬಹುದು. ಇದೆಲ್ಲ ನಮ್ಮ ಸಂಕಲ್ಪದಂತೆ ನಡೆದಿದೆ ಎಂಬುದಾಗಿ. ಎಷ್ಟೋ ಸಂದರ್ಭಗಳಲ್ಲಿ ಇದಕ್ಕೆ ವಿಪರೀತವಾಗಿ–ವಿಧಿಯ ಸಂಕಲ್ಪಕ್ಕೆ ವ್ಯತಿರಿಕ್ತವಾಗಿ ಯಾರು ಯಾವುದೇ ತೀರ್ಮಾನಗಳನ್ನು ಸ್ವೀಕರಿಸಿ ಸತತ ಪ್ರಯತ್ನವನ್ನು ನಡೆಸಿದರೂ ಸಹ ಎಲ್ಲ ಪ್ರಯತ್ನವನ್ನೂ ಮೀರಿ ವಿಧಿಯ ಸಂಕಲ್ಪದಂತೆ ಪ್ರಸವವಾಗುವುದುಂಟು.

ವಿಧಿಯ ನಿಯಮವನ್ನು ಅರಿತು ಅದನ್ನು ಅನುಸರಿಸಿ ಇರುವುದರಲ್ಲೇ ಲಾಭ. ಯಥಾಯೋಗ್ಯವಾಗಿ ಒಳ್ಳೆಯದನ್ನು ಸಾಧಿಸಲು ಸೂಕ್ತವಾದ ಪುರುಷಪ್ರಯತ್ನ ಮಾಡುವುದಾದರೆ ಅದು ಯುಕ್ತ. ಅದರಿಂದ ಎಷ್ಟೋ ಅನುಕೂಲಗಳು ಕಂಡು ಬರಬಹುದು. ಅದಕ್ಕೆ ಬದಲಾಗಿ (ದೈವವನ್ನೂ ಧಿಕ್ಕರಿಸಿ) ನಮ್ಮ ಕೇವಲ ಬುದ್ಧಿವಂತಿಕೆ, ಬಲ, ಜ್ಞಾನ ಮೊದಲಾದವುಗಳನ್ನು ಬಳಸಿಕೊಂಡು ನಮ್ಮ ಸಂಕಲ್ಪದಂತೆ ಸಾಧಿಸುತ್ತೇವೆಂದು ಹೊರಟಾಗ ವಿಧಿಯು ನಮ್ಮನ್ನೇ ಮಾಧ್ಯಮವಾಗಿ ಮಾಡಿಕೊಂಡು ತಾನು ವಿಜೃಂಭಿಸುತ್ತದೆ! ಇಂತಹ ಘಟನೆಗಳನ್ನು ವಿಶ್ಲೇಷಣೆ ಮಾಡುವ ಸದ್ಬುದ್ಧಿಯಿರುವುದಾದರೆ ಅದೆಷ್ಟು ಚಮತ್ಕಾರದಿಂದ ವಿಧಿಯು ವಿಜೃಂಭಿಸುತ್ತದೆಂಬುದನ್ನು ಅರಿಯಬಹುದಾಗಿದೆ.

# ಸತ್ಯ ಪ್ರಕಾಶ

– ಡಾ। ಪಾವಗಡ ಪ್ರಕಾಶರಾವ್

◆ **ಮಾಯೆ ಎಂದರೇನು ?**

'ಮಾಯೆ' ಇದೊಂದು ಅರ್ಥವಾದಂತೇ ಅದೃಶ್ಯವಾಗುವ, 'ಹೌದು! ಅದೇ ನಿಜ' ಎಂದರಿತರೂ ಅನುಸರಿಸದ, ಮಾಯವಾಗುವ ಅಂದರೆ ಇದ್ದಕ್ಕಿದ್ದಂತೆಯೇ ಕಾಣಿಸದಂತಾಗುವ ಅತ್ಯಂತ ಸುಲಭವಾದ ಅರ್ಥದಿಂದ ಹಿಡಿದು, ಆತ್ಮ ಬಿಟ್ಟು ಮಿಕ್ಕದ್ದೆಲ್ಲ ಮಾಯೆ ಎಂಬ ಸಂಕೀರ್ಣ ಅರ್ಥದವರೆಗೆ ಗೊಂದಲ ಹುಟ್ಟಿಸುವ ಪದ. ಒಬ್ಬೊಬ್ಬ ದಾರ್ಶನಿಕರು ಒಂದೊಂದು ವಿವರಣೆ ಕೊಡುವ ಈ 'ಮಾಯೆ' ನಿಜಕ್ಕೂ ಮಹಾಮಾಯೆ! ವಿವೇಕ ಚೂಡಾಮಣಿಯಲ್ಲಿ ಮಾಯೆಯ ಮುಂದೆ ಮೂಕ ವಿಸ್ಮಿತರಾದ ಮನೀಷಿಗಳು ಬೆಚ್ಚಿಬಿದ್ದಿದ್ದಾರೆ. 'ಏನಿದು? ಯಾವುದಾದರೂ ಆಕಾಶದಿಂದ ಗ್ರಹಿಸೋಣವೇ ಎಂದರೆ ಅದು ರೂಪ ಸಹಿತವೂ ಅಲ್ಲ, ರೂಪ ರಹಿತವೂ ಅಲ್ಲ, ರೂಪ ಸಹಿತ–ರೂಪ ರಹಿತ ಎರಡೂ ಅಲ್ಲದ್ದೂ ಅಲ್ಲ! ಅದೇನು ಈಶ ಶಕ್ತಿಯೋ ಎಂದರೆ ಅದು ಈಶ್ವರನೂ ಅಂಗೋಪಾಂಗಗಳು ಇವೆಯೋ ಎಂದರೆ ಅಂಗ ಸಹಿತವೂ ಅಲ್ಲ, ರಹಿತವೂ ಅಲ್ಲ, ಎರಡನ್ನೂ ಮೀರಿದ್ದೂ ಅಲ್ಲ, ಅದು ಊಹಿಸಲಸಾಧ್ಯವಾದ ಅತ್ಯದ್ಭುತವಾದ, ವಿವರಣೆಗೆ ಸಿಗದ, ನಿರೂಪಣೆ ಮಾಡಲಾಗದ ಒಂದು ವಿಶಿಷ್ಟ ಶಕ್ತಿ!

(ಸನ್ ಅಪಿ ಅಸನ್ ಅಪಿ ಉಭಯಾತ್ಮಿಕಾ ನೋ
ಭಿನ್ನ ಅಪಿ ಅಭಿನ್ನ ಅಪಿ ಉಭಯಾತ್ಮಿಕಾ ನೋ
ಸ ಅಂಗ ಅಪಿ ಅನ್ ಅಂಗ ಅಪಿ ಉಭಯಾತ್ಮಿಕಾ ನೋ
ಮಹಾದ್ಭುತ ಅನಿರ್ವಚನೀಯ ರೂಪಾ)

ಜಗದ್ಗುರುಗಳೇ, ನೀವೇ ಹೀಗೆಂದುಬಿಟ್ಟರೆ ನಮ್ಮಂತಹ ಸಾಮಾನ್ಯರ ಗತಿ ಏನು? ಏನಾದರೂ ಒಂದು ಸೂಚನೆ, ಒಂದು ಕಿರಣ, ಒಂದು ದಾರಿ ತೋರಿಸಿ ಮಾಯೆಯನ್ನರಿಯಲು ಧೀರ ಗಂಭೀರಧ್ವನಿ ಹೊರಟಿತು. ಭಗವದ್ಗೀತೆಯ ಏಳನೆಯ ಅಧ್ಯಾಯದಲ್ಲಿ.

ಸಪ್ತಮಾಧ್ಯಾಯದ ನಾಲ್ಕು ಶ್ಲೋಕಗಳಲ್ಲಿ ಈ ಮಾಯೆಯ ದರ್ಶನ ಮಾಡುವ, ಸತ್ವ–ರಜಸ್ಸು–ತಮಸ್ಸು ಎಂಬ ಮೂರು ಗುಣಗಳು. ಶುದ್ಧ ಮನಸ್ಸು, ಸಾತ್ವಿಕ ಚಿಂತನೆ, ಧರ್ಮ ಕಾರ್ಯಗಳಲ್ಲಿ ಸತ್ವಗುಣ ಫಲಿಸಿದರೆ, ಕೃದ್ಧ ಮನಸ್ಸು, ಕೆಲವು ಚಿಂತನೆ, ರೌದ್ರ, ಕಾರ್ಯಗಳಲ್ಲಿ ರಜೋಗುಣ ಕಂಡರೆ, ಮಂದ ಮನಸ್ಸು, ನಿಧಾನ ಯೋಚನೆ, ಕಪ್ಪು ಕಾರ್ಯಗಳಲ್ಲಿ ತಮೋಗುಣ ವಿಹರಿಸುತ್ತವೆ. ಈ ಮೂರೂ ಗುಣ ನನ್ನಿಂದ ಹುಟ್ಟಿದ್ದು. ಈ ಗುಣಗಳು ನನ್ನಲ್ಲಿ ನನ್ನ ಇಚ್ಛೆಯಂತೆ ಇವೆ. ಆದರೆ ಆ ಗುಣಗಳಲ್ಲಿ ನಾನಿಲ್ಲ!

ಪ್ರಕೃತಿಯ ಮೂಲದ್ರವ್ಯ
(ಯೇ ಚೈವ ಸಾತ್ವಿಕಾ ಭಾವಾ ರಾಜಸಾಸ್ತಾಮಸಾಶ್ಚಯೇ
ಮತ್ತ ಏವೇತಿತಾನ್ ವಿದ್ಧಿನತ್ವಹಂತೇಷುತೇ ಮಯಿ)

ಈ ಮೂರು ಗುಣಗಳೇ ಪ್ರಕೃತಿಗೆ ಕಾರಣ ಎಂದರೆ ಈ ಮೂರು ಗುಣಗಳು ಒಂದರೊಡನೊಂದು ಸೇರಿ, ಪ್ರಕೃತಿಯ ಮೂಲ ದ್ರವ್ಯ ಅಸ್ತಿತ್ವಕ್ಕೆ ಬಂದಿತು ಎಂದರೆ ನಮಗೆ ಕಾಣುತ್ತಿರುವ ಈ ನಮ್ಮ ಪ್ರಾಣಿ ಪ್ರಪಂಚ, ಖಗ ಪ್ರಪಂಚ, ಗಗನ ಪ್ರಪಂಚ, ವನಪ್ರಪಂಚ, ಜಲಪ್ರಪಂಚ, ಭೂಗರ್ಭ ಪ್ರಪಂಚ.. ಒಟ್ಟಿನಲ್ಲಿ ಸಮಸ್ತ ವಿಶ್ವವೂ ಈ ಮೂರು ಗುಣಗಳ ಫಲ.

(ತ್ರಿಭಿರ್ಗುಣ ಮಯ್ಯೈರ್ಭಾವೈಯೇಭಿಃ ಸರ್ವಮಿದಂಜಗತ್) ಈ ಜಗತ್ತನ್ನೇ ಪ್ರಕೃತಿ ಎಂದು ಕರೆದದ್ದು, ಈ ಪ್ರಕೃತಿ ಎಂಬುದು ಎಂಟು ವಿಧಗಳಾಗಿ ವಿಭಜಿಸಲ್ಪಟ್ಟಿದೆ.

ಆ ಎಂಟು ಅಂಗಗಳೇ ಭೂಮಿ, ನೀರು, ಅಗ್ನಿ, ವಾಯು, ಆಕಾಶ, ಮನಸ್ಸು, ಬುದ್ಧಿ ಹಾಗೂ ಅಹಂಕಾರ. ಈ ಎಂಟೂ ಸೇರಿ ಪ್ರಾಣಿಯ ದೇಹೋತ್ಪತ್ತಿ. ಇದನ್ನು ಅಪರಾಪ್ರಕೃತಿ ಎನ್ನುತ್ತಾರೆ. ಇಡೀ ವಿಶ್ವವೇ ಒಂದರ್ಥದಲ್ಲಿ ಅಪರಾ ಪ್ರಕೃತಿ. ಒಂದು ಪುಟ್ಟ ಉದಾಹಣೆಯೆಂದರೆ ನಮ್ಮ ದೇಹ ತೆಗೆದುಕೊಳ್ಳುವ ಈ ಶರೀರದಲ್ಲಿರುವ ಎಲ್ಲ ಅಂಗೋಪಾಂಗಗಳೂ (ರಕ್ತ, ಮಜ್ಜೆ, ಮಾಂಸ, ಮೂಳೆ. . . ಈ ಎಲ್ಲವೂ) ಅಪರಾ ಪ್ರಕೃತಿ, ಅಚೇತನ ಪ್ರಕೃತಿ.

(ಭೂಮಿಯಪೋನಲೋ ವಾಯುಃ ಖಂ ಮನೋಬುದ್ಧಿರೇವಚ
ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟದಾ)

ಈಗ ವಿವರಿಸಿರುವ ಅಪರಾ ಪ್ರಕೃತಿಯಲ್ಲದೇ ಮತ್ತೊಂದು ಪ್ರಕೃತಿಯೂ ಇದೆ. ಇದೇ ಚೈತನ್ಯ ಪ್ರಕೃತಿ. ಇದೇ ಚಲನಶೀಲ ಪ್ರಕೃತಿ. ಈ ಪ್ರಕೃತಿ ಇದ್ದರೇ ಜೀವಜಗತ್ತಿನ ಅಸ್ತಿತ್ವ ಪ್ರಾಣಿಗೆ ಕಣ್ಣು, ಕಿವಿ, ಮೂಗು, ಬಾಯಿ, ಕೈಕಾಲುಗಳು, ಹೃದಯ, ಶ್ವಾಸಕೋಶಗಳು, ಜಠರ, ಪಿತ್ತಜನಕಾಂಗ, ಕರುಳು. . . ಇವೆಲ್ಲ ಅಪರಾ ಪ್ರಕೃತಿಯಾಗಿದ್ದು, ಕೇವಲ ಅಷ್ಟೇ ಇದ್ದರೆ ಅದೊಂದು ಯಂತ್ರ! ಅದೊಂದು ಸ್ತಬ್ಧ ಶರೀರ. ಕಣ್ಣು ಕಾಣಬೇಕಿದ್ದರೆ, ಕಿವಿ ಕೇಳಬೇಕಿದ್ದರೆ, ಮೂಗು ವಾಸನೆ ಹಿಡಿಯಬೇಕಿದ್ದರೆ, ಬಾಯಿ ಮಾತನಾಡಬೇಕಿದ್ದರೆ, ತಿನ್ನಬೇಕಿದ್ದರೆ, ಕೈಕಾಲು ಓಡಾಡಬೇಕಿದ್ದರೆ, ಹೃದಯದಲ್ಲಿ ರಕ್ತ ಸಂಚಾರ ಆಗಬೇಕಿದ್ದರೆ, ಶ್ವಾಸಕೋಶಗಳಲ್ಲಿ ಗಾಳಿ ಸಂಚಾರ ಆಗಬೇಕಿದ್ದರೆ, ಜಠರದಲ್ಲಿ ಜೀರ್ಣವಾಗಲು, ಪಿತ್ತಜನಕಾಂಗದಲ್ಲಿ ಪಿತ್ತರಸ ಹುಟ್ಟಲು, ಕರುಳು ಅನಗತ್ಯವನ್ನು ಹೊರಹಾಕಲು ಈ ಜಡ ಪ್ರಕೃತಿಯ ದೇಹಕ್ಕೆ ಚೈತನ್ಯ ಪ್ರಕೃತಿಯ ಪ್ರವೇಶವಾಗಬೇಕು. ಜಡ ಪ್ರಕೃತಿಯನ್ನು ಆ ಚೇತನ ಪ್ರಕೃತಿ ನಿಯಂತ್ರಿಸಬೇಕು. ಹಾಗಾಗಬೇಕಿದ್ದರೆ ಈ ಶರೀರಕ್ಕೆ 'ಜೀವ' ಪ್ರವೇಶವಾಗಬೇಕು. ಆ ಜೀವವನ್ನೇ 'ಪರಾ' ಪ್ರಕೃತಿ ಎನ್ನುವರು. ಈ ಪರಾ ಪ್ರಕೃತಿಯೇ, ಈ ಜೀವಭಾವವೇ ಇಡೀ ಜಗತ್ತನ್ನ ಧರಿಸಿದೆ. ವ್ಯಕ್ತಿಯ ಮಟ್ಟದಲ್ಲಿ ಆತ್ಮವಾದರೆ, ಜಗತ್ತಿನ ಮಟ್ಟದಲ್ಲಿ ಈ ಪರಾ ಪ್ರಕೃತಿಯೇ ಈಶ್ವರನಾಗಿದೆ. ವ್ಯತ್ಯಾಸ ಇಷ್ಟೇ ಈಶ್ವರನ ಅಧೀನದಲ್ಲಿ ಜಗತ್ತಿರುತ್ತದೆ. ಆದರೆ ಪ್ರಾಣಿ ಸುತ್ತಲ ಜಗತ್ತು, ಜೀವವನ್ನು–ಜೀವದ ಬುದ್ಧಿಯನ್ನು ಬಂಧಿಸಿಬಿಡುತ್ತದೆ.

(ಅಪರೇಯಮಿತಸ್ತ್ವನ್ಯಾಮ್ ಪ್ರಕೃತಿಂ ವಿದ್ದಿಮೇ ಪರಾಂ
ಜೀವಭೂತಾಂಮಹಾಬಾಹೋಯಯೇದಂಧಾರ್ಯತೇಜಗತ್)

ಒಟ್ಟಿನಲ್ಲಿ ಸಾರಾಂಶವೆಂದರೆ ಮೂರು ಗುಣಗಳೇ ಪ್ರಕೃತಿ. ಈ ಪ್ರಕೃತಿ ಎರಡು ವಿಧ. ಒಂದು ಅಪರಾ ಮತ್ತೊಂದು ಪರಾ. ಅಪರಾ ಪ್ರಕೃತಿಯನ್ನೇ ಮಾಯೆ ಎಂದು ಕರೆಯುತ್ತಾರೆ. ನಮ್ಮನ್ನು ಈ ಮೂರು ಗುಣಗಳೇ ಬಂಧಿಸುವುವು ಎಂದರೆ ನಾವು ತ್ರಿಗುಣಗಳಿಂದ ಬಂಧಿತರು. ಈ ಗುಣಗಳಿಂದಲೇ ನಮಗೆ ಸುಖ, ದುಃಖ, ನೋವು, ನಲಿವು, ವಿಶ್ವಾಸ, ಅಪನಂಬಿಕೆ, ಅಪಮಾನ, ಸನ್ಯಾಸ, ದಾರಿದ್ರ್ಯ, ಶ್ರೀಮಂತಿಕೆ. . ಎಲ್ಲವೂ.

ಒಟ್ಟಿನಲ್ಲಿ ಮಾಯೆ ಎಂಬುದು ಪರಮೇಶ್ವರನ ಮತ್ತೊಂದು ರೂಪ. ಅದು ಅವ್ಯಕ್ತ. ಅದೊಂದು ಶಕ್ತಿ. ಆ ಮಾಯಾಶಕ್ತಿ ಈಶ್ವರನ ಅಧೀನದಲ್ಲಿದೆ. ಇದು ಒಂದು ತರಹ ವಿಸ್ತಾರ ಪರೀಕ್ಷಾ ಕಾಲ. ಇದರಲ್ಲಿ ಗೆಲ್ಲುವುದು ಕಷ್ಟ. ಈ ಪರೀಕ್ಷೆಯಲ್ಲಿ ಗೆಲ್ಲಲು ಒಂದೇ ದಾರಿ. ಅದೆಂದರೆ ದೈವದಲ್ಲಿ ಶರಣಾಗತಿ!

## ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

**ಶುಭಾಶಯಗಳೊಂದಿಗೆ**



ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',
ಉತ್ತರಹಳ್ಳಿ–ಕೆಂಗೇರಿ ಮುಖ್ಯರಸ್ತೆ
ಪೂರ್ಣಪ್ರಜ್ಞನಗರ, ಬೆಂಗಳೂರು–560 061.
ದೂ. ಸಂ. 080–26731335, 26731336

**ಬಡಾವಣೆ ವಿವರಗಳು :**

1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061

### ಸಂಘದ ಆಡಳಿತ ಮಂಡಳಿ ಸದಸ್ಯರು

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ವಿ.ಕೆ. | ನಿರ್ದೇಶಕರು | | |

## ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

**ಜಾಹಿರಾತು**

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**

**ದೂರವಾಣಿ : 2672 2267, 98866 55755**

# ನೂತನ ವಿಪ್ರ ಸಚಿವರು ಹಾಗೂ ಶಾಸಕರಿಗೆ ಅಭಿನಂದನಾ ಸಮಾರಂಭ











PERIODICAL RATE

VIPRANUDI KANNADA MONTHLY

RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 24-07-2023 Date of Publishing 22-07-2023

ಶುಭಾಶಯಗಳು

ಡಾ|| ಉದಯ್ ಬಿ. ಗರುಡಾಚಾರ್

ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



Dr. Uday B. Garudachar

MLA, Chickpet Assembly Constituency

/BGUdayBJP www.udaygarudachar.in

If undelivered please return to :

VIPRANUDI

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar